ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 21 ಶುಕ್ರವಾರ 2022

₹4

ದೂರವಾಣಿ: 2496520, 2496521, 2496526, 2496527, 2496528. ಜಾಹೀರಾತು: 2496522, 2496523
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸಂಪುಟ: 43 | ಸಂಚಿಕೆ: 185 | ಪುಟಗಳು: 10

ಸುದ್ದಿ, ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಅಂಚೆ ಕಚೇರಿಗೆಂದು ಹೋದ ವ್ಯಕ್ತಿ ನಾಪತ್ತೆ



ಮೈಸೂರು, ಅ.20– ಅಂಚೆ ಕಚೇರಿಗೆ ಹೋಗಿ ಬರುವುದಾಗಿ ತಿಳಿಸಿ ಮನೆಯಿಂದ ತೆರಳಿದ 72 ವರ್ಷದ ವೃದ್ಧ ನಾಪತ್ತೆಯಾಗಿರುವುದಾಗಿ ಮೈಸೂರಿನ ಮಂಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಲಷ್ಕರ್ ಮೊಹಲ್ಲಾ, ಚಿಕ್ಕವಕ್ಕಲಗೇರಿ ನಿವಾಸಿ ರಾಮು ಅ.19ರಂದು ಬೆಳಗ್ಗೆ ನೆಹರು ವೃತ್ತದಲ್ಲಿರುವ ಅಂಚೆ ಕಚೇರಿಗೆಂದು ಮನೆಯಿಂದ ಹೊರಹೋದವರು ವಾಪಸ್ಸಾಗಿಲ್ಲ. ಅವರಿಗೆ 10 ವರ್ಷಗಳಿಂದ ಫಿಡ್ಸ್ ಸಮಸ್ಯೆಯಿದ್ದು, ಮಾನಸಿಕ ಸಮಸ್ಯೆಯೂ ಇದೆ. ಅವರು ಸುಮಾರು 5.5 ಅಡಿ ಎತ್ತರವಿದ್ದು, ಬಿಳಿ ಶರ್ಟ್ ಹಾಗೂ ಕಪ್ಪು ಪ್ಯಾಂಟ್ ಧರಿಸಿದ್ದಾರೆ. ಕನ್ನಡ ಹಾಗೂ ಹಿಂದಿ ಮಾತನಾಡುತ್ತಾರೆ. ಮಾತನಾಡುವಾಗ ತೊದಲುತ್ತಾರೆ, ಕುಂಟುತ್ತಾ ನಡೆಯುತ್ತಾರೆ ಎಂದು ರಾಮು ಪುತ್ರ ಪುರುಷೋತ್ತಮ್, ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಇವರ ಬಗ್ಗೆ ಮಾಹಿತಿ ತಿಳಿದರೆ ಪೊಲೀಸ್ ಕಂಟ್ರೋಲ್ ರೂಂ(0821–2418339) ಅಥವಾ ರಾಮು ಅವರ ಪುತ್ರ(ಮೊ.ಸಂ.7795325630)ನಿಗೆ ಮಾಹಿತಿ ನೀಡುವಂತೆ ಕೋರಲಾಗಿದೆ.

ಪುನೀತ್ ಬಗ್ಗೆ ಅವಹೇಳಕಾರಿ ಹೇಳಿಕೆ: ಯುವಕನ ವಿರುದ್ಧ ಎಫ್‌ಐಆರ್ ದಾಖಲು

ಮೈಸೂರು, ಅ.20– ಪವರ್ ಸ್ಟಾರ್ ದಿವಂಗತ ಪುನೀತ್ ರಾಜ್‌ಕುಮಾರ್ ಅವರ ಬಗ್ಗೆ ಅವಹೇಳಕಾರಿಯಾಗಿ ಮಾತನಾಡಿ ವಿಡಿಯೋವನ್ನು ವಾಟ್ಸ್‌ಪ್‌ನಲ್ಲಿ ಹರಿಬಿಟ್ಟ ಯುವಕನ ವಿರುದ್ಧ ಇಲವಾಲ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಮೈಸೂರಿನ ಇಲವಾಲ ಹೋಬಳಿ ಲಿಂಗದೇವರುಕೊಪ್ಪಲಿನ ಮಲ್ಲಿಕಾರ್ಜುನ ಅಲಿಯಾಸ್ ಪುಟ್ಟ ಎಂಬಾತ ಅ.16ರಂದು ಪುನೀತ್ ರಾಜ್‌ಕುಮಾರ್ ಅವರ ಬಗ್ಗೆ ಅವ ಹೇಳಕಾರಿಯಾಗಿ ಮಾತನಾಡಿದ ವಿಡಿಯೋವನ್ನು ಸಾಮಾಜಿಕ ಜಾಲ ತಾಣದಲ್ಲಿ ಹರಿಬಿಟ್ಟಿದ್ದ. ಈ ಸಂಬಂಧ ಮೈಸೂರಿನ ಬನ್ನಿಮಂಟಪ ನಿವಾಸಿ ಪುನೀತ್ ರಾಜ್‌ಕುಮಾರ್ ಸಮಾಜಸೇವಾ ಸಮಿತಿ ಅಧ್ಯಕ್ಷ ಎನ್.ರಾಜು ಅವರು ಅ.17ರಂದು ಇಲವಾಲ ಠಾಣೆಗೆ ದೂರು ನೀಡಿದ್ದರು. ಅದನ್ನು ಎನ್‌ಸಿಆರ್ ಆಗಿ ದಾಖಲಿಸಿಕೊಂಡಿದ್ದ ಪೊಲೀಸರು ಮೈಸೂರಿನ 2ನೇ ಜೆಎಂಎಫ್‌ಸಿ ನ್ಯಾಯಾಲಯದ ಅನುಮತಿ ಪಡೆದು ಭಾರತೀಯ ದಂಡಸಂಹಿತೆ 504ರಂತೆ ಎಫ್‌ಐಆರ್ ದಾಖಲಿಸಿದ್ದಾರೆ.

ವಿಡಿಯೋ ವೈರಲ್ ಆಗುತ್ತಿದ್ದಂತೆಯೇ ಪುನೀತ್ ರಾಜ್ ಕುಮಾರ್ ಅವರ ನೂರಾರು ಅಭಿಮಾನಿಗಳು ಲಿಂಗದೇವರುಕೊಪ್ಪಲಿನಲ್ಲಿರುವ ಪುಟ್ಟನ ಮನೆ ಮುಂದೆ ಪ್ರತಿಭಟನೆ ನಡೆಸಿ, ಆತನನ್ನು ಬಂಧಿಸುವಂತೆ ಆಗ್ರಹಿಸಿದ್ದರು. ಅಪ್ಪು ಅಭಿಮಾನಿಗಳು ಪ್ರತಿಭಟನೆ ನಡೆಸಲು ಬರುವ ಸುಳಿವನ್ನರಿತ ಪುಟ್ಟನ ಕುಟುಂಬದವರು ಮನೆಗೆ ಬೀಗ ಹಾಕಿಕೊಂಡು ಬೇರೆಲ್ಲೋ ಆಶ್ರಯ ಪಡೆದಿದ್ದರು. ಅಪ್ಪು ಅಭಿಮಾನಿಗಳ ಆಕ್ರೋಶ ಕಂಡು ಪುಟ್ಟ, ಪುನೀತ್ ರಾಜ್‌ಕುಮಾರ್ ಅವರ ಭಾವಚಿತ್ರಕ್ಕೆ ಹೂವಿನ ಹಾರ ಹಾಕಿ, ಗಂಧದ ಕಡ್ಡಿ ಹಚ್ಚಿ ಪೂಜಿಸಿದ್ದಲ್ಲದೇ, ಅಪ್ಪು ಕ್ಷಮೆ ಕೇಳಿದ್ದ. ಅಲ್ಲದೇ ಅಪ್ಪು ಅಭಿಮಾನಿಗಳ ಬಳಿಯೂ ಕ್ಷಮೆ ಕೋರಿ ಎರಡೂ ವಿಡಿಯೋಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದ.

ಇಂದು ಬೆಂಗಳೂರು ಅರಮನೆ ಆವರಣದಲ್ಲಿ ಪುನೀತ ಪರ್ವ

● ಅವರ ಮಹತ್ವಾಕಾಂಕ್ಷಿ 'ಗಂಧದ ಗುಡಿ' ಪ್ರಿ ರಿಲೀಸ್ ಇವೆಂಟ್ ● ಸಿಎಂ ಬೊಮ್ಮಾಯಿ ಸೇರಿ ದೇಶದ 500 ವಿವಿಐಪಿಗಳು ಭಾಗಿ



ಬೆಂಗಳೂರು, ಅ.20–ಪವರ್ ಸ್ಟಾರ್ ದಿವಂಗತ ಪುನೀತ್ ರಾಜ್‌ಕುಮಾರ್ ಅವರ ಕನಸಿನ ಕೂಸಾದ 'ಗಂಧದ ಗುಡಿ' ಚಿತ್ರದ ಪ್ರಿ ರಿಲೀಸ್ ಇವೆಂಟ್ ಅನ್ನು 'ಪುನೀತ ಪರ್ವ' ಎಂಬ ಹೆಸರಿನಲ್ಲಿ ನಾಳೆ (ಅ.21) ಸಂಜೆ 6.30ಕ್ಕೆ ಬೆಂಗಳೂರು ಅರಮನೆ ಮೈದಾನದ ಕೃಷ್ಣ ವಿಹಾರದಲ್ಲಿ ಅದ್ದೂರಿಯಾಗಿ ಆಚರಿಸಲಾಗುತ್ತಿದೆ.

ಪುನೀತ್ ರಾಜ್‌ಕುಮಾರ್ ಅವರ ಕೊನೆಯ ಚಿತ್ರವಾದ ಗಂಧದ ಗುಡಿ ಅವರ ಪ್ರಥಮ ವರ್ಷದ ಪುಣ್ಯತಿಥಿಯ ಹಿಂದಿನ ದಿನವಾದ ಅ.28ರಂದು ಬಿಡುಗಡೆಯಾಗಲಿದೆ. ಈ ಚಿತ್ರದ ಪ್ರಿ ರಿಲೀಸ್ ಇವೆಂಟ್ ಪುನೀತ ಪರ್ವ ಕಾರ್ಯಕ್ರಮದ ಮುಂದಾಳತ್ವವನ್ನು ಪುನೀತ್ ಅವರ ಪತ್ನಿ ಅಶ್ವಿನಿ ಪುನೀತ್ ರಾಜ್‌ಕುಮಾರ್ ವಹಿಸಿಕೊಂಡಿದ್ದು, ಇಡೀ ರಾಜ್ ಕುಟುಂಬ ಈ ಕಾರ್ಯಕ್ರಮದಲ್ಲಿ ಚಿತ್ರ ತಂಡದ ಜೊತೆ ಕೈಜೋಡಿಸಿದೆ.

ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೇರಿದಂತೆ ವಿವಿಧ ರಾಜ್ಯಗಳ ಸುಮಾರು 500 ವಿವಿಐಪಿಗಳನ್ನು ಆಹ್ವಾನಿಸಲಾಗಿದೆ. ಪುನೀತ್ ಪರ್ವ ಕಾರ್ಯಕ್ರಮವು ವರ್ಣರಂಜಿತವಾಗಿದ್ದು, ಹಾಡು, ಡ್ಯಾನ್ಸ್ ಎಲ್ಲವೂ ಇರಲಿದೆ. ಕುನಾಲ್ ಗಾಂಜಾವಾಲಾ ಮತ್ತು ಅರ್ಮಾನ್ ಮಲ್ಲಿಕ್ ಅವರ ಗಾಯನವಿರುತ್ತದೆ. ಪ್ರಭುದೇವ ಮತ್ತು ರಮ್ಯ ನೃತ್ಯ ಮಾಡಲಿದ್ದಾರೆ. ಒಟ್ಟಾರೆ ಈ ಕಾರ್ಯಕ್ರಮ ಎಲ್ಲರ ಕಣ್ಣಿಗೆ ಹಬ್ಬದಂತೆ ಇರುತ್ತದೆ ಎಂದು ರಾಘವೇಂದ್ರ ರಾಜಕುಮಾರ್ ತಿಳಿಸಿದ್ದಾರೆ. ಅಪ್ಪು ಯಾರೊಬ್ಬರ ಆಸ್ತಿಯೂ ಅಲ್ಲ, ಆತ ಕರ್ನಾಟಕದ ಆಸ್ತಿ ಎಂದಿರುವ ಅವರು, ಪುನೀತ್ ಸ್ಮರಣಾರ್ಥ ಆಯೋಜಿಸಿರುವ ಪುನೀತ ಪರ್ವ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ಮನವಿ ಮಾಡಿದ್ದಾರೆ. ಈ ಕಾರ್ಯಕ್ರಮದಲ್ಲಿ ತೆಲುಗು ನಟರಾದ ಬಾಲಯ್ಯ, ರಾಣಾ ದಗ್ಗುಬಾಟಿ, ತಮಿಳು ನಟರಾದ ಕಮಲಹಾಸನ್, ಸೂರ್ಯ, ಪ್ರಭುದೇವ, ಚಂದನವನದ ಖ್ಯಾತ ನಟರಾದ ಕಿಚ್ಚ ಸುದೀಪ್, ಯಶ್, ಡಾರ್ಲಿಂಗ್ ಕೃಷ್ಣ, ಡಾಲಿ ಕೃಷ್ಣ, ಮೋಹಕ ತಾರೆ ರಮ್ಯಾ ಸೇರಿದಂತೆ ನೂರಾರು ಕಲಾವಿದರು ಭಾಗಿಯಾಗಲಿದ್ದಾರೆ.

ಪುನೀತ್ ಅವರ ಸಹೋದರ ಶಿವ ರಾಜ್‌ಕುಮಾರ್ ಅವರೂ ವೇದಿಕೆಯಲ್ಲಿ ನೃತ್ಯದ ಮೂಲಕ ರಂಜಿಸಲಿದ್ದಾರೆ. ಅಲ್ಲದೇ ಹಲವಾರು ನಟ–ನಟಿಯರು ಸಿನಿಮಾ ಹಾಡುಗಳಿಗೆ ನೃತ್ಯ ಮಾಡುವ ಮೂಲಕ ಕಾರ್ಯಕ್ರಮವನ್ನು ವರ್ಣರಂಜಿತವಾಗಿಸಲಿದ್ದಾರೆ. ಈ ವರ್ಣರಂಜಿತ ಕಾರ್ಯಕ್ರಮದಲ್ಲಿ ಸಾವಿರಾರು ಮಂದಿ ಅಭಿಮಾನಿಗಳು ಪಾಲ್ಗೊಳ್ಳುವ ನಿರೀಕ್ಷೆ ಇರುವುದರಿಂದ ಬೆಂಗಳೂರು ನಗರ ಪೊಲೀಸರು ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಿದ್ದಾರೆ. ಅರಮನೆ ಆವರಣದಲ್ಲಿ 5 ಸಾವಿರ ಕಾರುಗಳು ಪಾರ್ಕಿಂಗ್ ಮಾಡಲು ವ್ಯವಸ್ಥೆ ಕಲ್ಪಿಸಲಾಗಿದೆ.

ಮಳೆಯಿಂದ ಮನೆ ಕುಸಿತ; ಶಾಸಕ ರಾಮದಾಸ್ ಪರಿಶೀಲನೆ



ಮೈಸೂರು, ಅ.20(ಎಸ್‌ಬಿಡಿ)– ನಿರಂತರ ಮಳೆಯಿಂದ ಮೈಸೂರಿನ ಶ್ರೀರಾಂಪುರ ವ್ಯಾಪ್ತಿಯ ದೇವಯ್ಯನಹುಂಡಿಯಲ್ಲಿ ಮನೆ ಕುಸಿದು ಬಿದ್ದಿದ್ದು, ಕೃಷ್ಣರಾಜ ಕ್ಷೇತ್ರದ ಶಾಸಕ ಎಸ್.ಎ.ರಾಮದಾಸ್ ಪರಿಶೀಲಿಸಿದರು.

ಕೆಲ ದಿನಗಳಿಂದ ಮೈಸೂರಿನಲ್ಲಿ ಧಾರಾಕಾರ ಮಳೆ ಸುರಿಯುತ್ತಿರುವ ಪರಿಣಾಮ ದೇವಯ್ಯನಹುಂಡಿ ಚೆನ್ನಮ್ಮ ಅವರ ಮನೆ ನಿನ್ನೆ ಕುಸಿದು ಬಿದ್ದಿದ್ದು, ಅದೃಷ್ಟವಶಾತ್ ಪ್ರಾಣಾಪಾಯ ಸಂಭವಿಸಿಲ್ಲ.

ವಿಷಯ ತಿಳಿದ ಶಾಸಕ ಎಸ್.ಎ.ರಾಮದಾಸ್ ಅವರು ಸ್ಥಳಕ್ಕೆ ದೌಡಾಯಿಸಿ, ಮನೆ ಕಳೆದುಕೊಂಡಿರುವ ಚೆನ್ನಮ್ಮ ಅವರ ಕುಟುಂಬಕ್ಕೆ ಆತ್ಮಸ್ಥೈರ್ಯ ತುಂಬಿದರು.

ಅಲ್ಲದೆ ನಗರ ಪಾಲಿಕೆ ಅಧಿಕಾರಿಗಳನ್ನು ಸ್ಥಳಕ್ಕೆ ಕರೆಸಿ, ಕುಸಿದಿದ್ದ ಮನೆಯ ಮಹಜರ್ ಮಾಡಿಸಿ, ಕೂಡಲೇ ಈ ವರದಿಯನ್ನು ಜಿಲ್ಲಾಧಿಕಾರಿಗಳ ವಿಶೇಷ ಪರಿಹಾರ ವಿಪತ್ತು ವಿಭಾಗಕ್ಕೆ ರವಾನಿಸಲು ಸೂಚಿಸಿದರು. ಹೊಸಮನೆ ನಿರ್ಮಾಣಕ್ಕೆ ಸೂಕ್ತ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಅಧಿಕಾರಿಗಳೊಂದಿಗೆ ಚರ್ಚಿಸಿ ಶೀಘ್ರ ಕ್ರಮ ವಹಿಸುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಸ್ಥಳೀಯ ನಗರ ಪಾಲಿಕೆ ಸದಸ್ಯೆ ಗೀತಾಶ್ರೀ ಯೋಗನಂದ, ಮಾಜಿ ಸದಸ್ಯ ಕೆಂಪಣ್ಣ, ಮುಖಂಡರಾದ ಗಿರೀಶ್, ಸತೀಶ್, ಭರತ್, ಸಾಗರ್, ಮಂಜು, ಸಿದ್ದರಾಜು ಹಾಗೂ ನಗರಪಾಲಿಕೆ ಅಧಿಕಾರಿಗಳು ಹಾಜರಿದ್ದರು.

ಮೈಸೂರಲ್ಲಿ ಮತ್ತೆ ಮಳೆ ಅಬ್ಬರ

ಮೈಸೂರು, ಅ.20(ಜಿಎ)– ಮಳೆಯ ಅಬ್ಬರ ಮೈಸೂರಿನಲ್ಲಿ ಮುಂದುವರೆದಿದ್ದು, ಗುರುವಾರ ರಾತ್ರಿಯೂ ಭಾರೀ ಮಳೆ ಸುರಿಯಿತು.



ಕಳೆದ 2 ದಿನಗಳಿಂದ ಮತ್ತೆ ಮಳೆ ಆರ್ಭಟಿಸುತ್ತಿದೆ. ಇಂದು ರಾತ್ರಿಯೂ 8.30ರ ವೇಳೆಗೆ ಬನ್ನಿಮಂಟಪ, ಉದಯಗಿರಿ, ಹೆಬ್ಬಾಳ್, ವಿಜಯನಗರ, ಜೆಪಿನಗರ, ಶಾರದಾದೇವಿನಗರ, ದಟ್ಟಗಳ್ಳಿ, ತಿಲಕ್‌ನಗರ, ಸರಸ್ವತಿಪುರಂ, ಗೋಕುಲಂ, ಯಾದವಗಿರಿ, ಒಂಟಿಕೊಪ್ಪಲ್, ಮೇಟಗಳ್ಳಿ ಸೇರಿದಂತೆ ನಗರದ ಹಲವೆಡೆ ಗುಡುಗು, ಮಿಂಚು ಸಹಿತ ಮಳೆ ಸುರಿಯಿತು. ಧಾರಾಕಾರ ಮಳೆ ಪರಿಣಾಮ ನಗರದ ಶ್ರೀರಾಂಪುರ, ಗಾಂಧಿನಗರ ಹಾಗೂ ಜಯನಗರದ ಕೆಲ ಮನೆಗಳಿಗೆ ನೀರು ನುಗ್ಗಿ ನಿವಾಸಿಗಳು ಪರಿತಪ್ಪಿಸಿದರು. ವಿಷಯ ತಿಳಿದು ನಗರಪಾಲಿಕೆಯ ಅಭಯ–1ನೇ ತಂಡದವರು ಧಾವಿಸಿ ನೀರನ್ನು ಹೊರ ಹಾಕಿದರು. ಮತ್ತೊಂದೆಡೆ ಸಿದ್ದಾರ್ಥ ಲೇಔಟ್‌ನ ವಿನಯ ಮಾರ್ಗ, ಜಯಲಕ್ಷ್ಮಿಪುರಂ ಮತ್ತು ವಿಜಯನಗರ 1ನೇ ಹಂತದಲ್ಲಿ ಮರಗಳು ಉರುಳಿವೆ. ಕೂಡಲೇ ಅಭಯ ತಂಡ ಅದನ್ನು ತೆರವುಗೊಳಿಸಿದೆ. ಭಾರೀ ಮಳೆಯಿಂದ ನಗರದ ಚಾಮರಾಜಪುರಂ ರೈಲ್ವೇ ನಿಲ್ದಾಣದ ಮೇಲ್ಛಾವಣಿ ಸೋರಿ ಪ್ರಯಾಣಿಕರು ಪರದಾಡುವ ಸ್ಥಿತಿ ನಿರ್ಮಾಣವಾಯಿತು. ಈ ಸಂಬಂಧ ರೈಲ್ವೇ ಇಲಾಖೆ ಹಲವಾರು ಬಾರಿ ಮನವಿ ಸಲ್ಲಿಸಿದರು ಯಾವುದೇ ಪ್ರಯೋಜನವಾಗುತ್ತಿಲ್ಲ ಎಂದು ಪ್ರಯಾಣಿಕರೊಬ್ಬರು ದೂರಿದರು. ರಾತ್ರಿ ಬಹು ಹೊತ್ತಿನವರೆಗೂ ನಿರಂತರವಾಗಿ ಮಳೆ ಸುರಿಯುತ್ತಿತ್ತು.

ಅತಿಥಿ ಉಪನ್ಯಾಸಕರಿಗೆ ಶೀಘ್ರವೇ ಗೌರವ ಧನ ಪಾವತಿಸಿ

ಉನ್ನತ ಶಿಕ್ಷಣ ಸಚಿವರಲ್ಲಿ ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ ಆಗ್ರಹ



ಮೈಸೂರು, ಅ.20 (ಪಿಎಂ)– ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅತಿಥಿ ಉಪನ್ಯಾಸಕರಿಗೆ ಸೆಪ್ಟಂಬರ್ ಮತ್ತು ಅಕ್ಟೋಬರ್ ತಿಂಗಳ ಗೌರವಧನವನ್ನು ಯಾವುದೇ ಕಡಿತ ಮಾಡದೇ ಪೂರ್ಣ ಪ್ರಮಾಣದಲ್ಲಿ ಕೂಡಲೇ ಪಾವತಿಸುವಂತೆ ಸಂಬಂಧಿಸಿದ ಪ್ರಾಂಶುಪಾಲರಿಗೆ ಸೂಕ್ತ ನಿರ್ದೇಶನ ನೀಡಬೇಕೆಂದು ಉನ್ನತ ಶಿಕ್ಷಣ ಸಚಿವರಲ್ಲಿ ದಕ್ಷಿಣ ಶಿಕ್ಷಕರ ಕ್ಷೇತ್ರದ ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ ಆಗ್ರಹಿಸಿದ್ದಾರೆ.

ಕಾಲೇಜು ಶಿಕ್ಷಣ ಇಲಾಖೆ ಆದೇಶದನ್ವಯ (2022ರ ಜ.28) ಇಲಾಖೆಯು ಅತಿಥಿ ಉಪನ್ಯಾಸಕರನ್ನು 2021–22ನೇ ಶೈಕ್ಷಣಿಕ ಸಾಲಿನ 10 ತಿಂಗಳ ಅವಧಿಗೆ ನೇಮಕ ಮಾಡಿಕೊಂಡಿದೆ. ಅದರನ್ವಯ 2022ರ ಸೆಪ್ಟಂಬರ್ ಮತ್ತು ಅಕ್ಟೋಬರ್ ತಿಂಗಳ ಗೌರವಧನ ಬಿಡುಗಡೆ ಮಾಡಿದೆ. ಆದರೆ ಗೌರವಧನ ನೀಡಲು ಪ್ರಾಂಶುಪಾಲರಿಗೆ ಕಾಲೇಜು ಶಿಕ್ಷಣ ಇಲಾಖೆಯು ಸ್ಪಷ್ಟ ನಿರ್ದೇಶನ ನೀಡದ ಕಾರಣ ಪ್ರತಿ ಕಾಲೇಜುಗಳಲ್ಲಿಯೂ ಹಲವು ಸಮಸ್ಯೆಗಳು ಉದ್ಭವಿಸಿವೆ. ಮೌಲ್ಯಮಾಪನ ಸಂದರ್ಭದ ಗೌರವ ಧನವನ್ನು ಅತಿಥಿ ಉಪನ್ಯಾಸಕರಿಗೆ ನೀಡಬಾರದೆಂದು ಉನ್ನತ ಶಿಕ್ಷಣ ಇಲಾಖೆಯು ತಿಳಿಸಿರುವುದಾಗಿ ಪ್ರಾಂಶುಪಾಲರು ಸದರಿ ಗೌರವಧನವನ್ನು ನೀಡುತ್ತಿಲ್ಲ. ಆದರೆ ಈ ಹಿಂದೆ ಯಾವುದೇ ಅತಿಥಿ ಉಪನ್ಯಾಸಕರು ಮೌಲ್ಯಮಾಪನಕ್ಕೆ ತೆರಳಿದರೂ ಆ ಸಂದರ್ಭದ ಗೌರವ ಧನವನ್ನು ಕಡಿತ ಮಾಡದೇ ಉನ್ನತ ಶಿಕ್ಷಣ ಇಲಾಖೆಯು ನೀಡುತ್ತಾ ಬಂದಿದೆ. ಒಂದು ವೇಳೆ ಇಲಾಖೆಯು ಗೌರವ ಧನವನ್ನು ಕಡಿತ ಮಾಡಿದರೆ ಮುಂದಿನ ದಿನಗಳಲ್ಲಿ ಎಲ್ಲಾ ಅತಿಥಿ ಉಪನ್ಯಾಸಕರು ಮೌಲ್ಯಮಾಪನಕ್ಕೆ ತೆರಳುವುದಿಲ್ಲ.

ಅತಿಥಿ ಉಪನ್ಯಾಸಕರು ಮೌಲ್ಯಮಾಪನ ಕಾರ್ಯ ನಿರ್ವಹಿಸಿದರೂ 2022–23ನೇ ಶೈಕ್ಷಣಿಕ ಸಾಲಿಗೆ ಅಂದರೆ 2ನೇ ವರ್ಷಕ್ಕೆ (3ನೇ ಸೆಮಿಸ್ಟರ್) ಪ್ರವೇಶ ಪಡೆದುಕೊಳ್ಳುತ್ತಿರುವ ವಿದ್ಯಾರ್ಥಿಗಳ 2022ರ ಮಾರ್ಚ್/ಏಪ್ರಿಲ್ ನಲ್ಲಿ (ಎನ್‌ಇಪಿ) ನಡೆದ 1ನೇ ಸೆಮಿಸ್ಟರ್ ಪರೀಕ್ಷೆಗಳ ಫಲಿತಾಂಶವನ್ನು 7 ತಿಂಗಳು ಕಳೆದರೂ ನೀಡಲು ಸಾಧ್ಯವಾಗಿಲ್ಲ. ಕೂಡಲೇ ಸದರಿ ಫಲಿತಾಂಶವನ್ನು ನೀಡಬೇಕೆಂದು ಒತ್ತಾಯಿಸಿದ್ದಾರೆ.

ಸರ್ಕಾರದ ಆದೇಶದಂತೆ ಅ.1ರಿಂದ 10ರವರೆಗೆ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಬೋಧಕರಿಗೆ ರಜೆಯನ್ನು ಘೋಷಿಸಲಾಗಿತ್ತು. ಆದರೆ ಅತಿಥಿ ಉಪನ್ಯಾಸಕರಿಗೆ ಸದರಿ ರಜೆಯನ್ನು ನೀಡಲು ಸಾಧ್ಯವಿಲ್ಲವೆಂದು ಪ್ರಾಂಶುಪಾಲರು ಹೇಳಿರುತ್ತಾರೆ. ಹಾಗಾಗಿ ಈ ಅವಧಿಯ ಗೌರವಧನವನ್ನು ನೀಡಬೇಕೆಂದು ಸಂಬಂಧಿಸಿದ ಪ್ರಾಂಶುಪಾಲರಿಗೆ ನಿರ್ದೇಶಿಸಬೇಕು ಎಂದು ಆಗ್ರಹಿಸಿದ್ದಾರೆ.

ಹಾಸನಾಂಬದೇವಿ ದರ್ಶನಕ್ಕಾಗಿ ಸರತಿ ಸಾಲಿನಲ್ಲಿ ನಿಂತಿದ್ದ ವ್ಯಕ್ತಿ ಹೃದಯಾಘಾತದಿಂದ ಸಾವು!

ಹಾಸನ: ಹಾಸನಾಂಬ ದೇವಿಯ ಭಕ್ತರೊಬ್ಬರು ಹೃದಯಾಘಾತದಿಂದ ನಿಧನರಾಗಿದ್ದಾರೆ. ಮೃತರನ್ನು ಚನ್ನರಾಯಪಟ್ಟಣ ತಾಲೂಕಿನ ಬೊಮ್ಮನಹಳ್ಳಿಯ 40 ವರ್ಷದ ಗಿರೀಶ್ ಎಂದು ಗುರುತಿಸಲಾಗಿದೆ. ಹಾಸನಾಂಬ ದೇವಸ್ಥಾನಕ್ಕೆ ಪ್ರವೇಶ ಪಡೆಯಲು ಸರತಿ ಸಾಲಿನಲ್ಲಿ ನಿಂತಿದ್ದಾಗ ಈ ಘಟನೆ ನಡೆದಿದೆ. ಪೊಲೀಸರು ಮತ್ತು ಅಲ್ಲಿ ನರೆದಿದ್ದ ಭಕ್ತ ಸಮೂಹ ಗಿರೀಶ್ ಅವರನ್ನು ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆಗೆ ಸ್ಥಳಾಂತರಿಸಿದರು. ಆದರೆ ಅವರು ಮೃತಪಟ್ಟಿರುವುದಾಗಿ ವೈದ್ಯರು ಘೋಷಿಸಿದರು. ಗುರುವಾರ ಹಾಸನಾಂಬ ದೇವಸ್ಥಾನದಲ್ಲಿ ಹೆಚ್ಚು ಜನರು ಸೇರಿದ್ದರಿಂದ ಪೊಲೀಸರು ಹರಸಾಹಸಪಡಬೇಕಾಯಿತು.



ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಇಲವಾಲ ಹಾಗೂ ಜಯಪುರ ಬ್ಲಾಕ್ ಅಧ್ಯಕ್ಷ ಗೋಪಾಲಪುರದ ಗುರುಸ್ವಾಮಿ ಅವರಿಗೆ ಹುಟ್ಟುಹಬ್ಬದ ಅಂಗವಾಗಿ ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡ, ಜಯಶ್ರೀ ಮರೀಗೌಡ ಅಭಿನಂದಿಸಿ ಶುಭಾಶಯ ಕೋರಿದರು. ಬ್ಲಾಕ್ ಅಧ್ಯಕ್ಷ ಸತೀಶ್‌ಕುಮಾರ್, ಸಿದ್ದರಾಜು(ಎಸ್‌ಸಿ ಜಿಲ್ಲಾಧ್ಯಕ್ಷ), ಹೆಚ್.ಜಿ.ಸ್ವಾಮಿ, ಅರಸನಕೆರೆ ಸ್ವಾಮಿ, ರವಿ, ಮರಿಸಿದ್ದಯ್ಯ, ಶಿವಣ್ಣ, ರಮೇಶ, ರವಿ, ಮಧು, ರಾಜೇಂದ್ರಪ್ರಸಾದ್, ವೆಂಕಟೇಶ್, ಕೇಬಲ್ ರಘು ಇತರರು ಉಪಸ್ಥಿತರಿದ್ದರು.

ದಸರಾ ವಸ್ತುಪ್ರದರ್ಶನದಲ್ಲಿ ರೋಬೋ ಮಂಜೇಗೌಡರ ಜನೋಪಯೋಗಿ ರೋಬೋ ಜೋನ್ ಮಳಿಗೆ ಉದ್ಘಾಟನೆ



ಮೈಸೂರು, ಅ.20 (ಎಸ್‌ಬಿಡಿ)– ರೋಬೋ ಮಂಜೇಗೌಡರು ಸಾರ್ವಜನಿಕ ಉಪಯೋಗಕ್ಕಾಗಿ ಸಿದ್ಧಪಡಿಸಿರುವ ವಿವಿಧ ಯಂತ್ರೋಪಕರಣಗಳ 'ರೋಬೋ ಜೋನ್' ಮಳಿಗೆ ದಸರಾ ವಸ್ತುಪ್ರದರ್ಶನದಲ್ಲಿ ಉದ್ಘಾಟನೆಗೊಂಡಿದೆ.

ಮಂಡ್ಯ ಜಿಲ್ಲೆ, ಕೆ.ಆರ್.ಪೇಟೆ ತಾಲೂಕು ಕೋಮನಹಳ್ಳಿಯ ರೋಬೋ ಮಂಜೇಗೌಡರು ಅನ್ವೇಷಿಸಿರುವ 'ಜೀವ ರಕ್ಷಕ ರೋಬೋ', 'ಸೈನಿಕ ರೋಬೋ', 'ವಾಹನಗಳ ಚಲನೆಯಿಂದ ವಿದ್ಯುತ್ ಉತ್ಪಾದನೆ' ವ್ಯವಸ್ಥೆ ಬಗ್ಗೆ ಪ್ರಾತ್ಯಕ್ಷಿಕೆ ಹಾಗೂ ಮಾಹಿತಿಯನ್ನೊಳಗೊಂಡ ವಿಶೇಷ ಮಳಿಗೆಯನ್ನು ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಜನಜೀವನದಲ್ಲಿ ಯಂತ್ರೋಪಕರಣಗಳ ಬಳಕೆ ಹಾಸುಹೊಕ್ಕಾಗಿದೆ. ಅಡುಗೆ ತಯಾರಿಯಿಂದ ಹಿಡಿದು ಸಾಕಷ್ಟು ಕೆಲಸ ಕಾರ್ಯಗಳಿಗೆ ಯಂತ್ರಗಳನ್ನೇ ಅವಲಂಬಿಸಿದ್ದೇವೆ. ಈ ನಿಟ್ಟಿನಲ್ಲಿ ರೋಬೋ ಮಂಜೇಗೌಡರು ತುರ್ತು ಸಂದರ್ಭಗಳಲ್ಲಿ ರೋಬೋ ಬಳಕೆ ಮಾಡುವ ಬಗ್ಗೆ ಅಧ್ಯಯನ ನಡೆಸಿ, ಸ್ವಯಂ ಪ್ರೇರಿತವಾಗಿ ರೋಬೋ ಸಿದ್ಧಪಡಿಸುವಲ್ಲಿ ನಿರತರಾಗಿದ್ದಾರೆ. ಇವರ ಕಾರ್ಯದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ನಿಟ್ಟಿನಲ್ಲಿ ದಸರಾ ವಸ್ತು ಪ್ರದರ್ಶನದಲ್ಲಿ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ತಿಳಿಸಿದರು.

ರೋಬೋ ಮಂಜೇಗೌಡ ಮಾತನಾಡಿ, ರೈತಾಪಿ ಕುಟುಂಬದವನಾದ ನಾನು ಕೃಷಿ ಚಟುವಟಿಕೆಯಲ್ಲಿ ರೈತರಿಗೆ ಯಂತ್ರೋಪಕರಣಗಳ ಹೇಗೆ ಸಹಾಯಕವಾಗುತ್ತವೆ ಎಂಬುದರ ಬಗ್ಗೆ ಚಿಕ್ಕವಯಸ್ಸಿನಿಂದಲೇ ಪ್ರಯೋಗಗಳನ್ನು ನಡೆಸಿದ್ದೆ. ನಂತರದಲ್ಲಿ ನಿರಂತರ ಪ್ರಯತ್ನದಿಂದ ರೋಬೋ ಸಿದ್ಧಪಡಿಸಿದೆ. 2014ರ ಆಗಸ್ಟ್‌ನಲ್ಲಿ ಬಾದಾಮಿಯ ಸೂಳಿಕೆರೆ ಗ್ರಾಮದಲ್ಲಿ 6 ವರ್ಷದ ಬಾಲಕ ಕೊಳವೆ ಭಾವಿಯಲ್ಲಿ ಸಿಲುಕಿಕೊಂಡಿದ್ದಾಗ 'ಜೀವ ರಕ್ಷಕ ರೋಬೋ' ಮಾಹಿತಿ ನೀಡಿತ್ತು. ಹಾಗೆಯೇ ಈ ರೋಬೋ ಚಿತ್ರರಂಗದ ಸಾಹಸ ಕಲಾವಿದರಾದ ಅನಿಲ್ ಮತ್ತು ಉದಯ್ ಬೆಂಗಳೂರಿನ ತಿಪ್ಪಗೊಂಡನಹಳ್ಳಿ ಕೆರೆಯಲ್ಲಿ ಮುಳಗಿದ ಸಂದರ್ಭದಲ್ಲಿ ದೇಹ ಶೋಧನೆಗೆ ನೆರವಾಗಿತ್ತು. ದೇಶದ ಗಡಿಯಲ್ಲಿ ಸೈನಿಕರಿಗೆ ಸಹಾಯವಾಗಬಲ್ಲ 'ಸೈನಿಕ ರೋಬೋ' ಸಿದ್ಧವಾಗಿದೆ. 'ಗ್ರಾವಿಟೇಷನ್ ಪವರ್ ಸೋರ್ಸ್ ಸಿಸ್ಟಮ್' ಅನ್ವೇಷಿಸಿದ್ದು, ರಸ್ತೆಗಳಲ್ಲಿ ಭಾರೀ ವಾಹನ ಸಂಚಾರದಿಂದ ವಿದ್ಯುತ್ ಉತ್ಪಾದನೆ ಹಾಗೂ ಶೇಖರಣೆ ಇದರಿಂದ ಸಾಧ್ಯವಿದೆ ಎಂದರು. ಈ ಸಂದರ್ಭದಲ್ಲಿ ವೈದ್ಯೆ ವೇದಾವತಿ, ಶಶಿಕಲಾ ಪ್ರಭಾಕರ್, ವೆಂಕಟೇಶ್, ನಿರೂಪಕ ಅಜಯ್ ಶಾಸ್ತ್ರಿ, ನಾಗೇಶ್, ಅನಿಲ್‌ಗೌಡ, ಕುಶಾಲ್ ಮತ್ತಿತರರು ಉಪಸ್ಥಿತರಿದ್ದರು.

ನಾಳೆ 10 ಲಕ್ಷ ಸಿಬ್ಬಂದಿ ನೇಮಕಾತಿ ಅಭಿಯಾನಕ್ಕೆ ಪ್ರಧಾನಿ ಮೋದಿ ಚಾಲನೆ

ನವದೆಹಲಿ: ಪ್ರಧಾನಿ ಮೋದಿ ಅವರು ಅ.22ರಂದು ವಿಡಿಯೋ ಕಾನ್ಫರೆನ್ಸ್ ಮೂಲಕ 10 ಲಕ್ಷ ಸಿಬ್ಬಂದಿ ನೇಮಕಾತಿ ಅಭಿಯಾನಕ್ಕೆ ಚಾಲನೆ ನೀಡಲಿದ್ದಾರೆ.

ರೋಜ್‌ಗಾರ್ ಮೇಳದಲ್ಲಿ ಉದ್ಯೋಗಕ್ಕೆ ಆಯ್ಕೆಯಾದ 75,000 ಮಂದಿಗೆ ಪ್ರಧಾನಿ ಮೋದಿ ನೇಮಕಾತಿ ಪತ್ರಗಳನ್ನು ಹಸ್ತಾಂತರಿಸಲಿದ್ದಾರೆ. 38 ಕೇಂದ್ರ ಸಚಿವಾಲಯಗಳು ಮತ್ತು ಇಲಾಖೆಗಳಿಗೆ 75 ಸಾವಿರ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲಾಗಿದ್ದು, ನೇಮಕಗೊಂಡವರು ಗ್ರೂಪ್–ಎ, ಗ್ರೂಪ್–ಬಿ (ಗೆಜೆಟೆಡ್), ಗ್ರೂಪ್–ಬಿ (ನಾನ್ ಗೆಜೆಟೆಡ್) ಮತ್ತು ಗ್ರೂಪ್–ಸಿ ನಂತಹ ವಿವಿಧ ಹಂತಗಳಲ್ಲಿ ಸೇವೆ ಸಲ್ಲಿಸಲಿದ್ದಾರೆ. ಈ ನೇಮಕಾತಿಗಳನ್ನು ಸ್ವತಃ ಸಚಿವಾಲಯಗಳು ಮತ್ತು ಇಲಾಖೆಗಳು ಅಥವಾ ಯುಪಿಎಸ್‌ಸಿ, ಎಸ್‌ಎಸ್‌ಸಿ ಮತ್ತು ರೈಲ್ವೇ ನೇಮಕಾತಿ ಮಂಡಳಿಯಂತಹ ನೇಮಕಾತಿ ಏಜೆನ್ಸಿಗಳ ಮೂಲಕ ಮಿಷನ್ ಮೋಡ್‌ನಲ್ಲಿ ಆಯ್ಕೆ ಮಾಡಲಾಗುತ್ತಿದೆ.

ಮೈಸೂರು–ಬೆಂಗಳೂರು ಹೆದ್ದಾರಿ ಕಾಮಗಾರಿ: ಮೈಸೂರು, ಮಂಡ್ಯ ಸಂಸದರು ಅಕ್ರಮದಲ್ಲಿ ಭಾಗಿ

ಮಳವಳ್ಳಿ ಶಾಸಕ ಅನ್ನದಾನಿ ಗಂಭೀರ ಆರೋಪ



ಮೈಸೂರು,ಅ.20(ಆರ್‌ಕೆಬಿ)–ಮೈಸೂರು–ಬೆಂಗಳೂರು ಹೈವೇ ಕಾಮಗಾರಿಯಲ್ಲಿ ಭಾರೀ ಪ್ರಮಾಣದ ಅಕ್ರಮಗಳು ನಡೆದಿವೆ. ಮೈಸೂರು, ಮಂಡ್ಯ ಸಂಸದರಿಬ್ಬರೂ ಅಕ್ರಮಗಳಲ್ಲಿ ಭಾಗಿಯಾಗಿದ್ದಾರೆ ಎಂದು ಮಳವಳ್ಳಿ ಶಾಸಕ ಡಾ.ಕೆ.ಅನ್ನದಾನಿ ಇಂದಿಲ್ಲಿ ಗಂಭೀರ ಆರೋಪ ಮಾಡಿದರು.

ಮೈಸೂರಿನ ಚಾಮುಂಡಿಬೆಟ್ಟಕ್ಕೆ ಭೇಟಿ ನೀಡಿದ್ದ ಅವರು, ಮಾಧ್ಯಮಗಳೊಂದಿಗೆ ಮಾತನಾಡಿ, ಮಂಡ್ಯ ಜಿಲ್ಲೆಯ ಜೆಡಿಎಸ್ ಶಾಸಕರಿಗೆ ಸಂಸದೆ ಸುಮಲತಾ ಆಣೆ ಪ್ರಮಾಣಕ್ಕೆ ಪಂಥಾಹ್ವಾನ ಕೊಟ್ಟಿರುವ ವಿಚಾರ ಕುರಿತು ಪ್ರಸ್ತಾಪಿಸಿ, ಕಮಿಷನ್ ಅಂದರೇನು? ಎಂಬುದು ಕಮಿಷನ್ ಪಡೆಯುವವರಿಗೆ ಮಾತ್ರ ಕಮಿಷನ್ ವಿಚಾರ ಗೊತ್ತಿರುತ್ತದೆ. ನನಗೆ ಕಮಿಷನ್ ವಿಚಾರ ಗೊತ್ತಿಲ್ಲ. ಅದರೆ, ಈ ಬಗ್ಗೆ ಮಾತನಾಡಿದವರನ್ನೇ ಕೇಳಿ. ಮೊದಲು ಸುಮಲತಾ ಸಿನಿಮಾ ರಂಗದಲ್ಲಿನ ಹಣ ಬಿಟ್ಟು ಬೇರೆ ಯಾವುದೇ ಹಣ ವನ್ನು ಮುಟ್ಟಿಲ್ಲ ಎಂದು ಪ್ರಮಾಣ ಮಾಡಲಿ ಎಂದು ಸವಾಲೆಸೆದರು.

ಅವರು ಕರೆದ ಕೂಡಲೇ ನಾವು ಯಾಕೆ ಹೋಗಬೇಕು. ಸಂಸದೆಯ ಪಂಥಾಹ್ವಾನಕ್ಕೆ ಶಾಸಕ ರವೀಂದ್ರ ಶ್ರೀಕಂಠಯ್ಯ ಈಗಾಗಲೇ ಉತ್ತರ ಕೊಟ್ಟಿದ್ದಾರೆ. ಅದಕ್ಕೆ ಸುಮಲತಾ ಅವರು ಉತ್ತರ ಕೊಡಲಿ ಎಂದು ಶಾಸಕ ಕೆ.ಅನ್ನದಾನಿ ಆಗ್ರಹಿಸಿದರು.

ನಾಗಮಂಗಲ ಗ್ರಾಪಂ ಸದಸ್ಯ ಸತೀಶ್ ಅವರ ಪತ್ನಿ ಅರುಣಾಕುಮಾರಿ ನಿಧನ



ಹುಣಸೂರು,ಅ.20–ತಾಲೂಕಿನ ನಾಗಮಂಗಲ ಗ್ರಾಮದ ಲೇಟ್ ಮರಿಗೌಡರ ಪುತ್ರ, ಗ್ರಾಪಂ ಸದಸ್ಯ ಎಂ.ಎಂ.ಸತೀಶ್ ಅವರ ಪತ್ನಿ ಶ್ರೀಮತಿ ಅರುಣಾಕುಮಾರಿ(42) ಅವರು ಅನಾರೋಗ್ಯದಿಂದ ಗುರುವಾರ ನಿಧನರಾದರು. ಮೃತರು ಪತಿ, ಪುತ್ರ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ನಾಳೆ(ಅ.21) ಮಧ್ಯಾಹ್ನ 12ಕ್ಕೆ ನಾಗಮಂಗಲ ಗ್ರಾಮದ ಅವರ ಜಮೀನಿನಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಂತಾಪ: ಇವರ ನಿಧನಕ್ಕೆ ಮಾಜಿ ಸಚಿವ ಹಾಗೂ ಹಾಲಿ ಶಾಸಕ ಜಿ.ಟಿ.ದೇವೇಗೌಡ, ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ, ಜಿಪಂ ಮಾಜಿ ಸದಸ್ಯ ಸಿ.ಟಿ. ರಾಜಣ್ಣ ಸೇರಿದಂತೆ ಹಲವು ಗಣ್ಯರು ಸಂತಾಪ ಸೂಚಿಸಿದ್ದಾರೆ.

ಆರ್.ಎಸ್.ಪ್ರದೀಪ್



ಮೈಸೂರು: ಕೆ.ಆರ್.ನಗರದ ಮೈಸೂರು ರಸ್ತೆ ನಿವಾಸಿ ಆರ್.ಬಿ. ಸೋಮಪ್ಪ ಅವರ ಪುತ್ರ ಆರ್.ಎಸ್.ಪ್ರದೀಪ್(68) ಅವರು ಇಂದು ರಾತ್ರಿ ಬೆಂಗಳೂರಲ್ಲಿ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ ಅಪಾರ ಬಂಧುವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಶುಕ್ರವಾರ) ಕೆ.ಆರ್.ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.


ಮೊಹಮದ್ ರಫಿ



ಮೈಸೂರು,ಅ.20–ಮೈಸೂರಿನ ಮುಸ್ಲಿಂ ಕೋ–ಆಪರೇಟಿವ್ ಸೊಸೈಟಿ ಸೆಕ್ಯೂರಿಟಿ ಗಾರ್ಡ್ ಹಾಗೂ ಗಾಯತ್ರಿಪುರಂ ನಿವಾಸಿ ಮೊಹಮದ್ ರಫಿ (58) ಗುರುವಾರ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಜ್ಯೋತಿನಗರದ ಮಸೀದಿಯಲ್ಲಿ ನಮಾಜ್–ಇ–ಜನಾಜ ನಡೆದ ಬಳಿಕ ಟಿಪ್ಪು ಸರ್ಕಲ್‌ನಲ್ಲಿರುವ ಮುಸ್ಲಿಂ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಗಾಂಧಿ ಒಂದು ನೆನಪು, ಪ್ರಸ್ತುತಿ–ಪ್ರೊ.ಎನ್.ವೆಂಕೋಬರಾವ್, 6.40 ಅರಿವಿನ ಶಿಖರ–ಗಾಯನ–ಸಿ.ವಿಶ್ವನಾಥ್, ವ್ಯಾಖ್ಯಾನ–ಡಾ.ಪ್ರದೀಪ್‌ಕುಮಾರ್ ಹೆಬ್ರಿ, 7.15 ಪ್ರಾಯೋಜಿತ ಕಾರ್ಯಕ್ರಮ "ಸಮಗ್ರ ಶಿಕ್ಷಣ ಸಂಚಲನ", 9.00 ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಪ್ರಾಯೋಜಿತ ಆರೋಗ್ಯ ಕಾರ್ಯಕ್ರಮ, 9.30 ಗಾಂಧೀ ಸ್ಮೃತಿ, 10.00 ಹೈದರಾಬಾದ್ ಸಹೋದರರು–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 12.45 ಕಾದಂಬರಿ ವಿಹಾರ–ಡಾ.ಎಸ್.ಎಲ್.ಭೈರಪ್ಪ ನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ–ಉಮೇಶ್ ಎಸ್.ಎಸ್., 1.20 ಭಾವಗೀತೆ–ಸುಧಾ ಕುಲಕರ್ಣಿ, ಶ್ರೀಪಾದ ಹೆಗ್ಡೆ, ಸೀಮಾ ಅಂಗಡಿ, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ–ಜಿ.ಕೆ.ರವೀಂದ್ರ ಕುಮಾರ್, 3.00 ಗಾನರಸೋತ್ತುಂಗ ಶ್ರೀ ಶ್ಯಾಮಶಾಸ್ತ್ರಿಗಳ ರಚನೆಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಸಾಹಿತ್ಯ ಮತ್ತು ನಿರೂಪಣೆ–ಪ್ರೊ. ಆರ್.ವಿಶ್ವೇಶ್ವರನ್, ನಿರ್ಮಾಣ–ಗೀತಾ ರಮಾನಂದ್, 4.00 ಮಹಿಳಾರಂಗ–ಸಖೀ ಸಾಹಿತ್ಯ, 4.30 ವೃತ್ತಿ ಮಾರ್ಗದರ್ಶನ– ಆಟೋಮೊಬೈಲ್ ಇಂಜಿನಿಯರಿಂಗ್ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ. ವಿಕ್ರಮ್ ಆತ್ರೇಯ ಅವರೊಂದಿಗೆ ಮಾತುಕತೆ, 6.50 ಕೃಷಿರಂಗ–ಕಿಸಾನ್‌ವಾಣಿ, ಸಮಗ್ರ ಕೃಷಿಯಲ್ಲಿ ಸಂತೃಪ್ತ ಬದುಕು ಕುರಿತು ಕೃಷಿಕ ದಂಪತಿ ಸಿ.ಪಿ.ಕೃಷ್ಣ ಮತ್ತು ವಿ.ಬಿ.ಮಂಜುಳಾ ಅವರೊಂದಿಗೆ ಮಾತುಕತೆ, 9.00 ರಸಮಂಜರಿ–ತರ್ಕದ ಭಾವವೇನು–ಮಾತನಾಡುತ್ತಾರೆ ವಿ.ಶ್ರೀನಿಧಿ ಪ್ಯಾಟಿ, ಕನ್ನಡವನ್ನು ಪೋಷಿಸಿದ ಸಂಸ್ಕೃತ–ವಿ.ಎಂ.ಎ.ಆಳ್ವಾರ್ ಅವರಿಂದ ಭಾಷಣ, 10.00 ರಂಗಗೀತೆಗಳು, 10.30 ಸವಿನೆನಪು



ಇಂದಿನ ಪಂಚಾಂಗ

21.10.2022 ಶುಕ್ರವಾರ, ಮಳೆ ನಕ್ಷತ್ರ: ಚಿತ್ತ 11.10.2022 ರಿಂದ 23.10.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಆಶ್ವಯುಜ ಮಾಸ,
ಕೃಷ್ಣ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ : ಮಖೆ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ಪೊಲೀಸ್ ಮಹಾನಿರೀಕ್ಷಕರು, ದಕ್ಷಿಣ ವಲಯ, ಕರ್ನಾಟಕ ಪೊಲೀಸ್ ಅಕಾಡೆಮಿ, ಕೆಎಸ್‌ಆರ್‌ಪಿ, ಕೆಎಆರ್‌ಪಿ ಘಟಕ** : ಪೊಲೀಸ್ ಹುತಾತ್ಮರ ದಿನಾಚರಣೆ, ಮುಖ್ಯ ಅತಿಥಿಗಳು : ಮೈಸೂರು ವೃತ್ತ ಅರಣ್ಯ ಸಂರಕ್ಷಣಾಧಿಕಾರಿ ಡಾ. ಮಾಲತಿ ಪ್ರಿಯಾ ಎಂ., ಸ್ಥಳ: ಪೊಲೀಸ್ ಹುತಾತ್ಮರ ಸ್ಮಾರಕ ಉದ್ಯಾನವನ, ಜಿಲ್ಲಾ ಪೊಲೀಸ್ ಕಚೇರಿ ಪಕ್ಕ, ಬೆಳಗ್ಗೆ 8ಕ್ಕೆ.

■ **ರಾಮ್‌ಸನ್ಸ್ ಕಲಾ ಪ್ರತಿಷ್ಠಾನ:** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ. ಬೆಳಗ್ಗೆ 10ರಿಂದ.

■ **ಗೊಂಬೆಗಳ ಪ್ರದರ್ಶನ:** ಕೆ.ಎಸ್.ರಾಘವೇಂದ್ರ ಅವರು ಕೈಯಿಂದ ಮಾಡಿರುವ 170 ಬೊಂಬೆಗಳ ಪ್ರದರ್ಶನ. ಸ್ಥಳ: ಇಂಚರ ಕಲಾ ಕ್ಷೇತ್ರ, ವಿಜಯನಗರ. ಬೆಳಗ್ಗೆ 10ರಿಂದ.

■ **ಕ್ರೆಡಾಯ್ ಮೈಸೂರು** : ರೇರಾ ಕುರಿತು ಜಾಗೃತಿ ಕಾರ್ಯಾಗಾರ, ಮುಖ್ಯ ಅತಿಥಿಗಳು : ರೇರಾ ಕರ್ನಾಟಕ ಅಧ್ಯಕ್ಷ ಹೆಚ್.ಎಸ್. ಕಿಶೋರ್ ಚಂದ್ರ, ಕಾರ್ಯದರ್ಶಿ ಇಬ್ರಾಹಿಂ ಮೈಗೂರ್, ಮುಡಾ ಆಯುಕ್ತ ಜಿ.ಟಿ. ದಿನೇಶ್ ಕುಮಾರ್, ಪಾಲಿಕೆ ಆಯುಕ್ತ ಜಿ. ಲಕ್ಷ್ಮೀಕಾಂತ್ ರೆಡ್ಡಿ, ಗ್ರಾಮೀಣ ಜೆಡಿಟಿಪಿ ಹೆಚ್.ಸುರೇಶ್, ಸ್ಥಳ: ಎಂಬಿಸಿಟಿ ಹಾಲ್, ಅಕ್ಕಮಹಾದೇವಿ ರಸ್ತೆ, ವಿದ್ಯಾರಣ್ಯಪುರಂ, ಬೆಳಗ್ಗೆ 10 ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಮಧುಮೇಹ ತೊಂದರೆಗೆ ಚಿಕಿತ್ಸಾ ಶಿಬಿರ. ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ. ಬೆಳಗ್ಗೆಯಿಂದ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಾಹಿತ್ಯ ಕಲಾಕೂಟ, ಅಮೋಘವರ್ಷ ಅಮೃತವರ್ಷಿಣಿ ಸೇವಾ ಪ್ರತಿಷ್ಠಾನ** : ಇಂದಿರಾ ಐವಿಎಫ್ ಆಸ್ಪತ್ರೆ ವೈದ್ಯರು ಮತ್ತು ಸಿಬ್ಬಂದಿ ವರ್ಗದವರಿಗೆ ಕೃತಜ್ಞತೆ ಹಾಗೂ ಗೌರವ ಸಮರ್ಪಣಾ ಸಮಾರಂಭ, ಉದ್ಘಾಟನೆ: ಜಾನಪದ ವಿದ್ವಾಂಸ ಡಾ. ಪಿ.ಕೆ.ರಾಜಶೇಖರ್, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅಭಿನಂದನೆ: ಇಂದಿರಾ ಐವಿಎಫ್ ಆಸ್ಪತ್ರೆ ಮುಖ್ಯಸ್ಥ ಡಾ. ದಿಲೀಪ್ ಎಚ್.ರಮೇಶ್, ಅಭಿನಂದನಾ ನುಡಿ: ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಪ್ರಾಸ್ತಾವಿಕ ನುಡಿ: ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ. ಚಂದ್ರಶೇಖರ್, ಸ್ಥಳ: ಇಂದಿರಾ ಐವಿಎಫ್ ಆಸ್ಪತ್ರೆ, ಸಬರ್ಬ್ ಬಸ್ ನಿಲ್ದಾಣದ ಹತ್ತಿರ, ಬೆಳಗ್ಗೆ 10.30ಕ್ಕೆ.

■ **ಮಣಿಪಾಲ್ ಆಸ್ಪತ್ರೆ** : ಸಂಕೀರ್ಣ ಮೆದುಳು ಮತ್ತು ಬೆನ್ನು ಮೂಳೆಯ ಶಸ್ತ್ರ ಚಿಕಿತ್ಸೆಯ ಕಟ್ಟುಕಥೆಗಳ ಬಗ್ಗೆ ವಿಚಾರ ಸಂಕಿರಣ, ಭಾಷಣಕಾರರು : ಹಿರಿಯ ಸಲಹೆಗಾರ ಡಾ. ಎ.ಆರ್. ಮಕ್ಸೂದ್ ಅಹಮದ್, ಸ್ಥಳ : ಜಿಲ್ಲಾ ಪತ್ರಕರ್ತರ ಸಂಘ, ಅಗ್ರಹಾರ, ಮಧ್ಯಾಹ್ನ 12 ರಿಂದ.

■ **ಗಾನಭಾರತೀ** : ಸಂಜೆ 6 ರಿಂದ ವಿದ್ವಾನ್ ಶ್ರೀಹರಿ ಭಟ್ ಅವರಿಂದ ಗಾಯನ, ಸಂಜೆ 7.15 ರಿಂದ ವಿದ್ವಾನ್ ರಘು ಸಿಂಹ ಅವರಿಂದ ಕೊಳಲು, ವಿದುಷಿ ಸಿ.ವಿ. ಶೃತಿ–ಪಿಟೀಲು, ವಿದ್ವಾನ್ ಪವನ್ ಮಾಧವ್ ಮಸೂರ್–ಮೃದಂಗ, ವಿದ್ವಾನ್ ಅಜಯ್ ಟಿ.ಎನ್.–ಘಟ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ.

■ **ವಿಎಎಸ್‌ಪಿ ಥಿಯೇಟರ್:** ಕಲಹ ಕುತೂಹಲ ನಾಟಕ ಪ್ರದರ್ಶನ, ರಚನೆ : ಕ್ಷೀರ ಸಾಗರ, ವಿನ್ಯಾಸ ಮತ್ತು ನಿರ್ದೇಶನ: ಗೋಕುಲ್ ಅಯ್ಯರ್, ಸ್ಥಳ: ಕಿರು ರಂಗಮಂದಿರ, ಸಂಜೆ 7ಕ್ಕೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 21 ಶುಕ್ರವಾರ 2022

ಸಂಪುಟ: 43 | ಸಂಚಿಕೆ: 185 | ಪುಟಗಳು: 10

₹4

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

ಒಗ್ಗಟ್ಟಿನಿಂದ ಕೆಲಸ ಮಾಡಿದರೆ
2023ರಲ್ಲಿ ಜೆಡಿಎಸ್‌ಗೆ ಅಧಿಕಾರ

ಸಮಾಲೋಚನಾ ಕಾರ್ಯಾಗಾರದಲ್ಲಿ ಮುಖಂಡರ ಹುರಿದುಂಬಿಸಿ ಮಾತನಾಡಿದ ದೇವೇಗೌಡರು



ಮೈಸೂರು, ಅ.20 (ಆರ್‌ಕೆಬಿ)– ಪ್ರತಿ ಯೊಬ್ಬರೂ ತಮ್ಮ ಶಕ್ತಿಯನ್ನು ಒಗ್ಗೂಡಿಸಿಕೊಂಡು ಒಗ್ಗಟ್ಟಿನಿಂದ ಕೆಲಸ ಮಾಡಿದರೆ 2023ರ ವಿಧಾನಸಭಾ ಚುನಾವಣೆಯಲ್ಲಿ ಜಾತ್ಯತೀತ ಜನತಾದಳ ವನ್ನು ಅಧಿಕಾರಕ್ಕೆ ತರಲು ಸಾಧ್ಯ ಎಂದು ಹೇಳುವ ಮೂಲಕ ಮಾಜಿ ಪ್ರಧಾನಿ, ಜೆಡಿಎಸ್ ವರಿಷ್ಠ ಹೆಚ್.ಡಿ. ದೇವೇಗೌಡರು ಇಂದಿಲ್ಲಿ ಪಕ್ಷದ ಶಾಸಕರು, ಮುಖಂಡರು, ಕಾರ್ಯಕರ್ತರನ್ನು ಹುರಿದುಂಬಿಸಿದರು.

ಮೈಸೂರಿನ ಹೊರವಲಯದ ಖಾಸಗಿ ರೆಸಾರ್ಟ್‌ನಲ್ಲಿ ಗುರುವಾರ ಪಕ್ಷದ ಸಂಭವನೀಯ ಅಭ್ಯರ್ಥಿಗಳು ಹಾಗೂ ಪ್ರಮುಖ ಮುಖಂಡರಿಗಾಗಿ ಆಯೋಜಿಸಿದ್ದ ಸಮಾಲೋಚನಾ ಕಾರ್ಯಾಗಾರದ 2ನೇ ದಿನದ ಕಾರ್ಯಾಗಾರದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ನಿಮ್ಮೊಂದಿಗೆ ನಾನೂ ಇರುತ್ತೇನೆ. ಹೋರಾಟದ ▶ 8ನೇ ಪುಟಕ್ಕೆ

ಅಭೂತಪೂರ್ವ ಸ್ವಾಗತ

"ಹೆಚ್.ಡಿ.ದೇವೇಗೌಡರು ಪಕ್ಷದ ಸಮಾಲೋಚನಾ ಕಾರ್ಯಾಗಾರದಲ್ಲಿ ಭಾಗವಹಿಸಲು ಬರುತ್ತಿದ್ದಂತೆ ಪಕ್ಷದ ಮುಖಂಡರು, ಸಂಭವನೀಯ ಅಭ್ಯರ್ಥಿಗಳು ಹಾಗೂ ಕಾರ್ಯಕರ್ತರು ಅತ್ಯುತ್ಸಾಹದಿಂದ ಜೈಕಾರ ಹಾಕಿ ಅವರನ್ನು ಬರ ಮಾಡಿಕೊಂಡರು. ಅವರು ವೇದಿಕೆ ಏರುತ್ತಿದ್ದಂತೆ ಕಾರ್ಯಕರ್ತರಲ್ಲಿ ನವಚೈತನ್ಯ ಹೊಮ್ಮಿತು. ದೇವೇಗೌಡರನ್ನು ಕುರಿತ ಕಿರುಚಿತ್ರ ಬೃಹತ್ ಪರದೆಯಲ್ಲಿ ಪ್ರಸಾರವಾಗುವಾಗ ಎಲ್ಲರೂ ಎದ್ದು ನಿಂತು ಅವರಿಗೆ ಗೌರವ ಸೂಚಿಸಿದರು. ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಪಕ್ಷದ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ ವೇದಿಕೆಯಲ್ಲಿದ್ದರು.

ಮರಿ ದೇವೇಗೌಡರ ಭೇಟಿಯಾದ ದೊಡ್ಡ ಗೌಡರು!

● ಆತ್ಮೀಯವಾಗಿ ಬರಮಾಡಿಕೊಂಡ ಜಿಟಿಡಿ ಕುಟುಂಬ
● ಜಿಟಿಡಿಯವರ ಮನೆಗೆ ಬಂದು ನನಗೆ ಸಂತೋಷವಾಗಿದೆ: ಹೆಚ್‌ಡಿಡಿ



ಮೈಸೂರು, ಅ.20–ಮಾಜಿ ಪ್ರಧಾನಿ, ಜೆಡಿಎಸ್ ವರಿಷ್ಠ ಹೆಚ್.ಡಿ.ದೇವೇಗೌಡರು ಇಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರ ಮನೆಗೆ ಭೇಟಿ ನೀಡಿದರು. ಈ ವೇಳೆ ಭಾವುಕರಾದ ಜಿ.ಟಿ.ದೇವೇಗೌಡರು ನಾನು ಜೆಡಿಎಸ್ ತೊರೆಯಲ್ಲ ಎಂದು ಘೋಷಿಸಿದರು. ಮೈಸೂರಿನ ಹೊರವಲಯದ ರೆಸಾರ್ಟ್‌ವೊಂದ ರಲ್ಲಿ ನಡೆಯುತ್ತಿರುವ ಜೆಡಿಎಸ್ ಪಂಚರತ್ನ ರಥಯಾತ್ರೆ ಕಾರ್ಯಾಗಾರದಲ್ಲಿ ಪಾಲ್ಗೊಂಡ ನಂತರ ನೇರವಾಗಿ ಒಂಟಿಕೊಪ್ಪಲ್‌ನಲ್ಲಿರುವ ಜಿ.ಟಿ.ದೇವೇ ಗೌಡರ ನಿವಾಸಕ್ಕೆ ಭೇಟಿ ನೀಡಿದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರನ್ನು, ಜಿ.ಟಿ.ದೇವೇಗೌಡರು, ಅವರ ಪತ್ನಿ ಶ್ರೀಮತಿ ಲಲಿತಾ ಜಿ.ಟಿ.ದೇವೇಗೌಡ, ಅವರ ಪುತ್ರ ▶ 8ನೇ ಪುಟಕ್ಕೆ

ನಾನು ಜೆಡಿಎಸ್‌ನಲ್ಲೇ ಇರುತ್ತೇನೆ; ದೇವೇಗೌಡರ ಕನಸು ನನಸು ಮಾಡ್ತೇನೆ: ಜಿಟಿಡಿ ಭಾವುಕ ನುಡಿ

ಮೈಸೂರು, ಅ.20–ಹೆಚ್.ಡಿ.ದೇವೇಗೌಡರಿಗೆ ನನ್ನ ಬಗ್ಗೆ ಅತೀವ ಪ್ರೀತಿ ಇದೆ. ನನ್ನನ್ನು ಮರಿ ದೇವೇಗೌಡ ಎಂದು ಕರೆಯುತ್ತಿದ್ದರು. ನಾನು ಜೆಡಿಎಸ್ ಬಿಟ್ಟು ಹೋಗಲ್ಲ. ಜೆಡಿಎಸ್‌ನಲ್ಲೇ ಇರುತ್ತೇನೆ ಎಂದು ಶಾಸಕ ಜಿ.ಟಿ.ದೇವೇಗೌಡರು ಹೇಳಿದ್ದಾರೆ. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ತಮ್ಮ ನಿವಾಸಕ್ಕೆ ಆಗಮಿಸಿದ ಸಂದರ್ಭ ಭಾವುಕರಾಗಿ ಮಾತನಾಡಿದ ಜಿಟಿಡಿ, ಅವರಿಗೆ (ಹೆಚ್‌ಡಿಡಿ) ನನ್ನ ಮೇಲೆ ಇರುವ ವಿಶ್ವಾಸಕ್ಕೆ ಮನಸ್ಸು ತುಂಬಿ ಬಂದಿದೆ. ಹಿಂದೆ ಹಲವು ಸ್ಥಾನಮಾನಗಳನ್ನು ಹೆಚ್.ಡಿ.ದೇವೇಗೌಡರು ನನಗೆ ನೀಡಿದ್ದರು. 3 ವರ್ಷ ದೂರ ಇದ್ದರೂ, ನನ್ನ ಬಗ್ಗೆ ಅವರಲ್ಲಿನ ಪ್ರೀತಿ ಕಡಿಮೆ ಆಗಿರಲಿಲ್ಲ. ಎಂದೂ ನನ್ನ ಬಗ್ಗೆ ಲಘುವಾಗಿ ಒಂದು ಮಾತನ್ನೂ ಆಡಲಿಲ್ಲ. ಅವರು ಪ್ರಾದೇಶಿಕ ಪಕ್ಷ ಕಟ್ಟಿ ಉಳಿಸಿ ಬೆಳೆಸಿದರು. ಹೆಚ್.ಡಿ. ದೇವೇಗೌಡರು ಕಂಡ ಕನಸನ್ನು ನಾನು ನನಸು ಮಾಡುತ್ತೇನೆ. ಜೆಡಿಎಸ್ ಪಕ್ಷವನ್ನು ಮತ್ತೇ ▶ 8ನೇ ಪುಟಕ್ಕೆ

ನವೆಂಬರ್ 1ರಂದು ಪುನೀತ್ ರಾಜ್‌ಕುಮಾರ್‌ಗೆ ಕರ್ನಾಟಕ ರತ್ನ ಪ್ರಶಸ್ತಿ ಪ್ರದಾನ



ಬೆಂಗಳೂರು, ಅ.20– ಪವರ್ ಸ್ಟಾರ್, ದಿ. ಪುನೀತ್ ರಾಜ್‌ಕುಮಾರ್‌ಗೆ ನವೆಂಬರ್ 1ರಂದು ಕರ್ನಾಟಕ ರತ್ನ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಿಎಂ ಬಸವರಾಜ ಬೊಮ್ಮಾಯಿ ಹೇಳಿದರು. ಇಂದು ಗೃಹ ಕಚೇರಿ ಕೃಷ್ಣಾದಲ್ಲಿ ಪುನೀತ್‌ಗೆ ಕರ್ನಾಟಕ ರತ್ನ ಪ್ರಶಸ್ತಿ ಪ್ರದಾನ ಕುರಿತಂತೆ ಸಭೆ ನಡೆಸಿದ ನಂತರ ಮಾಧ್ಯಮದವರೊಂದಿಗೆ ಮಾತನಾಡಿದ ಸಿಎಂ ಬೊಮ್ಮಾಯಿ, ಎಲ್ಲರ ಮನದಾಳದಲ್ಲಿ ಚಿರಸ್ಥಾಯಿಯಾಗಿ ಉಳಿದಿರುವ ಪುನೀತ್ ನಿಜವಾಗಿಯೂ ಕರ್ನಾಟಕ ರತ್ನ. ಯುವಜನತೆಗೆ ಸದಾ ಪ್ರೇರಣೆಯಾಗಿದ್ದರು. ಪುನೀತ್ ಹೆಸರು ಚಿರಸ್ಥಾಯಿಯಾಗಬೇಕು, ಪ್ರೇರಣೆಯಾಗಬೇಕು ಎಂದು ಈ ಪುರಸ್ಕಾರ ನೀಡಲಾಗುತ್ತಿದೆ ಎಂದರು. ನವೆಂಬರ್ 1ರಂದು ನಡೆಯಲಿರುವ ಕಾರ್ಯಕ್ರಮದಲ್ಲಿ ಹಲವಾರು ಶ್ರೇಷ್ಠ ಸಾಹಿತಿಗಳು, ▶ 8ನೇ ಪುಟಕ್ಕೆ

ಬ್ರಿಟನ್ ಪ್ರಧಾನಿ ಲಿಜ್ ಟ್ರಸ್ ರಾಜಿನಾಮೆ!

● ಅಧಿಕಾರ ವಹಿಸಿಕೊಂಡ 44 ದಿನಗಳಲ್ಲೇ ಪದತ್ಯಾಗ ● ಬ್ರಿಟನ್ ರಾಜಕಾರಣದಲ್ಲೇ ಅತ್ಯಂತ ಅಲ್ಪಾವಧಿ ಪ್ರಧಾನಿ ದಾಖಲೆ



ಲಂಡನ್, ಅ.20– ಬ್ರಿಟನ್‌ನ ನೂತನ ಪ್ರಧಾನಿ ಲಿಜ್ ಟ್ರಸ್ ಅವರು ಅಧಿಕಾರ ವಹಿಸಿಕೊಂಡ 44 ದಿನಕ್ಕೆ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಈ ಮೂಲಕ ಇಂಗ್ಲೆಂಡ್ ರಾಜಕಾರಣದಲ್ಲಿ ಇತಿಹಾಸ ಸೃಷ್ಟಿಸಿರುವ ಅವರು, ಅತ್ಯಂತ ಅಲ್ಪಾವಧಿಯ ಪ್ರಧಾನಿಯಾಗಿದ್ದಾರೆ. ಆರ್ಥಿಕ ಪರಿಸ್ಥಿತಿ ನಿರ್ವಹಣೆಯಲ್ಲಿ ವಿಫಲರಾಗಿದ್ದರಿಂದ ರಾಜೀನಾಮೆ ನೀಡಿದ್ದಾಗಿ ಲಿಜ್ ಟ್ರಸ್ ಹೇಳಿದ್ದಾರೆ. ಬ್ರಿಟನ್‌ನಲ್ಲಿ ಮತ್ತೊಮ್ಮೆ ಚುನಾವಣೆ ನಡೆಯಲಿದೆ. ಮಾಜಿ ಹಣಕಾಸು ಸಚಿವ ಭಾರತೀಯ ಮೂಲದ ರಿಷಿ ಸುನಕ್ ಪ್ರಧಾನಿ ರೇಸ್‌ನಲ್ಲಿದ್ದಾರೆ ಎಂದು ಹೇಳಲಾಗುತ್ತಿದೆ. ಬ್ರಿಟನ್ ಪ್ರಧಾನಿ ಲಿಜ್ ಟ್ರಸ್ ಸರ್ಕಾರಕ್ಕೆ ಹಿರಿಯ ಸಚಿವರೊಬ್ಬರು ರಾಜೀನಾಮೆ ನೀಡಿರುವುದು, ಸಂಸತ್ತಿನ ಕೆಳಮನೆಯಲ್ಲಿ ಸದಸ್ಯರ ತೀವ್ರ ಟೀಕೆಗಳು ವ್ಯಕ್ತವಾಗಿದ್ದು ಆ ಬಳಿಕ ಟ್ರಸ್ ಪ್ರಧಾನಿಯಾಗಿ ಮುಂದುವರಿಯುವ ಬಗ್ಗೆ ಅನುಮಾನಗಳು ಹುಟ್ಟಿಕೊಂಡಿದ್ದವು. ಕಳೆದ ತಿಂಗಳು ಸರ್ಕಾರವು ಆರ್ಥಿಕ ಯೋಜನೆಯನ್ನು ಮಂಡಿಸಿತ್ತು.

ಎಸ್‌ಟಿ ಸಮುದಾಯದ ಮೀಸಲಾತಿ ಹೆಚ್ಚಳ ಸುಗ್ರೀವಾಜ್ಞೆ ಮೂಲಕ ಜಾರಿ



● ರಾಜ್ಯ ಸಚಿವ ಸಂಪುಟ ತೀರ್ಮಾನ
● ಕಾನೂನು ತೊಡಕು ಉಂಟಾಗದಂತೆ ಸಂವಿಧಾನದ ಪರಿಚ್ಛೇಧ–9ರಿಂದ ಹೊರಗಿಟ್ಟೇ ಅನುಷ್ಠಾನ

ಬೆಂಗಳೂರು, ಅ.20(ಕೆಎಂಶಿ)– ಪರಿಶಿಷ್ಟ ಸಮುದಾಯದವರಿಗೆ ಹೆಚ್ಚಳ ಮಾಡಿರುವ ಮೀಸಲಾತಿಯನ್ನು ಸುಗ್ರಿವಾಜ್ಞೆ ಮೂಲಕ ಜಾರಿಗೊಳಿಸಲು ಇಂದಿಲ್ಲಿ ಸೇರಿದ್ದ ರಾಜ್ಯ ಸಚಿವ ಸಂಪುಟ ತೀರ್ಮಾನಿಸಿರುವುದಲ್ಲದೆ, ಸಂವಿಧಾನದ ಪರಿಚ್ಛೇಧ–9ರಿಂದ ಹೊರಗಿಟ್ಟೇ ಅನುಷ್ಠಾನಗೊಳಿಸಲು ಸಮ್ಮತಿಸಿದೆ.

ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ. ಮಾಧುಸ್ವಾಮಿ, ಪರಿಚ್ಛೇಧ 9ರಡಿಯಲ್ಲಿ ತರುವ ಬಗ್ಗೆ ಚರ್ಚೆ ನಡೆಯಿತು. ಆದರೆ ಈ ಕಾನೂನಿನಡಿ ಮೀಸಲಾತಿ ಜಾರಿಗೆ ಬಂದರೂ, ಅದಕ್ಕೆ ಕಾನೂನಿನಡಿಯಲ್ಲಿ ನ್ಯಾಯಾಲಯದಿಂದ ರಕ್ಷಣೆ ಸಿಗುವ ಖಾತ್ರಿ ಇಲ್ಲ.


ಪರಿಚ್ಛೇಧ 9ರಡಿಯಲ್ಲಿ ಅನುಷ್ಠಾನಗೊಳ್ಳಬೇಕಾದರೆ ಸಂವಿಧಾನದ ತಿದ್ದುಪಡಿ ಸಂಸತ್‌ನಲ್ಲೇ ತೀರ್ಮಾನವಾಗಬೇಕು. ಇದನ್ನು ಗಮನದಲ್ಲಿಟ್ಟುಕೊಂಡೇ ಮೀಸಲಾತಿ ಹೆಚ್ಚಳವನ್ನು ಸುಗ್ರಿವಾಜ್ಞೆ ಮೂಲಕ ಜಾರಿ ಮಾಡುವ ತೀರ್ಮಾನ ▶ 8ನೇ ಪುಟಕ್ಕೆ

ಖಾಸಗಿಯವರಿಗೆ ಎಲ್ಲಾ ಏತ ನೀರಾವರಿ ಯೋಜನೆ ನಿರ್ವಹಣೆ ಹೊಣೆ

ಬೆಂಗಳೂರು, ಅ.20(ಕೆಎಂಶಿ)– ರಾಜ್ಯದ ಎಲ್ಲ ಏತ ನೀರಾವರಿ ಯೋಜನೆಗಳನ್ನು ಖಾಸಗಿಯವರಿಗೆ ವಹಿಸಿಕೊಡಲು ಇಂದಿಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಮಹತ್ವದ ತೀರ್ಮಾನ ಕೈಗೊಳ್ಳಲಾಗಿದೆ. ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ. ಮಾಧುಸ್ವಾಮಿ, ಕೃಷ್ಣಾ, ಕಾವೇರಿ, ತುಂಗಾ, ಭದ್ರಾ ಸೇರಿದಂತೆ ಭಾರೀ ನೀರಾವರಿಯ ವ್ಯಾಪ್ತಿಯಲ್ಲಿದ್ದ ಏತ ನೀರಾವರಿಗಳು ಖಾಸಗಿಯವರ ನಿರ್ವಹಣೆಗೆ ಒಳಪಡಲಿವೆ ಎಂದರು.

ಏತ ನೀರಾವರಿ ಯೋಜನೆಗಳ ನಿರ್ವಹಣೆಯನ್ನು ಹೊರಗುತ್ತಿಗೆ ಮೂಲಕ ನೀಡುವ ಸರ್ಕಾರದ ತೀರ್ಮಾನವನ್ನು ಅವರು ಸಮರ್ಥಿಸಿಕೊಂಡರು. ಏತ ನೀರಾವರಿ ಯೋಜನೆಗಳ ವ್ಯಾಪ್ತಿಯಲ್ಲಿ ಮೋಟಾರು ಸೇರಿದಂತೆ ಇನ್ನಾವುದೇ ಬಿಡಿ ಭಾಗಗಳು ಕೆಟ್ಟರೆ, ಅಥವಾ ದುರಸ್ತಿ ಅನಿವಾರ್ಯವಾದರೆ ಸರ್ಕಾರದಿಂದ ಸಮರ್ಪಕವಾಗಿ ನಿರ್ವಹಣೆ ಮಾಡಲು ಸಾಧ್ಯವಾಗುತ್ತಿಲ್ಲ. ಯೋಜನೆಯ ವ್ಯಾಪ್ತಿಯಲ್ಲಿನ ಕೊನೆ ಭಾಗಕ್ಕೆ ನೀರು ಹರಿಯುತ್ತಿಲ್ಲ ಎಂಬ ದೂರುಗಳು ಬಂದರೆ, ಅದನ್ನು ಬಗೆಹರಿಸುವ ಕೆಲಸ ಸಮರ್ಪಕವಾಗಿ ನಡೆಯುತ್ತಿಲ್ಲ. ಹೀಗಾಗಿ ಏತ ನೀರಾವರಿಗಳನ್ನು ಹೊರಗುತ್ತಿಗೆ ನೀಡುವುದು ಅನಿವಾರ್ಯ ▶ 8ನೇ ಪುಟಕ್ಕೆ

9 ಕಾಲೇಜು ಸ್ವಾಯತ್ತತೆ ನವೀಕರಿಸಲು ಮೈವಿವಿ ಸಿಂಡಿಕೇಟ್ ಸಭೆ ಸಮ್ಮತಿ



ಮೈಸೂರು,ಅ.20(ಆರ್‌ಕೆ)–ಮೈಸೂರು ವಿವಿ ವ್ಯಾಪ್ತಿಯ 9 ಕಾಲೇಜುಗಳ ಸ್ವಾಯತ್ತತೆಯನ್ನು ನವೀಕರಿಸಲು ಗುರುವಾರ ನಡೆದ ಸಿಂಡಿಕೇಟ್ ಸಭೆ ಅನುಮೋದನೆ ನೀಡಿತು.

ಕ್ರಾಫರ್ಡ್ ಭವನದಲ್ಲಿ ಕುಲಪತಿ ಪ್ರೊ. ಜಿ.ಹೇಮಂತಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸ್ವಾಯತ್ತತೆ ಹೊಂದಿರುವ 9 ಕಾಲೇಜುಗಳ ಮಾನ್ಯತೆಯನ್ನು ಮುಂದಿನ ಒಂದು ವರ್ಷದ ಅವಧಿಗೆ ಮುಂದುವರಿಸಲು ಸದಸ್ಯರು ಸಮ್ಮತಿಸಿದರು. ವಿವಿಯಲ್ಲಿ ಹಲವು ವರ್ಷಗಳಿಂದ ಬಾಕಿ ಇದ್ದ ಶಿಕ್ಷಕರ ಮುಂಬಡ್ತಿ ವಿಷಯ ಕುರಿತು ಸಮಾಲೋಚನೆ ನಡೆಸಿದ ಸಭೆಯು, ಸೇವಾ ನಿಯಮಗಳನುಸಾರ ಅರ್ಹ ಶಿಕ್ಷಕರಿಗೆ ಬಡ್ತಿ ನೀಡುವ ಬಗ್ಗೆ ಅನುಮೋದನೆ ನೀಡಿತು. ಹಣಕಾಸಿನ ಪರಿಸ್ಥಿತಿ ಅವಲೋಕಿಸಿ ಮುಂಬಡ್ತಿ ಪ್ರಕ್ರಿಯೆ ಪೂರ್ಣಗೊಳಿಸಬೇಕೆಂದು ಸಭೆಯು ನಿರ್ಧರಿಸಿತು. ಮಾನ್ಯತೆಗಾಗಿ ಅರ್ಜಿ ಸಲ್ಲಿಸಿ ಕೋರಿಕೊಂಡಿರುವ ಸಂಶೋಧನಾ ಸಂಸ್ಥೆಗಳಲ್ಲಿ ಒದಗಿಸಿರುವ ಸೌಲಭ್ಯಗಳು, ಶೈಕ್ಷಣಿಕ ಮತ್ತು ಸಂಶೋಧನಾ ಪ್ರಕ್ರಿಯೆಗೆ ಪೂರಕ ವಾತಾವರಣ ಇವೆ ಎಂಬುದನ್ನು ಖಾತರಿಪಡಿಸಿಕೊಂಡು ರೀಸರ್ಚ್ ಇನ್‌ಸ್ಟಿಟ್ಯೂಷನ್‌ಗಳಿಗೆ ಮಾನ್ಯತೆ ನೀಡಬಹುದೆಂದು ಸಿಂಡಿಕೇಟ್ ಸಭೆಯು ಸಲಹೆ ನೀಡಿತು. ಕುಲಪತಿ ಪ್ರೊ.ಹೇಮಂತ ಕುಮಾರ್ ಅವರ ಅವಧಿ ನವೆಂಬರ್ 15ಕ್ಕೆ ಮುಕ್ತಾಯವಾಗಲಿದ್ದು, ಅಷ್ಟರೊಳಗೆ ಮತ್ತೊಂದು ವಿಶೇಷ ಸಭೆ ನಡೆಸಿ ತುರ್ತಾಗಿ ಕೈಗೊಳ್ಳಬೇಕಾದ ಹಾಗೂ ಬಾಕಿ ಉಳಿದಿರುವ ವಿಷಯಗಳ ಬಗ್ಗೆ ನಿರ್ಧಾರ ಕೈಗೊಳ್ಳುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಪ್ರತಿಭೆ, ಜ್ಞಾನದ ಹಬ್ ಆಗಿ ಮೈಸೂರು ಪರಿವರ್ತನೆ

● ಐಟಿ–ಬಿಟಿ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಘೋಷಣೆ ● ಮೈಸೂರಲ್ಲಿ 10 ತಿಂಗಳಲ್ಲಿ 7 ಐಟಿ–ಬಿಟಿ ಕಂಪನಿ ಸ್ಥಾಪನೆ; ಇನ್ನೂ 7 ಕಂಪನಿ ಪ್ರಸ್ತಾವನೆ

ಮೈಸೂರು, ಅ.20(ಆರ್‌ಕೆ)–ಸಾಂಸ್ಕೃತಿಕ ಹಾಗೂ ಪಾರಂಪರಿಕ ನಗರಿ ಮೈಸೂರನ್ನು ಜ್ಞಾನ ಮತ್ತು ಪ್ರತಿಭೆ (Talent & Knowledge) ಹಬ್ ಆಗಿ ಪರಿವರ್ತಿಸಲಾಗುವುದು ಎಂದು ಐಟಿ–ಬಿಟಿ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಇಂದಿಲ್ಲಿ ಘೋಷಿಸಿದ್ದಾರೆ.

ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ (KDEM) ವತಿಯಿಂದ ಮೈಸೂರಿನ ರ‍್ಯಾಡಿಸನ್ ಬ್ಲೂ ಪ್ಲಾಜಾ ಹೋಟೆಲ್‌ನಲ್ಲಿ ಆಯೋಜಿಸಿದ್ದ ಬಿಯಾಂಡ್ ಬೆಂಗಳೂರು ಬಿಗ್ ಟೆಕ್ ಶೋ–2022 ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದ ಅವರು, ಪ್ರತಿಭೆ ಮತ್ತು ಜ್ಞಾನಾಧಾರಿತ ಮಾಹಿತಿ ತಂತ್ರಜ್ಞಾನ ಹಾಗೂ ಬಯೋ ಟೆಕ್ನಾಲಜಿ ಕಂಪನಿಗಳನ್ನು ಸ್ಥಾಪಿಸಲು ಮೈಸೂರು ಪ್ರಶಸ್ತ ನಗರವಾಗಿರುವುದರಿಂದ ಇಲ್ಲಿಗೆ ಅಗತ್ಯ ಸೌಲಭ್ಯಗಳನ್ನು ಸರ್ಕಾರ ಒದಗಿಸುತ್ತಿದೆ ಎಂದರು.

ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು ಕೇಂದ್ರ ಸರ್ಕಾರ ನಿರ್ಧರಿಸಿ, ರೂಪಿಸಿದ ರಾಷ್ಟ್ರೀಯ ಶಿಕ್ಷಣ ನೀತಿ (NEP)ಯನ್ನು ಇಡೀ ದೇಶದಲ್ಲೇ ಮೊದಲು ಕರ್ನಾಟಕದಲ್ಲಿ ಅನುಷ್ಠಾನ ಮಾಡುವಲ್ಲಿ ಸರ್ಕಾರ ಯಶಸ್ವಿಯಾಗಿದೆ. ಸರಳ ರೀತಿಯಲ್ಲಿ ಉನ್ನತ ಶಿಕ್ಷಣ ಸರ್ವರಿಗೂ ಲಭ್ಯವಾಗಬೇಕು. ಆ ಮೂಲಕ ಎಲ್ಲ ವರ್ಗದವರೂ ಪ್ರತಿಭೆ, ಜ್ಞಾನ ಹೊಂದಿ ಕೌಶಲ್ಯ ವೃದ್ಧಿಸಿಕೊಂಡು ವೃತ್ತಿ ನಿರತರಾಗಬೇಕೆಂಬ ಉದ್ದೇಶದಿಂದ ಸರ್ಕಾರ ಎಲ್ಲಾ ರೀತಿಯ ನೆರವು ನೀಡುತ್ತಿದೆ ಎಂದರು. ಸಾಂಸ್ಕೃತಿಕ ರಾಜಧಾನಿ ಮೈಸೂರಲ್ಲಿ ಇಎಸ್‌ಡಿಎಂ ವಲಯದ 230 ಕಂಪನಿಗಳು ಸ್ಥಾಪನೆಯಾಗಿದ್ದು, ವರ್ಷಕ್ಕೆ 10 ಸಾವಿರ ಕೋಟಿ ವಹಿವಾಟು ನಡೆಸುತ್ತಿವೆ. ಕಳೆದ 10 ತಿಂಗಳಲ್ಲಿ 7 ಐಟಿ–ಬಿಟಿ ಕಂಪನಿಗಳು ಕಾರ್ಯಾರಂಭ ಮಾಡಿದ್ದು, ಇನ್ನೂ 7 ಕಂಪನಿಗಳ ಸ್ಥಾಪನೆಗೆ ಪ್ರಸ್ತಾವನೆ ಬಂದಿವೆ. 12,000 ಮಂದಿಗೆ ಉದ್ಯೋಗ ಸೃಷ್ಟಿಸುವ ಸಾಮರ್ಥ್ಯ ಹೊಂದಿರುವ ಅವುಗಳ ಕಾರ್ಯಾರಂಭಕ್ಕೆ ಸದ್ಯದಲ್ಲೇ ಸರ್ಕಾರ ಒಪ್ಪಿಗೆ ನೀಡಲಿದೆ ಎಂದು ಸಚಿವರು ತಿಳಿಸಿದರು.

ವಿದ್ಯಾರ್ಥಿಗಳ ನೇತೃತ್ವ: ಎರಡು ವರ್ಷದೊಳಗಾಗಿ ಮೈಸೂರಲ್ಲಿ ವಿದ್ಯಾರ್ಥಿಗಳೇ ನೇತೃತ್ವ ವಹಿಸಲಿರುವ 500 ಸ್ಟಾರ್ಟ್ ಅಪ್ ಗ್ರಿಡ್‌ಗಳನ್ನು ಸ್ಥಾಪಿಸಿ 2023ರ ಫೆಬ್ರವರಿ ಒಳಗೆ ಗ್ಲೋಬಲ್ ಟೆಕ್ ಸೆಂಟರ್, ಸೆಂಟರ್ ಆಫ್ ಎಕ್ಸ್ ಲೆನ್ಸ್ ಸ್ಥಾಪಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ. 10 ಸ್ಟಾರ್ಟ್ ಅಪ್‌ಗಳಿಗೆ 10 ಕೋಟಿ ರೂ. ಸಬ್ಸಿಡಿ ರೂಪದ ಸಾಲ ನೀಡಿ ಪ್ರೋತ್ಸಾಹಿಸಲಾಗುವುದು ಎಂದ ಅವರು, ಆ ಮೂಲಕ ಪ್ರತಿಭೆ ಆಧಾರಿತ ಉದ್ಯಮಗಳಿಗೆ ನೆರವು ನೀಡಲಾಗುವುದು ಎಂದು ಸಚಿವರು ಇದೇ ಸಂದರ್ಭ ನುಡಿದರು.



ಮೈಸೂರಿನ ರ‍್ಯಾಡಿಸನ್ ಬ್ಲೂ ಪ್ಲಾಜಾ ಹೋಟೆಲ್‌ನಲ್ಲಿ ಗುರುವಾರ ನಡೆದ ಬಿಗ್ ಟೆಕ್ ಶೋ–2022ರ 2ನೇ ದಿನದ ಗೋಷ್ಠಿಯನ್ನು ಐಟಿ–ಬಿಟಿ ಸಚಿವ ಡಾ. ಸಿ.ಎನ್.ಅಶ್ವತ್ಥನಾರಾಯಣ ಉದ್ಘಾಟಿಸಿದರು. (ಎಡದಿಂದ) ಬ್ರಿಟಿಷ್ ಹೈಕಮಿಷನ್‌ನ ಡೆಪ್ಯುಟಿ ಹೈಕಮಿಷ್ನರ್ ಆ್ಯಂಡ್ರಿವ್ ಫ್ಲೆಮ್ಮಿಂಗ್, ಸಂಸದ ಪ್ರತಾಪ್ ಸಿಂಹ, ಐಟಿ–ಬಿಟಿ ಇಲಾಖೆ ಅಡಿಷನಲ್ ಚೀಫ್ ಸೆಕ್ರೆಟರಿ ಡಾ. ಇ.ವಿ.ರಮಣರೆಡ್ಡಿ, ನಿರ್ದೇಶಕಿ ಮೀನಾ ನಾಗರಾಜ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರಲ್ಲಿ ಉದ್ಯಮ ಸ್ಥಾಪನೆಗೆ ಪೂರಕ ವ್ಯವಸ್ಥೆ: ಈ ಸಂದರ್ಭದಲ್ಲಿ ಮಾತನಾಡಿದ ಸಂಸದ ಪ್ರತಾಪ್ ಸಿಂಹ, ಐಟಿ–ಬಿಟಿ, ಉನ್ನತ ಶಿಕ್ಷಣ ಸಚಿವ ಡಾ. ಅಶ್ವತ್ಥನಾರಾಯಣ ಅವರು ಮೈಸೂರು ಭಾಗದಲ್ಲಿ ಮಾಹಿತಿ ತಂತ್ರಜ್ಞಾನ ಕಂಪನಿಗಳೂ ಸೇರಿದಂತೆ ಹಲವು ಉದ್ದಿಮೆಗಳ ಸ್ಥಾಪನೆಗೆ ಬೇಕಾದ ಅಗತ್ಯ ಸೌಲಭ್ಯಗಳನ್ನು ಒದಗಿಸಿ, ಪ್ರೋತ್ಸಾಹಿಸುತ್ತಿದ್ದಾರೆ. ಕೇವಲ ರಾಜ್ಯ ರಾಜಧಾನಿಗೆ ಮಾತ್ರ ಸೀಮಿತವಾಗಿದ್ದ ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ ಆಫ್ ಇಂಡಿಯಾ (STPI)ವನ್ನು ಮೈಸೂರಿಗೆ ಮಂಜೂರು ಮಾಡಿದರು. ತಾವು ಸಂಸದರಾದ ಮೇಲೆ ರೈಲು ರಸ್ತೆ, ವಿಮಾನ ಸಂಪರ್ಕ ಸದೃಢಪಡಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಸಂಪೂರ್ಣ ▶ 8ನೇ ಪುಟಕ್ಕೆ

ಫ್ಯಾಬ್ ವಲಯಕ್ಕೆ 200 ಎಕರೆ ಭೂಮಿ

ಮೈಸೂರಲ್ಲಿ ಸೆಮಿ ಕಂಡಕ್ಟರ್ ಫ್ಯಾಬ್ ವಲಯಕ್ಕೆ 200 ಎಕರೆ ಭೂಮಿ ನೀಡಲಾಗಿದೆ. ಇನ್ನೂ 250 ಎಕರೆ ಭೂಮಿಯ ಅಗತ್ಯವಿದ್ದು, 600 ಕೋಟಿ ರೂ. ಸಬ್ಸಿಡಿ ನೀಡಲಾಗಿದೆ. ರಾಜ್ಯದಲ್ಲಿ ಚಿಪ್‌ಗಳ ತಯಾರಿಕಾ ಘಟಕವಾಗಬೇಕೆಂಬ ಸಂಕಲ್ಪದಿಂದ ಸರ್ಕಾರ ಅಗತ್ಯ ಭೂಮಿ ಮತ್ತು ಸಬ್ಸಿಡಿ ನೀಡಲು ನಿರ್ಧರಿಸಿದೆ. ಮುಂದಿನ ದಿನಗಳಲ್ಲಿ ಈ ಕ್ಷೇತ್ರವು ಸಾವಿರಾರು ಸಂಖ್ಯೆಯ ಹುದ್ದೆ ಸೃಷ್ಟಿಸಿ ರಾಜ್ಯದ ಆರ್ಥಿಕತೆಯನ್ನು ಸದೃಢಗೊಳಿಸಲಿದೆ ಎಂದು ಅಶ್ವತ್ಥನಾರಾಯಣ ನುಡಿದರು. ಇಂತಹ ಕಂಪನಿಗಳಿಂದ ಮೈಸೂರು ಭಾಗದ ಜನರ ಬದುಕೇ ಬದಲಾಗಲಿದೆ. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದಿಂದ ಇಎಸ್‌ಡಿಎಂಗೆ 200 ಎಕರೆ ಭೂಮಿ ನೀಡಲು ನಿರ್ಧರಿಸಲಾಗಿದೆ. ಮೈಸೂರು ವಿಮಾನ ನಿಲ್ದಾಣ ವಿಸ್ತರಿಸಿ ಅಂತಾರಾಷ್ಟ್ರೀಯ ವಿಮಾನಗಳ ಹಾರಾಟಕ್ಕೆ ಅನುವು ಮಾಡಿಕೊಡಲು ಭೂ ಸ್ವಾಧೀನ ವೆಚ್ಚ 350 ಕೋಟಿ ರೂ. ಅನುದಾನವನ್ನು ಕೆಐಎಡಿಬಿಗೆ ಬಿಡುಗಡೆ ಮಾಡಿದೆ. 160 ಕೋಟಿ ರೂ. ವೆಚ್ಚದಲ್ಲಿ ರಿಂಗ್ ರಸ್ತೆ ಉನ್ನತೀಕರಣ ಮಾಡಿದ್ದು, ಭವಿಷ್ಯದ ವಾಹನ ಸಂಚಾರ ದಟ್ಟಣೆ ನಿಭಾಯಿಸಲು ಪೆರಿಫೆರಲ್ ರಿಂಗ್ ರಸ್ತೆಗೆ ಡಿಪಿಆರ್ ಸಿದ್ಧಪಡಿಸಲು ತಿಳಿಸಲಾಗಿದೆ. ಕೇಂದ್ರ ಸರ್ಕಾರವು ಅದಕ್ಕೆ ತಗಲುವ ವೆಚ್ಚವನ್ನು ಭರಿಸಲಿದೆ ಎಂದು ಸಚಿವರು ಇದೇ ವೇಳೆ ನುಡಿದರು.

ನಕ್ಕರೆ ಅದೇ ಸ್ವರ್ಗ

ಅಪ್ಸರೆ : (ಸ್ವರ್ಗದ ಬಾಗಿಲು ತಟ್ಟಿದಾಗ ಬಾಗಿಲು ತೆರೆದು ಮುಗುಳ್ನಕ್ಕು) ಇಷ್ಟು ಬೇಗ ಹೇಗೆ ಬಂದ್ರಿ ಸ್ವರ್ಗಕ್ಕೆ?"

ಆತ : "ನಮ್ಮ ಡಾಕ್ಟ್ರು ಕಳುಹಿಸಿಕೊಟ್ರು!"

ಮೈಸೂರು ಮಿತ್ರ

ಶುಕ್ರವಾರ, 21 ಅಕ್ಟೋಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಒಳ್ಳೆಯ ಮಿತ್ರರನ್ನು ಹುಡುಕುವ ಮೊದಲು ನಾವು ಒಳ್ಳೆಯ ಮಿತ್ರರಾಗುವುದು ಅಗತ್ಯ –ಸಿಸಿರೊ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬರುವುದು ಕಡಿಮೆಯಾದರೂ ತೆರವುದು ತಪ್ಪಲಿಲ್ಲ

ನಿಮ್ಮ ಪತ್ರಗಳು

ಆಧುನಿಕ ಭಗೀರಥ ಕಾಮೇಗೌಡರ ಸ್ಮರಣಾರ್ಥ ಸರ್ಕಾರ ಪ್ರಶಸ್ತಿ ಸ್ಥಾಪಿಸಲಿ

ಮಾನ್ಯರೆ,



ಮಳವಳ್ಳಿ ತಾಲೂಕಿನ ಕಲ್ಮನೆ ಕಾಮೇಗೌಡರು ನಮ್ಮನ್ನೆಲ್ಲಾ ಅಗಲಿದ್ದಾರೆ. ಕುರಿಗಾಹಿಯಾಗಿದ್ದುಕೊಂಡು ತಮ್ಮ ಹಳ್ಳಿಯಲ್ಲೇ ಬದುಕಿ ಕೆರೆಗಳನ್ನು ತಮ್ಮ ಸ್ವಂತ ಖರ್ಚಿನಲ್ಲೇ ಕಟ್ಟಿ ಇತರ ಬಳಕೆಗಳಿಗೆ ಅನುಕೂಲ ಮಾಡಿಕೊಡುವುದರ ಜತೆಗೆ ಪರೋಕ್ಷವಾಗಿ ಅಂತರ್ಜಲ ಮರುಪೂರಣಕ್ಕೆ ಸಾಕ್ಷಿಯಾಗಿದ್ದಾರೆ. ಇವತ್ತಿನ ಯುವಕರು ವಯಸ್ಕರು ಆದ ನಾವೆಲ್ಲರೂ ಯೋಚಿಸಬೇಕಾದ ವಿಷಯ ಏನೆಂದರೆ ನಮ್ಮ ಮನೆಯ ಎಲ್ಲಾ ಸಾಧಕ–ಬಾಧಕಗಳನ್ನು ಗಮನಿಸಲು ಆಗದ ಸ್ಥಿತಿ, ಇನ್ನೂ ಇತರರ ಒಳಿತಿಗಾಗಿ ಸಮಯ ಮೀಸಲಿಡುವುದು ಎಲ್ಲಿಯ ಮಾತು ಹೇಳಿ. ಇಂತಹ ಮಹನೀಯರು ನಮಗೆ ಅಲ್ಲಲ್ಲಿ ಕಾಣಿಸಿ ತಮ್ಮ ಪಾಲಿನ ಕರ್ತವ್ಯವನ್ನು ಮುಗಿಸಿ ಹೇಳದೇ ಕೇಳದೇ ಹೊರಟೇ ಬಿಡುತ್ತಾರೆ. ಉಳಿದ ಕೆಲಸವನ್ನು ನಮ್ಮಗಳ ತಲೆಗೆ ಕಟ್ಟಿ ಅಲ್ಲವೇ. ಇಂತಹ ಸಾಮಾಜಿಕ ನ್ಯಾಯ ನೀತಿ ನಿಯಮಗಳ ಕೈಂಕರ್ಯದಿಂದ ಎಲ್ಲಾ ಕಾಲಕ್ಕೂ ಉಸಿರಾಡುತ್ತಿದ್ದಾರೆ. ಅಲ್ಲದೆ ಮುಂದಿನ ತಲೆಮಾರಿನ ಜನರಿಗೂ ಮಾದರಿಯಾಗಿದ್ದಾರೆ. ಇಂತಹ ಮಹಾನ್ ವ್ಯಕ್ತಿಗಳ ಸಂಖ್ಯೆ ಮುಂದಿನ ದಿನಗಳಲ್ಲಿ ನಮಗೆ ಕಾಣಸಿಗುವುದು ತೀರಾ ಅಪರೂಪದ ಸಂಗತಿಯೇ ಸರಿ. ಹಾಗಾಗಿ ಅಂತಹ ಯುವಕರನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಘನ ಸರ್ಕಾರವು ಅವರ ಹೆಸರಿನಲ್ಲಿ ಪ್ರಶಸ್ತಿ ಘೋಷಿಸಿದರೆ ಅವರನ್ನು ಶಾಶ್ವತವಾಗಿ ಸ್ಮರಿಸಿದ ಹಾಗೂ ಅಂತರ್ಜಲ ಮರುಪೂರಣಕ್ಕೆ ಇತರರನ್ನು ಬೆಂಬಲಿಸಿದಾಗೇ ಆಗುತ್ತದೆ ಅಲ್ಲವೇ... ಸರ್ಕಾರದ ಮುಖ್ಯಮಂತ್ರಿಗಳು ಅವರ ಸಾವಿಗೆ ಸ್ಪಂದಿಸಿರುವ ರೀತಿಯೇ ಮೆಚ್ಚುವಂತಹದ್ದು. ಹಾಗಾಗಿ ಈ ದೃಷ್ಟಿಯಿಂದ ಸರ್ಕಾರವು ಇದರ ಬಗ್ಗೆ ಬೇಗ ನಿರ್ಧಾರ ತೆಗೆದುಕೊಂಡು ಅವರನ್ನು ಪ್ರಾಮಾಣಿಕವಾಗಿ ಶಾಶ್ವತ ನೆನೆಯುವ ಹಾಗೇ ಮಾಡಲಿ ಎಂಬುದೇ ಮಹದಾಶಯ.

–ಎ.ಎಸ್.ಗೋವಿಂದೇಗೌಡ, ಅರೇನಹಳ್ಳಿ ಗ್ರಾಮ, ಪಿರಿಯಾಪಟ್ಟಣ ತಾ.

ಹೆಚ್ಚಿನ ಬಸ್ ಸೌಲಭ್ಯ ಕಲ್ಪಿಸಲು ಮನವಿ

ಮಾನ್ಯರೆ,



ಮೈಸೂರು ನಗರ ಸಾರಿಗೆ ಬಸ್‌ಗಳು ಸಂಚರಿಸುವ ಮಾರ್ಗವಾದ ಚಾಮುಂಡಿಪುರಂ, ಸೆಂಟ್ ಮೇರಿಸ್ ಸರ್ಕಲ್, ಕರಿವಾರಮ್ಮ ದೇವಸ್ಥಾನ, ಸೂಯೇಜ್ ಫಾರಂ, ಗೊಬ್ಬಳಿಮರ ಮಾರ್ಗವಾಗಿ ಜೆ.ಪಿ.ನಗರ, ರಮಾಬಾಯಿ ನಗರವನ್ನು ತಲುಪಿ, ಮತ್ತೆ ಇದೇ ಮಾರ್ಗವಾಗಿ ಸಂಚರಿಸಿ ನಗರ ಸಾರಿಗೆ ನಿಲ್ದಾಣವನ್ನು ತಲುಪುತ್ತವೆ. ಆದರೆ ಬೆಳಗ್ಗೆ 8 ರಿಂದ 10 ಗಂಟೆಯವರೆಗೆ ಒಂದೆರಡು ಬಸ್ಸುಗಳನ್ನು ಬಿಟ್ಟರೆ, ಈ ಮಾರ್ಗದಲ್ಲಿ ಬಸ್ಸುಗಳು ಸಂಚರಿಸುವುದು ಬಹಳ ವಿರಳ. ಈ ಬಸ್ಸುಗಳಲ್ಲೂ ಕೂಡ ಕಿಕ್ಕಿರಿದು ಜನರು ತುಂಬಿರುತ್ತಾರೆ. ಬಸ್ಸಿನಲ್ಲಿ ಕಾಲಿಡಲು ಜಾಗವಿರುವುದಿಲ್ಲ. ಅಷ್ಟೊಂದು ಜನ ತುಂಬಿರುತ್ತಾರೆ. ಇದು ಒಂದು ದಿನದ ಕಥೆಯಲ್ಲ. ಪ್ರತಿನಿತ್ಯ ಪ್ರಯಾಣಿಸುವ ಸಾರ್ವಜನಿಕರು ನರಕಾಯಾತನೆಯನ್ನು ಅನುಭವಿಸುತ್ತಿದ್ದಾರೆ. ಇದೇ ಸಮಯದಲ್ಲಿ ವಿದ್ಯಾರ್ಥಿಗಳು ಶಾಲಾ, ಕಾಲೇಜಿಗೆ ತೆರಳಲು, ಖಾಸಗಿ ಮತ್ತು ಸರ್ಕಾರಿ ಕಚೇರಿಗಳಿಗೆ ಸಿಬ್ಬಂದಿ ವರ್ಗದವರು ಕೂಡ ಈ ಬಸ್ಸುಗಳನ್ನೇ ಅವಲಂಬಿಸಿರುತ್ತಾರೆ. ಇವರ ಕಷ್ಟವಂತೂ ಹೇಳತೀರದು. ಪ್ರತಿನಿತ್ಯ ಇದೇ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಮಕ್ಕಳು, ಮಹಿಳೆಯರು, ಹಿರಿಯ ನಾಗರಿಕರು ಕೂಡ ತುಂಬಾ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಒಮ್ಮೊಮ್ಮೆ ಬಸ್ಸುಗಳಲ್ಲಿ ಜನ ತುಂಬಿರುವು ದರಿಂದ ಈ ಸ್ಥಳಗಳಲ್ಲಿ ಬಸ್ಸುಗಳನ್ನು ನಿಲ್ಲಿಸುವುದೇ ಇಲ್ಲ. ದಯವಿಟ್ಟು ಪ್ರಯಾಣಿಕರ ಅನುಕೂಲಕ್ಕಾಗಿ ಸಂಬಂಧಪಟ್ಟ ಅಧಿಕಾರಿಗಳು ಹೆಚ್ಚಿನ ಬಸ್ ಸೌಲಭ್ಯವನ್ನು ಕಲ್ಪಿಸಬೇಕೆಂದು ಮನವಿ.

–ಪರಶಿವಮೂರ್ತಿ ಎನ್.ಪಿ, ನಂಜೀಪುರ, ಸರಗೂರು ತಾ.

ಪಟಾಕಿಗಳನ್ನು ಹೊಡೆಯುವ ಮುನ್ನ ಯೋಚಿಸಿ!

ಮಾನ್ಯರೆ,



ಕತ್ತಲೆಯನ್ನು ಹೋಗಲಾಡಿಸಿ ಮನೆ ಹಾಗೂ ಮನದ ಕತ್ತಲೆಯನ್ನು ನಿವಾರಿಸಿ ಬೆಳಕನ್ನು ಉಂಟು ಮಾಡುವ ಹಬ್ಬವೇ ದೀಪಾವಳಿ. ಆದರೆ ಪಟಾಕಿ ಇಲ್ಲದ ದೀಪಾವಳಿಯನ್ನು ಇಂದು ಊಹಿಸುವುದೇ ಕಷ್ಟವಾಗಿದೆ. ಕೇವಲ ದೀಪಗಳ ಬೆಳಗುವಿಕೆಯಿಂದ ಸುಂದರಗೊಳ್ಳುತ್ತಿದ್ದ ಸಂಜೆಗೆ ಯಾವಾಗ ಪಟಾಕಿ ತಳಕು ಹಾಕಿಕೊಂಡಿತೋ ಗೊತ್ತಿಲ್ಲ. ಆದರೆ ಪಟಾಕಿಗಳು ಕೆಲವು ನಿಮಿಷಗಳ ಖುಷಿ ಹಾಗೂ ಸಂಭ್ರಮವನ್ನು ಮಾತ್ರ ನೀಡುವುದಂತೂ ನಿಜ. ಆದರೆ ಈ ಸಂಭ್ರಮದ ಬಳಿಕ ಸೃಷ್ಟಿಯಾಗುವ ಪಟಾಕಿಯ ಹೊಗೆ, ವಿಷಕಾರಿ ಅನಿಲಗಳು, ವಿಷಕಾರಿ ವಸ್ತುಗಳು, ಮೊದಲಾದವು ಹಲವು ರೀತಿಯಲ್ಲಿ ವಾತಾವರಣವನ್ನು ಕಲುಷಿತಗೊಳಿಸುತ್ತದೆ. ಪಟಾಕಿ ಸುಟ್ಟಾಗ ದೊರಕುವ ಬೆಳಕು ಹಾಗೂ ಸದ್ದು ಆ ಕ್ಷಣಕ್ಕೆ ಸಂಭ್ರಮ ಮೂಡಿಸಿದರೂ, ಈ ಬೆಳಕು ಅಡಗಿದ ಬಳಿಕ ಏಳುವ ಹೊಗೆ ಅತ್ಯಂತ ವಿಷಕಾರಿಯಾಗಿರುತ್ತದೆ.

ಪಟಾಕಿಯಲ್ಲಿರುವ ತಾಮ್ರ, ಕ್ಯಾಡ್ಮಿಯಂ, ಸೀಸ, ಮೆಗ್ನೀಷಿಯಂ ಸತು, ಸೋಡಿಯಂ ಮೊದಲಾದ ರಾಸಾಯನಿಕಗಳು ಗಾಳಿಗೆ ಸೇರಿದಾಗ ನಮ್ಮ ಉಸಿರಾಟದ ನಾಳಗಳಲ್ಲಿ ಉರಿ ತರಿಸುತ್ತದೆ. ರಕ್ತದಲ್ಲಿ ಸೇರಿ ರಕ್ತ ಆಮ್ಲಜನಕವನ್ನು ಹೊರುವ ಕ್ಷಮತೆಯನ್ನು ಕುಗ್ಗಿಸುತ್ತದೆ. ತನ್ಮೂಲಕ ರಕ್ತಹೀನತೆ ಎದುರಾಗುತ್ತದೆ. ನರ ವ್ಯವಸ್ಥೆಯನ್ನು ಶಿಥಿಲಗೊಳಿಸುತ್ತದೆ. ಅಲ್ಲದೇ ಪಟಾಕಿಗಳ ಹೊಗೆಯ ಸೇವನೆಯಿಂದ ಕೆಲವರಲ್ಲಿ ಜ್ವರ ಹಾಗೂ ವಾಂತಿ ಉಂಟಾಗುತ್ತದೆ. ಇದಲ್ಲದೆ ಪಟಾಕಿಗಳಿಂದ ಆಗುವ ಅಗ್ನಿ ಅನಾಹುತ, ಶಬ್ದಮಾಲಿನ್ಯ, ವಾಯುಮಾಲಿನ್ಯ ಹಾಗೂ ಪಟಾಕಿಗಳಿಂದ ಪ್ರಾಣಿಗಳಿಗೆ ಎದುರಾಗುವ ಕುತ್ತು ಸಹ ಅಷ್ಟಿಷ್ಟಲ್ಲ.

ಹಬ್ಬಗಳು ನಮ್ಮ ಮೈಮನ ಸ್ವಚ್ಛಗೊಳಿಸಿ ದೈನಂದಿನ ಬದುಕಿಗೆ ಕಳೆ ತುಂಬುವ ಕೆಲಸ ಮಾಡಬೇಕಿದೆ. ಆದರೆ ಪಟಾಕಿಗಳನ್ನು ಸುಡುವುದರಿಂದ ಇಷ್ಟೆಲ್ಲ ತೊಂದರೆ, ಫಜೀತಿ ಹಾಗೂ ಅನಾಹುತಗಳು ಇರುವುದನ್ನು ಅರಿತು, ಈ ಬಾರಿಯ ದೀಪಾವಳಿಯಲ್ಲಿ ದೀಪಗಳನ್ನು ಮಾತ್ರ ಬೆಳಗಿಸಿ ಸಂಭ್ರಮ ಸಡಗರ ಪಡೋಣ. ಹಾನಿಕಾರಕ ಪಟಾಕಿಗಳಿಂದ ದೂರವಿರೋಣ!

–ಹರಳಹಳ್ಳಿಪುಟ್ಟರಾಜು, ಪಾಂಡವಪುರ.



ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ : 94815 33167

ಬಹುಮುಖಿ

ಜಗತ್ಪ್ರಸಿದ್ಧ ಸಂಶೋಧನಾ ಕೇಂದ್ರ ಸಿಎಫ್‌ಟಿಆರ್‌ಐ



ಭಾರತದ ವಿಶ್ವವಿಖ್ಯಾತ ಸಂಶೋಧನಾ ಕೇಂದ್ರಗಳಲ್ಲಿ ಮೈಸೂರು ನಗರದಲ್ಲಿರುವ 'ಸಿಎಫ್‌ಟಿಆರ್‌ಐ' ಕೂಡ ಒಂದು. ಇದಕ್ಕೆ ಆರೂವರೆ ದಶಕಗಳ ಇತಿಹಾಸವಿದ್ದರೆ. ಇದು ಕಾರ್ಯನಿರ್ವಹಿಸುತ್ತಿರುವ ಕಟ್ಟಡಕ್ಕೆ ಸುಮಾರು ಒಂದೂಕಾಲು ಶತಮಾನದ ಭವ್ಯ ಪರಂಪರೆ ಇದೆ. ಅಕ್ಟೋಬರ್ 21 'ಸಿಎಫ್‌ಟಿಆರ್‌ಐ' ಸಂಸ್ಥಾಪನಾ ದಿನ. ಈ ಹಿನ್ನೆಲೆಯಲ್ಲಿ ಇಂತಹ ಅಪರೂಪದ ಸಂಶೋಧನಾ ಸಂಸ್ಥೆ ಹಾಗೂ ಅಪೂರ್ವ ತಾಣದ ಬಗ್ಗೆ ಬೆಳಕು ಚೆಲ್ಲುವ ಲೇಖನವಿದು.

ಅರಮನೆಗಳ ನಾಡು, ಶ್ರೀಗಂಧದ ಸಿರಿಬೀಡು, ಜ್ಞಾನದ ನೆಲೆಬೀಡು, ಸಂಸ್ಕೃತಿಯ ತವರು, ವಿಜ್ಞಾನದ ಕಲ್ಪ, ಸಾಹಿತ್ಯ ಕಲೆಗಳ ಶಿಲ್ಪ ಎಂದೆಲ್ಲಾ ಕರ್ನಾಟಕದ ಭೂಪಟದಲ್ಲಿ ವಿಶಿಷ್ಟ ಸ್ಥಾನ ಪಡೆದಿರುವ ಶೈಕ್ಷಣಿಕ ಹಿರಿಮೆಯ, ಸಂಶೋಧನೆಯ ಗರಿಮೆಯ ಮೈಸೂರಿನಂಥ ಭವ್ಯ ಪರಿಸರದಲ್ಲಿ ಮಹಾರಾಜ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ತಮ್ಮ ಮೂರನೇ ಸಹೋದರಿ ಚೆಲುವಾಂಬಮ್ಮಣ್ಣಿಗಾಗಿ ಅವರ ಹೆಸರಿನಲ್ಲೇ 1911ರಲ್ಲಿ ನಿರ್ಮಿಸಿದ್ದ ಚಂದದ 'ಚೆಲುವಾಂಬಾವಿಲಾಸ'ದಂಥ ಅರಮನೆಯಲ್ಲಿ 'ಸಿಎಫ್‌ಟಿಆರ್‌ಐ' ಅಂದರೆ ಕೇಂದ್ರ ಆಹಾರ ತಂತ್ರಜ್ಞಾನ ಮತ್ತು ಸಂಶೋಧನಾ ಸಂಸ್ಥೆ ಸ್ಥಾಪನೆಗೊಂಡು ತನ್ನ ಅದ್ಭುತ ಸಂಶೋಧನೆಗಳಿಂದ ಇಡೀ ವಿಶ್ವವೇ ಇತ್ತ ತಿರುಗಿ ನೋಡುವಂತೆ ಕಾರ್ಯನಿರ್ವಹಿಸುತ್ತಿದೆ.

ನಿಜಕ್ಕೂ ಇದು ಇಲ್ಲಿರುವುದು ಮೈಸೂರಿಗರ ಹಿರಿಮೆ. ಹಾಗೆಯೇ ಸರ್ವ ಕನ್ನಡಿಗರ ಹೆಮ್ಮೆ. ಅಷ್ಟೇ ಅಲ್ಲ ಸಮಸ್ತ ಭಾರತೀಯರ ಹೆಚ್ಚುಗಾರಿಕೆ ಕೂಡ. "We are grateful to the citizens of Mysore? We wish to assure them? that we are extremely happy in our Association (whth them) and it is not, perhaps, too much to hope that Mysore will also be happy with us and proud of being home of this important National Institution". ಇದು ಸಿಎಫ್‌ಟಿಆರ್‌ಐನ ಸ್ಥಾಪನೆಗೆ ಕಾರಣಕರ್ತರಲ್ಲೊಬ್ಬರು ಹಾಗೂ ಈ ಕೇಂದ್ರದ ಸಂಸ್ಥಾಪಕ ನಿರ್ದೇಶಕರೂ ಆದ ಡಾ॥ ವಿ. ಸುಬ್ರಹ್ಮಣ್ಯನ್‌ರವರು 1950 ರಲ್ಲಿ ಸಿಎಫ್‌ಟಿಆರ್‌ಐ ಉದ್ಘಾಟನೆಗೊಂಡ ಸಮಾರಂಭದಲ್ಲಿ ಹೇಳಿದ ಮಾತುಗಳು. ಇಂಥ ಹೆಮ್ಮೆಯ ವಿಶ್ವವಿಖ್ಯಾತ 'ಸಿಎಫ್‌ಟಿಆರ್‌ಐ' ವಜ್ರಮಹೋತ್ಸವ ಸಂಭ್ರಮದ ವೈಭವ ಕಂಡಿರುವ ಒಂದು ಅಪೂರ್ವ ಸಂಸ್ಥೆ.

ಅಪೌಷ್ಟಿಕತೆಗೆ ತುತ್ತಾಗಿ ಕಷ್ಟಪಡುತ್ತಿದ್ದ ಭಾರತಕ್ಕೆ ಪೌಷ್ಟಿಕವಾದ ಆಹಾರವನ್ನು ವ್ಯವಸ್ಥಿತವಾಗಿ ಕಲ್ಪಿಸಿಕೊಡುವ ಅಗತ್ಯ ನಲವತ್ತು ಐವತ್ತರ ದಶಕದಲ್ಲಿ ಬಹಳವಾಗಿತ್ತು. ಈ ಹಿನ್ನೆಲೆಯಲ್ಲಿ ಪೌಷ್ಟಿಕ ಆಹಾರವನ್ನು ಒದಗಿಸುವ ಕ್ಷೇತ್ರದಲ್ಲಿ ಅಗತ್ಯ ತಂತ್ರಜ್ಞಾನ ಮತ್ತು ಸಂಶೋಧನೆಗಳ ಅವಶ್ಯಕತೆಗಳನ್ನು ಮನಗಂಡು ಅದನ್ನು ಒದಗಿಸಿಕೊಡುವ ಉದ್ದೇಶದಿಂದ ಅಸ್ತಿತ್ವಕ್ಕೆ ಬಂದ ಸಂಸ್ಥೆ ಕೇಂದ್ರ ಆಹಾರ ತಂತ್ರಜ್ಞಾನ ಮತ್ತು ಸಂಶೋಧನಾ ಸಂಸ್ಥೆ (ಸಿಎಫ್‌ಟಿಆರ್‌ಐ). ಇಂದು ಇದು ದೇಶದಲ್ಲಷ್ಟೇ ಅಲ್ಲದೆ ದೇಶದಿಂದಾಚೆಗೂ ತನ್ನ ಕಾರ್ಯಕ್ಷೇತ್ರವನ್ನು ಹರಿಯಬಿಟ್ಟು, ಜಗತ್ತಿನಾದ್ಯಂತ ಸಂಸ್ಕರಿಸಿದ ಆಹಾರ ತಂತ್ರಜ್ಞಾನ ಮತ್ತು ಸಂಶೋಧನೆಯ ಕ್ಷೇತ್ರದಲ್ಲಿ ತನ್ನದೇ ಆದ ವಿಕ್ರಮವನ್ನು ಸ್ಥಾಪಿಸಿದೆ. ಹಾಗೆಯೇ ಈ ಸಂಸ್ಥೆಯು ಅರವತ್ತು ವರ್ಷಗಳ ಅವಧಿಯಲ್ಲಿ ದೇಶದ ಆಹಾರ ಸಂಸ್ಕರಣಾ ಕ್ಷೇತ್ರಕ್ಕೆ ನೀಡಿರುವ ಕೊಡುಗೆ ಕೂಡ ಅಪಾರವಾಗಿದ್ದು, ದೇಶದ ಆಹಾರ ಸುಭದ್ರತೆಗೆ ಸಹಕಾರಿಯಾಗಿದೆ.

ವಾಸ್ತವವಾಗಿ ಈ ಸಂಸ್ಥೆ ಸ್ಥಾಪನೆಗೊಳ್ಳುವ ಯೋಜನೆ ಸಿದ್ಧವಾದಾಗ ದೇಶದ ವಿವಿಧ ರಾಜ್ಯಗಳು ಇದನ್ನು ತಮ್ಮಲ್ಲಿಗೆ ಬರಮಾಡಿಕೊಳ್ಳಲು ಭಾರೀ ಪೈಪೋಟಿಯನ್ನೇ ನಡೆಸಿದ್ದವು. ಆದರೆ ಕರ್ನಾಟಕದ ಅದೃಷ್ಟವೋ, ಮೈಸೂರಿನ ಯೋಗವೋ ಏನೋ, ಸಿಎಫ್‌ಟಿಆರ್‌ಐ ಮೈಸೂರಿಗೆ ದಕ್ಕಿತು. ಇದರ ಹಿಂದೆ ಬಹಳಷ್ಟು ಮಂದಿಯ ಸಹಕಾರ ತುಂಬಾ ಕೆಲಸ ಮಾಡಿದೆ. ಅಂದಿನ ಪ್ರಧಾನಿ ಜವಾಹರಲಾಲ್ ನೆಹರೂ ಅವರ ಸಹಕಾರ ಕೂಡ ಇಲ್ಲಿ ಬಹುಮುಖ್ಯವಾಗಿದೆ.

ಏಕೆಂದರೆ ಕೇಂದ್ರ ಸರ್ಕಾರದ ಕೈಗಾರಿಕಾ ಸಂಶೋಧನಾ ಯೋಜನಾ ಸಮಿತಿ, ಆಹಾರ ಕೈಗಾರಿಕಾ ಉದ್ಯಮ ಸಮಿತಿಯ ಸಲಹೆಯಂತೆ ಆಹಾರ ತಂತ್ರಜ್ಞಾನ ಮತ್ತು ಸಂಶೋಧನಾಲಯ (ಸಿಎಫ್‌ಟಿಆರ್‌ಐ) ಸ್ಥಾಪಿಸಲು ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿ (ಸಿಎಸ್‌ಐಆರ್) ಯು ಸ್ವಾತಂತ್ರ್ಯ ಪೂರ್ವದಲ್ಲೇ 1943 ರಲ್ಲಿ ನಿರ್ಣಯಿಸಿತು. ಆಗ ಬಹಳಷ್ಟು ರಾಜ್ಯ ಸರ್ಕಾರಗಳು ಇದಕ್ಕೆ ಅಗತ್ಯವಿರುವ ಕಟ್ಟಡ ಮತ್ತು ವಿಸ್ತಾರವಾದ ಜಾಗ ಹಾಗೂ ಇತರೇ ಸೌಲಭ್ಯಗಳನ್ನು ನೀಡಲು ಮುಂದೆ ಬಂದಿದ್ದವು. ಇಂತಹ ಪರಿಸ್ಥಿತಿಯಲ್ಲಿ ಯಾವ ರಾಜ್ಯಕ್ಕೆ ಇದನ್ನು ಕೊಡಬೇಕೆಂಬುದರ ಚರ್ಚೆ, ಪೈಪೋಟಿಯಲ್ಲೇ ನಾಲ್ಕೈದು ವರ್ಷಗಳು ಉರುಳಿಹೋಗಿದ್ದವು. ಅಷ್ಟರಲ್ಲಾಗಲೇ ದೇಶ ಸ್ವಾತಂತ್ರ್ಯದ ಗಾಳಿಯನ್ನು ಉಸಿರಾಡುತ್ತಿತ್ತು. ಮತ್ತೆ ಈ ಸಂಶೋಧನಾ ಸಂಸ್ಥೆಯ ಸ್ಥಾಪನೆಯ ವಿಷಯ ಚಾಲ್ತಿಗೆ ಬಂತು. ಆಗ ಇತರೇ ರಾಜ್ಯಗಳ ಮನವಿಯನ್ನು ತಿರಸ್ಕರಿಸಿ ಮೈಸೂರು ರಾಜ್ಯ ಸರ್ಕಾರದ ಮನವಿ ಮತ್ತು ಆಹ್ವಾನವನ್ನು ಸ್ವೀಕರಿಸಿ ಮೈಸೂರಿನಲ್ಲೇ ಕೇಂದ್ರ ಆಹಾರ ಮತ್ತು ಸಂಶೋಧನಾ ಸಂಸ್ಥೆ (ಸಿಎಫ್‌ಟಿಆರ್‌ಐ) ಯನ್ನು ಸ್ಥಾಪಿಸುವ ನಿರ್ಣಯವನ್ನು ಕೇಂದ್ರ ಸರ್ಕಾರ ತೆಗೆದುಕೊಂಡಿತು. ಸ್ವತಃ ಅಂದಿನ ಸ್ವತಂತ್ರ ಭಾರತದ ಮೊಟ್ಟ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅವರೇ 1948ರ ಡಿಸೆಂಬರ್‌ನಲ್ಲಿ ಮೈಸೂರು ರಾಜ್ಯಕ್ಕೆ ಬಂದು ಚೆಲುವಾಂಬಾವಿಲಾಸ್ ಅರಮನೆಯ ಕಟ್ಟಡದ ಒಡೆತನವನ್ನು ಸಿಎಫ್‌ಟಿಆರ್‌ಐಗಾಗಿ ಕೇಂದ್ರ ಸರ್ಕಾರದ ವಶಕ್ಕೆ ತೆಗೆದುಕೊಂಡಿದ್ದರು.

ಆಗ ರಾಜ್ಯದ ಮೊದಲ ಮುಖ್ಯಮಂತ್ರಿ ಎಂಬ ಖ್ಯಾತಿ ಹೊತ್ತ ಅಂದಿನ ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಅವರ ನೇತೃತ್ವದಲ್ಲಿ 1949 ರಲ್ಲಿ ಯೋಜನಾ ಸಮಿತಿ ರಚಿಸಲಾಯಿತು. ಡಾ॥ ವಿ. ಸುಬ್ರಹ್ಮಣ್ಯನ್ ಅವರು ಈ ಸಮಿತಿಯ ಯೋಜನಾಧಿಕಾರಿ ಹಾಗೂ ಸದಸ್ಯರಾಗಿ ಕಾರ್ಯನಿರ್ವಹಿಸಿ ಚೆಲುವಾಂಬಾ ವಿಲಾಸ ಅರಮನೆ ಸಿಎಫ್‌ಟಿಆರ್‌ಐ ಆಗಿ ರೂಪುಗೊಳ್ಳಲು ಶ್ರಮಿಸಿದರು. ಅಂದಿನ ಮುಖ್ಯಮಂತ್ರಿ ಕೆ.ಸಿ. ರೆಡ್ಡಿಯವರಂತೂ ತುಂಬಾ ಕಾಳಜಿ ವಹಿಸಿ ಸಿಎಫ್‌ಟಿಆರ್‌ಐ ಸ್ಥಾಪನೆಗೆ ಬೇಕಾದ ಅಗತ್ಯ ಸೌಲಭ್ಯಗಳೆಲ್ಲವನ್ನೂ ಯಥೇಚ್ಛವಾಗಿಯೇ ಕಲ್ಪಿಸಿಕೊಟ್ಟಿದ್ದರು.

1949ರಲ್ಲಿಯೇ ಪ್ರಥಮ ಪ್ರಯೋಗಾಲಯ ಮತ್ತು ಗ್ರಂಥಾಲಯದೊಡನೆ ಸಿಎಫ್‌ಟಿಆರ್‌ಐ ಸಂಸ್ಥೆ ತನ್ನ ಉದ್ದೇಶಿತ ಕಾರ್ಯ ಚಟುವಟಿಕೆಯನ್ನು ಶುರು ಮಾಡಿತ್ತು. 1950ರಲ್ಲಿ ಕೇಂದ್ರ ಕೃಷಿ ಸಚಿವಾಲಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಫ್ರೂಟ್ ಟೆಕ್ನಾಲಜಿಯನ್ನು ಸೇರ್ಪಡೆಗೊಳಿಸಿ ಸಿಎಫ್‌ಟಿಆರ್‌ಐಗೊಂದು ಸ್ಪಷ್ಟ ಚಿತ್ರಣ ನೀಡಲಾಯಿತು. 1950ರ ಜುಲೈ ಮತ್ತು ಆಗಸ್ಟ್ ತಿಂಗಳಲ್ಲಿ ಇಲ್ಲಿಗೆ ಬೇಕಾದ ಉದ್ಯೋಗಿಗಳ ನೇಮಕಾತಿ ಪ್ರಕ್ರಿಯೆ ಆರಂಭವಾಗಿ ಐಐಎಸ್‌ಸಿ, ಕೊಲ್ಕತ್ತಾ ವಿಶ್ವವಿದ್ಯಾನಿಲಯದ ಅನ್ವಯಿಕ ರಸಾಯನಶಾಸ್ತ್ರ ವಿಭಾಗದವರು, ಹಲವಾರು ಸಂಶೋಧಕರು, ಅಂದಿನ ಬಾಂಬೆಯ ಕೆಮಿಕಲ್ ಟೆಕ್ನಾಲಜಿ ವಿಭಾಗದವರು ಸೇರಿದಂತೆ ಹಲವಾರು ಅನುಭವಿಗಳು ಹಾಗೂ ಬಹಳಷ್ಟು ವಿಜ್ಞಾನಿಗಳು ಸಿಎಫ್‌ಟಿಆರ್‌ಐ ಸಂಸ್ಥೆಯನ್ನು ಸಮರ್ಥವಾಗಿ ಕಟ್ಟುವ ಹೊಣೆಯನ್ನು ಹೊತ್ತುಕೊಂಡಿದ್ದರು. ತತ್ಫಲವಾಗಿ ಅಧಿಕೃತವಾಗಿ 1950ರ ಅಕ್ಟೋಬರ್ 21ರ ಶನಿವಾರದಂದು ಸಿಎಫ್‌ಟಿಆರ್‌ಐ ಅಸ್ತಿತ್ವಕ್ಕೆ ಬಂದು, ಅಂದಿನ ಕೇಂದ್ರ ಗೃಹ ಸಚಿವ ಸಿ.ರಾಜಗೋಪಾಲಾಚಾರಿ ಇದನ್ನು ಉದ್ಘಾಟಿಸಿ ದೇಶಕ್ಕೆ ಸಮರ್ಪಿಸಿದರು. ಇದರ ಸ್ಥಾಪನೆಗೆ ಶ್ರಮ ವಹಿಸಿದ್ದ ಡಾ॥ ವಿ.ಸುಬ್ರಹ್ಮಣ್ಯನ್ ಅವರು ಸಿಎಫ್‌ಟಿಆರ್‌ಐನ ಮೊಟ್ಟಮೊದಲ ಸಂಸ್ಥಾಪಕ ನಿರ್ದೇಶಕರಾದರು. ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿ (ಸಿಎಸ್‌ಐಆರ್)ಯ ಅಧೀನ ದಲ್ಲಿ ಭಾರತ ದೇಶದಲ್ಲಿ 40 ವಿವಿಧ ಸಂಶೋಧನಾ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು, ಇವುಗಳ ಪೈಕಿ 'ಸಿಎಫ್‌ಟಿಆರ್‌ಐ' ಕೂಡ ಒಂದಾಗಿದೆ.

ಸಿಎಸ್‌ಐಆರ್ ಅಡಿಯಲ್ಲಿ ಬರುವ ದೇಶದ 40 ಸಂಶೋಧನಾಲಯಗಳಲ್ಲಿ ಮೈಸೂರಿನ ಸಿಎಫ್‌ಟಿಆರ್‌ಐ ಸಂಶೋಧನಾ ಸಂಸ್ಥೆಯು ಗಮನಾರ್ಹ ಸಾಧನೆಗೈದು ವಿಶ್ವದ ಗಮನ ಸೆಳೆದಿರುವುದು ವಿಶೇಷವಾಗಿದೆ. ಸಂಸ್ಥಾಪಕ ನಿರ್ದೇಶಕ ಡಾ॥ ವಿ. ಸುಬ್ರಹ್ಮಣ್ಯನ್ ಅವರಿಂದ ಹಿಡಿದು ಪ್ರಸ್ತುತ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿರುವ ಡಾ. ಶ್ರೀದೇವಿ ಅನ್ನಪೂರ್ಣ ಸಿಂಗ್ ಅವರುಗಳ ತನಕ ಮೈಸೂರಿನ ಸಿಎಫ್‌ಟಿ ಆರ್‌ಐ ಅನೇಕ ಮಂದಿ ಪ್ರತಿಭಾವಂತ ಕ್ರಿಯಾಶೀಲ ನಿರ್ದೇಶಕರುಗಳನ್ನು ಕಂಡಿದ್ದು, ಇವರುಗಳೆಲ್ಲರ ಶ್ರಮದ ಫಲವಾಗಿ ಇಂದು ಆಹಾರ ಸಂರಕ್ಷಣೆ ಹಾಗೂ ತಂತ್ರಜ್ಞಾನ ಮತ್ತು ಸಂಶೋಧನಾ ಕ್ಷೇತ್ರದಲ್ಲಿ ಬಹುದೊಡ್ಡ ಹೆಸರಾಗಿ ಬೆಳೆದು ನಿಂತಿದೆ. ಈ ಸಂಸ್ಥೆ ಮಿತವ್ಯಯದ ಗ್ರಾಹಕ ಮತ್ತು ಜೈವಿಕಸ್ನೇಹಿ ಉತ್ಪನ್ನಗಳನ್ನು ಮಾರುಕಟ್ಟೆಗೆ ಬಿಡುಗಡೆಗೊಳಿಸುವುದರ ಜೊತೆಗೆ ಸ್ಥಳೀಯ ತಂತ್ರಜ್ಞಾನಕ್ಕೆ ಹೆಚ್ಚು ಒತ್ತು ಕೊಡುತ್ತಾ ಬಂದಿದ್ದು, ಜೀವ ರಸಾಯನಶಾಸ್ತ್ರ, ಪೌಷ್ಟಿಕತೆ, ಹಿಟ್ಟಿನ ಗಿರಣಿ, ಬೇಕರಿ ಆಹಾರ, ಎಂಜಿನಿಯರಿಂಗ್, ಆಹಾರ ಸಂರಕ್ಷಣೆ, ಹಣ್ಣು ಮತ್ತು ತರಕಾರಿ ತಂತ್ರಜ್ಞಾನ, ಹೈನುಗಾರಿಕೆ ತಂತ್ರಜ್ಞಾನ... ಹೀಗೆ 25ಕ್ಕೂ ಹೆಚ್ಚು ಸಂಶೋಧನಾ ವಿಭಾಗಗಳನ್ನು ಹೊಂದಿರುವ ಈ ಸಂಸ್ಥೆಯಲ್ಲಿ ನೂರಾರು ವಿದ್ಯಾರ್ಥಿಗಳು ಸ್ನಾತಕೋತ್ತರ ಹಾಗೂ ಪಿಎಚ್‌ಡಿ ಪದವಿಗಾಗಿ ಅಧ್ಯಯನ ಮಾಡುತ್ತಿದ್ದಾರೆ. ಸಿಎಫ್‌ಟಿ ಆರ್‌ಐನ ಪದವಿಗೆ ಅಂತರಾಷ್ಟ್ರೀಯ ಮಟ್ಟದಲ್ಲಿ ಮಾನ್ಯತೆ ಇರುವುದರಿಂದ ಇಲ್ಲಿ ಅಧ್ಯಯನ ಮತ್ತು ಸಂಶೋಧನೆಗೆ ಬಹಳ ಬೇಡಿಕೆಯುಂಟು.

ಇದೊಂದು ವಿಜ್ಞಾನ ಲೋಕವೇ ಆಗಿದ್ದು, 400ಕ್ಕೂ ಅಧಿಕ ಮಂದಿ ವಿಜ್ಞಾನಿಗಳು, 300ಕ್ಕೂ ಹೆಚ್ಚು ಮಂದಿ ತಂತ್ರಜ್ಞರು ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಸಿಎಫ್‌ಟಿಆರ್‌ಐ ಸಂಸ್ಥೆಯು ನೂರಕ್ಕೂ ಅಧಿಕ ತಂತ್ರಜ್ಞಾನಗಳಿಗೆ ಪೇಟೆಂಟ್ ಪಡೆದಿದೆ ಎಂದರೆ ಅದು ಸಾಮಾನ್ಯವೇನಲ್ಲ. ದೋಸೆ ತಯಾರಿಕಾ ಯಂತ್ರ, ಪರಿಶುದ್ಧ ಕಬ್ಬಿನ ಹಾಲು ನೀಡುವ ಯಂತ್ರಗಳು ಇಲ್ಲಿನ ಜನಪ್ರಿಯ ಸಂಶೋಧನೆಗಳು. ಸುಮಾರು ನಾಲ್ಕೂವರೆ ದಶಕಗಳಿಂದಲೂ ಮನೆ ಮನೆ ಮಾತಾಗಿರುವ ಅಮೂಲ್ ಬೇಬಿ ಫುಡ್ ಕಂಪನಿಯ ಆಹಾರಗಳು ಸಿಎಫ್‌ಟಿಆರ್‌ಐನ ತಂತ್ರಜ್ಞಾನದ ಕೊಡುಗೆಗಳೇ ಆಗಿದೆ. ಹೊಸ ಹೊಸ ಉತ್ಪನ್ನಗಳ ಸಂಶೋಧನೆ ಮಾತ್ರವಲ್ಲದೆ ಆಹಾರ ಸಂರಕ್ಷಣೆಯ ಬಗ್ಗೆಯೂ ವಿಶೇಷ ಕಾಳಜಿ ಹೊಂದಿರುವ ಇದು ಆಹಾರ ಪದಾರ್ಥಗಳಿಗೆ ಡಿಡಿಟಿ ಸಿಂಪಡಿಸುವುದರಿಂದ ಆಗುವ ಅಪಾಯದ ಬಗ್ಗೆ ಮೊದಲು ಎಚ್ಚರಿಕೆ ನೀಡಿದ ಸಂಸ್ಥೆಯಾಗಿದೆ. ಹಾಗೆಯೇ ತಂತ್ರಜ್ಞಾನವನ್ನು ಪ್ರಯೋಗಾಲಯದಿಂದ ಜಮೀನಿಗೆ (ಲ್ಯಾಬ್ ಟು ಲ್ಯಾಂಡ್) ಹರಿಸಿದ ಹೆಗ್ಗಳಿಕೆ ಕೂಡ 'ಸಿಎಫ್‌ಟಿಆರ್‌ಐ'ಗಿದೆ. ಹೀಗೆ ಹೇಳುತ್ತಾ ಹೋದರೆ ಸಿಎಫ್‌ಟಿಆರ್‌ಐ ಸಂಸ್ಥೆಯ ಬತ್ತಳಿಕೆಯಲ್ಲಿ ಬೇಕಾದಷ್ಟು ಸಾಧನೆಗಳಿವೆ. ಒಟ್ಟಾರೆ ಇದೊಂದು ಸಾಧಕರ, ಸಾಧನೆಯ ಮಹಾಲೋಕವೇ ಆಗಿದೆ.

ಅಕ್ರಮ ದಾಸ್ತಾನು, ಅಧಿಕ ಬೆಲೆಗೆ ರಸಗೊಬ್ಬರ ಮಾರಾಟ ಆರೋಪ; ರಾಜ್ಯ ರೈತ ಸಂಘ ಪ್ರತಿಭಟನೆ

● ಮಳಿಗೆ ಮಾಲೀಕರ ವಿರುದ್ಧ ತನಿಖೆಗೆ ಒತ್ತಾಯ ● ರೈತ ಮುಖಂಡರ ಮೇಲೆ ದೌರ್ಜನ್ಯ ಆರೋಪ



ಮೈಸೂರು,ಅ.20(ಪಿಎಂ)– ಹುಣಸೂರು ತಾಲೂಕು ಹೊಸೂರು ಗ್ರಾಮದ ರಸಗೊಬ್ಬರದ ಮಳಿಗೆಯೊಂದರಲ್ಲಿ ಅಕ್ರಮ ದಾಸ್ತಾನಿರಿಸಿ, ಅಧಿಕ ಬೆಲೆಗೆ ರಸಗೊಬ್ಬರ ಮಾರಾಟ ಮಾಡಲಾಗುತ್ತಿದೆ ಎಂದು ಆರೋಪಿಸಿ, ಇದರ ಬಗ್ಗೆ ಸೂಕ್ತ ತನಿಖೆ ನಡೆಸಬೇಕೆಂದು ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘದ ವತಿಯಿಂದ ಗುರುವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಕಾಡಾ ಕಚೇರಿ ಆವರಣದಲ್ಲಿರುವ ಕೃಷಿ ಇಲಾಖೆ ಜಂಟಿ ನಿರ್ದೇಶಕರ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಹೊಸೂರು ಗ್ರಾಮದ ಮೇಘ ಟ್ರೇಡರ್ಸ್‌ನ ರಸಗೊಬ್ಬರ ಮಳಿಗೆಯಲ್ಲಿ ಅಧಿಕ ಬೆಲೆಗೆ ರಸಗೊಬ್ಬರ ಮಾರಾಟ ಮಾಡಲಾಗುತ್ತಿದೆ. ಈ ಮಳಿಗೆ ಮಾಲೀಕರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು. ಸದರಿ ಮಳಿಗೆಯ ಪರವಾನಗಿ ರದ್ದುಪಡಿಸಬೇಕು ಎಂದು ಒತ್ತಾಯಿಸಿದರು.

ಸದರಿ ಮಳಿಗೆ ಮಾಲೀಕ ಅಣ್ಣಯ್ಯ ಉರುಫ್ ರಾಮಕೃಷ್ಣ ಅಕ್ರಮದಲ್ಲಿ ತೊಡಗಿದ್ದು, ಯೂರಿಯಾ ಮತ್ತು ಇತರೆ ರಸಗೊಬ್ಬರವನ್ನು ಕೇರಳ ರಾಜ್ಯಕ್ಕೆ ಅಕ್ರಮ ಸಾಗಾಣಿಕೆ ಮಾಡಿ ಮಾರಾಟ ಮಾಡುತ್ತಿದ್ದಾರೆ. ಅಲ್ಲದೆ, ರಸಗೊಬ್ಬರವನ್ನು ಬೇರೆ ಬೇರೆ ಮನೆಗಳಲ್ಲಿ ಅಕ್ರಮವಾಗಿ ದಾಸ್ತಾನು ಮಾಡಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದಾರೆ. ಜೊತೆಗೆ ಕಳಪೆ ಮುಸುಕಿನ ಜೋಳದ ಬೀಜವನ್ನು ರೈತರಿಗೆ ನೀಡಿ ಫಸಲು ನಷ್ಟ ಮಾಡಿದ್ದಾರೆ ಎಂದು ಆರೋಪಿಸಿದರು.

ಈ ಗೊಬ್ಬರ ಮಳಿಗೆಯ ಅಕ್ರಮ ವ್ಯವಹಾರವನ್ನು ರೈತರು ಪ್ರಶ್ನೆ ಮಾಡದಂತೆ ಭಯದ ವಾತಾವರಣ ಸೃಷ್ಟಿ ಮಾಡಲಾಗಿದೆ. ಪ್ರಶ್ನಿಸಿದವರ ಮೇಲೆ ಮಳಿಗೆ ಮಾಲೀಕರು ಗೂಂಡಾಗಳ ಮೂಲಕ ಬೆದರಿಕೆ ಹಾಕಿಸುತ್ತಿದ್ದಾರೆ. ರೈತ ಸಂಘದ ಮೈಸೂರು ಜಿಲ್ಲಾಧ್ಯಕ್ಷ ಹೊಸೂರು ಕುಮಾರ್ ಕಳೆದ ವಾರ ಮಳಿಗೆ ಬಳಿ ಹೋಗಿ ರೈತರಿಗೆ ಮೋಸ ಮಾಡದೇ ನಿಗದಿತ ಬೆಲೆಯಲ್ಲಿ ಮಾರಾಟ ಮಾಡುವಂತೆ ಸೌಜನ್ಯದಿಂದ ಸಲಹೆ ನೀಡಿದರೆ, ಅವರ ಮೇಲೆ ಗಲಾಟೆ ನಡೆಸಿ, ದೌರ್ಜನ್ಯ ನಡೆಸಲಾಗಿದೆ ಎಂದು ದೂರಿದರು.

ಈ ಸಂಬಂಧ ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಸದರಿ ಮಳಿಗೆ ಮಾಲೀಕರು ಹಾಗೂ ಅವರ ಸಹಚರರ ವಿರುದ್ಧ ದೂರು ನೀಡಲಾಗಿದೆ. ರೈತ ಸಂಘದ ಕಾರ್ಯಕರ್ತರು, ತಾಲೂಕು ಕೃಷಿ ನಿರ್ದೇಶಕರನ್ನು ಕರೆಸಿ ಅವರ ಸಮ್ಮುಖದಲ್ಲಿ ಅಕ್ರಮವಾಗಿ ಸಂಗ್ರಹಿಸಿಟ್ಟಿದ್ದ ಯೂರಿಯಾ ಚೀಲಗಳನ್ನು ತೋರಿಸಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸದರಿ ಮಳಿಗೆಯ ಅಕ್ರಮದ ಬಗ್ಗೆ ದೂರು ನೀಡಿ ದಿನಗಳು ಕಳೆಯುತ್ತಿದ್ದರೂ ಈವರೆಗೆ ಸೂಕ್ತ ತನಿಖೆ ನಡೆದಿಲ್ಲ. ಕೃಷಿ ಇಲಾಖೆಯ ಹುಣಸೂರು ಡಿಡಿ ಮತ್ತು ಎಡಿ ಹೊರತುಪಡಿಸಿ ಬೇರೆ ಅಧಿಕಾರಿಗಳ ಮೂಲಕ ತನಿಖೆ ನಡೆಸಿ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಇದಕ್ಕೂ ಮುನ್ನ ಗನ್‌ಹೌಸ್ ವೃತ್ತದಿಂದ ಕಾಡಾ ಕಚೇರಿ ಸಂಕೀರ್ಣದವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು. ಸಂಘದ ಹಿರಿಯ ಮುಖಂಡ ಅಶ್ವತ್ಥನಾರಾಯಣ್ ರಾಜೇ ಅರಸ್, ಮುಖಂಡರಾದ ಪ್ರಸನ್ನ ಎನ್.ಗೌಡ, ಪಿ.ಮರಂಕಯ್ಯ, ಹೊಸಕೋಟೆ ಬಸವರಾಜು, ನೇತ್ರಾವತಿ, ಆನಂದೂರು ಪ್ರಭಾಕರ್, ಬೆಂಕಿಪುರ ಚಿಕ್ಕಣ್ಣ, ಮಲ್ಲೇಶ್, ಶಿರಮಳ್ಳಿ ಸಿದ್ದಪ್ಪ, ಕರೋಟ್ಟಿ ಕುಮಾರಸ್ವಾಮಿ, ಕೆಂಪುಗೌಡ, ಮೈಸೂರು ಜಿಲ್ಲಾಧ್ಯಕ್ಷ ಹೊಸೂರು ಕುಮಾರ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಕೃಷಿ ಇಲಾಖೆಯ ರಾಜ್ಯ ವಿಚಕ್ಷಣ ದಳದಿಂದ ತನಿಖೆಗೆ ಶಿಫಾರಸು; ಕೃಷಿ ಜೆಡಿ ಭರವಸೆ

ಮೈಸೂರು,ಅ.20(ಪಿಎಂ)– ಹೊಸೂರಿನ ಮೇಘ ಟ್ರೇಡರ್ಸ್‌ನ ರಸಗೊಬ್ಬರ ಮಳಿಗೆಯಲ್ಲಿ ಅಧಿಕ ಬೆಲೆಗೆ ರಸಗೊಬ್ಬರ ಮಾರಾಟ, ಅಕ್ರಮ ದಾಸ್ತಾನು ಆರೋಪ ಸಂಬಂಧ ಕೃಷಿ ಇಲಾಖೆ ರಾಜ್ಯ ವಿಚಕ್ಷಣಾ ದಳದಿಂದ ತನಿಖೆ ನಡೆಸಲು ಶಿಫಾರಸು ಮಾಡುವುದಾಗಿ ಕೃಷಿ ಇಲಾಖೆ ಜಂಟಿ ನಿರ್ದೇಶಕ ಚಂದ್ರಶೇಖರ್ ತಿಳಿಸಿದರು.

ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಜಂಟಿ ನಿರ್ದೇಶಕರು 2 ತಾಸಿಗೂ ಅಧಿಕ ಕಾಲ ಪ್ರತಿಭಟನಾನಿರತ ರೈತರ ಬೇಡಿಕೆಗಳನ್ನು ಆಲಿಸಿದರು. ಆಕ್ರೋಶ ಭರಿತವಾಗಿ ಮಾತನಾಡಿದ ಹಲವು ರೈತರು, ಶೀಘ್ರ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

ಬಳಿಕ ಮಾತನಾಡಿದ ಇಲಾಖೆಯ ಜಂಟಿ ನಿರ್ದೇಶಕರು, ಸದರಿ ಪ್ರಕರಣ ಸಂಬಂಧ ವಿಚಾರಣೆಗಾಗಿ ಈಗಾಗಲೇ ಇಲಾಖೆಯ ಎಡಿ ಮತ್ತು ಡಿಡಿ ನೇತೃತ್ವದಲ್ಲಿ ತಂಡ ರಚನೆ ಮಾಡಲಾಗಿದೆ. ಈ ತಂಡದ ನೇತೃತ್ವದಲ್ಲಿ ವಿಚಾರಣೆ ಬೇಡವೆಂಬ ತಮ್ಮ ಬೇಡಿಕೆ ಹಿನ್ನೆಲೆಯಲ್ಲಿ ರಾಜ್ಯ ವಿಚಕ್ಷಣ ದಳದಿಂದ ತನಿಖೆ ನಡೆಸಲು ಶಿಫಾರಸು ಮಾಡಲಾಗುವುದು ಎಂದು ಪ್ರಕಟಿಸಿದರು. ರೈತ ಮುಖಂಡರ ಸಭೆ ಕರೆಯಲು ಹೇಳಿದ್ದೀರಿ. ಎಲ್ಲಾ ತಾಲೂಕಿನ ಸಹಾಯಕ ಕೃಷಿ ನಿರ್ದೇಶಕರು, ರೈತರ ಮುಖಂಡರ ಸಭೆಯನ್ನು ಶೀಘ್ರದಲ್ಲಿ ಕರೆಯಲಾಗುವುದು. ನಾಳೆಯೇ ಸದರಿ ಮಳಿಗೆಗೆ ರಸಗೊಬ್ಬರ ಮಾರಾಟ ತಡೆ ಆದೇಶ ನೀಡಲಾಗುವುದು ಎಂದು ಭರವಸೆ ನೀಡಿದರು. ನಂತರ ರೈತರು ಪ್ರತಿಭಟನೆ ಕೈಬಿಟ್ಟರು.



ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನ ಕಚೇರಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ಡಾ.ಮಹೇಶ್ ಜೋಶಿ ಅವರು ವೈದ್ಯ ಸಾಹಿತಿ ಡಾ.ಎಸ್.ಪಿ. ಯೋಗಣ್ಣ ಅವರನ್ನು ರಾಜ್ಯಮಟ್ಟದ ಮಾರ್ಗಸೂಚಿ ಸಮಿತಿಗೆ ಸದಸ್ಯರನ್ನಾಗಿ ನೇಮಿಸಿ, ಆದೇಶ ಪತ್ರ ನೀಡಿದರು.

ನಾಳೆ ಉಚಿತ ಮೂಳೆ ಸಾಂದ್ರತೆ ಪರೀಕ್ಷೆ ಶಿಬಿರ

ಮೈಸೂರು,ಅ.20–ಮೈಸೂರಿನ ದೀಕ್ಷಿತ್ ಆರೋಗ್ಯ ಧಾಮದ ಅಂಗ ಸಂಸ್ಥೆ ದೀಕ್ಷಿತ್ ಆರ್ಥೋ ಕೇರ್ ವತಿಯಿಂದ ಅ.22ರಂದು ಬೆಳಗ್ಗೆ 9ರಿಂದ ಮಧ್ಯಾಹ್ನ 1 ರವರೆಗೆ ದೀಕ್ಷಿತ್ ಆರೋಗ್ಯ ಧಾಮದಲ್ಲಿ ಉಚಿತ ಮೂಳೆ ಸಾಂದ್ರತೆ ಪರೀಕ್ಷೆ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ದೂ.0821–2511619, 2513619 ಸಂಪರ್ಕಿಸಬಹುದು.

ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿ

ಮೈಸೂರು,ಅ.20–ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ ಕಾನ್‌ಸ್ಟೇಬಲ್ ಸಿವಿಲ್ ಹುದ್ದೆಗಳಿಗೆ ನೇರ ನೇಮಕಾತಿಗಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದ್ದು, ಈ ಸಂಬಂಧ ವಿಜಯನಗರ 2ನೇ ಹಂತದಲ್ಲಿರುವ ಕೃಷಿಕ್ ಸರ್ವೋದಯ ಫೌಂಡೇಷನ್‌ನಲ್ಲಿ ತರಬೇತಿ ಹಮ್ಮಿಕೊಳ್ಳಲಾಗಿದೆ. ಆಸಕ್ತರುತಮ್ಮ ಹೆಸರು ನೋಂದಾಯಿಸಿಕೊಳ್ಳಲು ಕೋರಲಾಗಿದೆ. ಮಾಹಿತಿಗೆ ದೂ. 0821–2301564, 9945752592 ಸಂಪರ್ಕಿಸಬಹುದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಹೊಸ ತಂಡದಿಂದ
ಹೊಸ ದಿನಚರಿ



ಮತ್ತೊಂದು ಹೊಸಬರ ತಂಡದಿಂದ "ಹೊಸ ದಿನಚರಿ" ಸಿನಿಮಾ ನಿರ್ಮಾಣವಾಗಿದೆ. ಈ ಚಿತ್ರದ ಪೋಸ್ಟರ್ ಬಿಡುಗಡೆ ಸಮಾರಂಭ ಇತ್ತೀಚೆಗೆ ನಡೆಯಿತು. ಮುಖ್ಯ ಅತಿಥಿಯಾಗಿ ಮಾತನಾಡಿದ ಹಿರಿಯ ನಿರ್ದೇಶಕ ಟಿ.ಎಸ್. ನಾಗಾಭರಣ ಕನ್ನಡ ಚಿತ್ರರಂಗದಲ್ಲಿ ಎರಡು ದಶಕಕೊಮ್ಮೆ ಒಂದು ಬದಲಾವಣೆ ಆಗುತ್ತಿರುತ್ತದೆ. ಎಂಭತ್ತರಲ್ಲಿ, ಎರಡು ಸಾವಿರದಲ್ಲಿ ಈಗ ಎರಡು ಸಾವಿರದ ಇಪ್ಪತ್ತರಲ್ಲಿ ಆದ ಬದಲಾವಣೆ ನೀವೆಲ್ಲ ಕಂಡಿದ್ದೀರಿ. ಚಿತ್ರದ ಟ್ರೈಲರ್ ನೋಡಿದರೆ ಈ ತಂಡದಿಂದ ಒಳ್ಳೆಯ ಚಿತ್ರ ಬರುವ ನಿರೀಕ್ಷೆಯಿದೆ. ಇಂತಹ ಯುವ ಉತ್ಸಾಹಿ ಪ್ರತಿಭಾವಂತರ ತಂಡಗಳು ಹೆಚ್ಚು ಬಂದರೆ ಎರಡು ದಶಕಗಳಿಗಾಗುತ್ತಿರುವ ಬದಲಾವಣೆ ದಶಕಕ್ಕೇ ಆಗಲಿದೆ ಎಂದರು. ಈ ಚಿತ್ರಕ್ಕೆ ಇಬ್ಬರು ನಿರ್ದೇಶಕರು, ಕೀರ್ತಿ ಶೇಖರ್ ಹಾಗೂ ವೈಶಾಖ್ ಜಂಟಿಯಾಗಿ ಆಕ್ಷನ್ ಕಟ್ ಹೇಳಿದ್ದಾರೆ.

ಎಲ್ಲರ ಜೀವನದಲ್ಲೂ ಪ್ರೀತಿ ಇದ್ದೇ ಇರುತ್ತದೆ. ಆದರೆ ಪ್ರೀತಿಸಿದ ವ್ಯಕ್ತಿ ಕೊನೆಯವರೆಗೂ ಇರುತ್ತಾರಾ? ಅವರಿಲ್ಲದೇ ಬೇರೊಬ್ಬರು ಜೀವನದಲ್ಲಿ ಬಂದಾಗ ಏನಾಗುತ್ತದೆ? ಎಂಬುದೇ "ಹೊಸ ದಿನಚರಿ"ಯ ಕಥಾಹಂದರ. ಈ ಹಿಂದೆ ಕೆಲವು ಕಿರುಚಿತ್ರಗಳನ್ನು ಮಾಡಿದ ಅನುಭವ ಈ ನಿರ್ದೇಶಕರಿಗಿದೆ.

ಇನ್ನು ಈ ಚಿತ್ರಕ್ಕೆ ನಿರ್ಮಾಪಕರಾಗಿ ಮೃತ್ಯುಂಜಯ ಶುಕ್ಲ, ಅಲೋಕ್ ಚೌರಾಸಿಯಾ ಹಾಗೂ ಗಂಗಾಧರ ಸಾಲಿಮಠ ಬಂಡವಾಳ ಹೂಡಿದ್ದಾರೆ. ಡಿಸೆಂಬರ್ 9 ರಂದು ಈ ಚಿತ್ರ ತೆರೆಗೆ ಬರುತ್ತಿದೆ.

ಈ ಹಿಂದೆ "ಆಯನ" ಎಂಬ ಚಿತ್ರ ನಿರ್ಮಿಸಿದ್ದೆ. ಇದು ಎರಡನೇ ಚಿತ್ರ. ಕಥೆ ಇಷ್ಟವಾಯಿತು. ಹಾಗಾಗಿ ನಿರ್ಮಾಣಕ್ಕೆ ಮುಂದಾದೆ ಎಂದು ನಿರ್ಮಾಪಕ ಗಂಗಾಧರ ಸಾಲಿಮಠ ಹೇಳಿದರು.

'ಯೆಲ್ಲೋ ಗ್ಯಾಂಗ್' ಟ್ರೇಲರ್ ಬಿಡುಗಡೆ

'ಯೆಲ್ಲೋ ಗ್ಯಾಂಗ್' ಚಿತ್ರದಲ್ಲಿ ದೇವ್ ದೇವಯ್ಯ, ಅರ್ಚನಾ ಕೊಟ್ಟಿಗೆ



ಇತ್ತೀಚೆಗೆ ಮಾಮೂಲಿ ಕಥೆಗಳನ್ನು ಬಿಟ್ಟು, ವಿಭಿನ್ನ ಕಥಾಹಂದರ ಹೊಂದಿರುವ ಚಿತ್ರಗಳಿಗೆ ಕನ್ನಡ ಪ್ರೇಕ್ಷಕರು ಜೈ ಎನ್ನುತ್ತಿದ್ದಾರೆ. ಅಂಥದ್ದೇ ಕ್ರೈಮ್, ಥ್ರಿಲ್ಲರ್ ಕಥಾಹಂದರ ಹೊಂದಿರುವ ಮತ್ತೊಂದು ಚಿತ್ರ "ಯೆಲ್ಲೋ ಗ್ಯಾಂಗ್". ಈ ಚಿತ್ರದ ಟ್ರೇಲರ್ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನೆರವೇರಿತು. ಹಲವಾರು ಸ್ನೇಹಿತರು ಸೇರಿ ನಿರ್ಮಾಣ ಮಾಡಿರುವ ಈ ಚಿತ್ರ ನ.11ಕ್ಕೆ ತೆರೆ ಕಾಣುತ್ತಿದೆ. ನಿರ್ದೇಶಕ ರವೀಂದ್ರ ಪರಮೇಶ್ವರಪ್ಪ ಮಾತನಾಡಿ ಬೇರೆ ಉದ್ಯೋಗದಲ್ಲಿದ್ದ ನನ್ನನ್ನು ಚಿತ್ರರಂಗ ಆಕರ್ಷಿಸಿತು. ಮೊದಲ ಪ್ರಯತ್ನವಾಗಿ ಈ ಚಿತ್ರ ನಿರ್ದೇಶಿಸಿದ್ದೇನೆ. ಕನ್ನಡದಲ್ಲಿ ಕ್ರೈಮ್, ಥ್ರಿಲ್ಲರ್ ಚಿತ್ರಗಳು ಬಂದಿವೆಯಾದರೂ, ಈ ಚಿತ್ರವೇ ಬೇರೆಯಾಗಿದೆ, ನಾಯಕ ದೇವ್ ದೇವಯ್ಯ, ನಾಯಕಿ ಅರ್ಚನಾ ಕೊಟ್ಟಿಗೆ ಸೇರಿದಂತೆ ಹತ್ತೊಂಬತ್ತು ಪ್ರಮುಖ ಪಾತ್ರಗಳು ನಮ್ಮ ಚಿತ್ರದಲ್ಲಿವೆ. ಎಲ್ಲಾ ಪಾತ್ರಗಳ ಮೇಲೂ ನಮ್ಮ ಚಿತ್ರದ ಕಥೆ ಸಾಗುತ್ತದೆ. ಕಥೆಯಲ್ಲಿ ಮೂರು ಗ್ಯಾಂಗ್‌ಗಳಿದ್ದು, ಅದಕ್ಕೆ ಮೂರು ಜನ ಮುಖ್ಯಸ್ಥರಿರುತ್ತಾರೆ. ಸುಜ್ಞಾನ್ ಅವರ ಛಾಯಾಗ್ರಹಣ ಹಾಗೂ ರೋಹಿತ್ ಸೋವರ್ ಅವರ ಸಂಗೀತ ಈ ಚಿತ್ರದ ಹೈಲೈಟ್. ಇಡೀ ಚಿತ್ರವನ್ನು ಟ್ರಾಲಿ ಬಳಸದೆ, ಕೈಯಲ್ಲಿ ಕ್ಯಾಮೆರಾ ಹಿಡಿದು ಚಿತ್ರಿಸಿದ್ದೇವೆ. ಇಂಥ ಹಲವಾರು ವಿಶೇಷತೆಗಳು ನಮ್ಮ ಚಿತ್ರದಲ್ಲಿವೆ ಎಂದು ಹೇಳಿದರು. ವಿಭಿನ್ನ ಸ್ಟುಡಿಯೋಸ್, ವಾಟ್‌ನೆಕ್ಸ್ಟ್ ಮೂವೀಸ್ ಹಾಗೂ ಕೀಲೈಟ್ಸ್ ಮೂಲಕ ನಿರ್ಮಾಣವಾಗಿರುವ ಈ ಚಿತ್ರಕ್ಕೆ ಶಿವಮೊಗ್ಗದ ನವೋದಯ ಶಾಲೆಯಲ್ಲಿ ಓದಿರುವ ವಿದ್ಯಾರ್ಥಿಗಳೆಲ್ಲ ಸೇರಿ ಬಂಡವಾಳ ಹಾಕಿದ್ದಾರೆ. ನಮ್ಮ ಸಂಸ್ಥೆಗೆ ವಿಭಿನ್ನ ಸ್ಟುಡಿಯೋಸ್ ಎನ್ನುವ ಹೆಸರಿಟ್ಟಿದ್ದೇವೆ ಎಂದು ನಿರ್ಮಾಪಕರಲ್ಲೊಬ್ಬರಾದ ನಿರಂಜನ್ ಹೇಳಿದರು.

ಸಿನಿ ತಾರೆಯರ ಟೂರ್ನಿವಲ್‌ಗೆ ಚಾಲನೆ



ಅನೆಲ್ಪ್ ಎಂಟರ್‌ಟೈನ್‌ಮೆಂಟ್ ಹಾಗೂ ವೈಟ್ ಲೋಟಸ್ ಎಂಟರ್‌ಟೈನ್‌ಮೆಂಟ್ ಸಹಯೋಗದೊಂದಿಗೆ ಆಯೋಜಿಸಲಾಗಿರುವ ಸಿನಿ ತಾರೆಯರ ಟೂರ್ನಿವಲ್‌ನ ಉದ್ಘಾಟನಾ ಕಾರ್ಯಕ್ರಮ ಇತ್ತೀಚೆಗೆ ಅದ್ದೂರಿಯಾಗಿ ನೆರವೇರಿತು. ಶ್ರೀಲಂಕಾ ಪ್ರವಾಸೋದ್ಯಮ ಸಚಿವ ಡಯಾನ ಗ್ಯಾಮೇಜ್, ಮಾಲ್ಡೀವ್ಸ್‌ನ ಪ್ರವಾಸೋದ್ಯಮ ಸಚಿವ ಇಬ್ರಾಹಿಂ ರಷೀದ್, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಭಾ.ಮಾ.ಹರೀಶ್, ನಟಿ ಪ್ರಿಯಾಂಕ ಉಪೇಂದ್ರ, ನಟ ಅಜಯ್‌ರಾವ್, ನಾಗತಿಹಳ್ಳಿ ಚಂದ್ರಶೇಖರ್, ಜಾಕೀರ್ ಹುಸೇನ್ ಸೇರಿದಂತೆ ಚಿತ್ರೋದ್ಯಮದ ಅನೇಕ ಗಣ್ಯರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಟೂರ್ನಿವಲ್ ಎಂದರೆ ಸೌತ್ ಏಷ್ಯಾ ದೇಶಗಳ ನಡುವಿನ ಕಲೆ ಮತ್ತು ಸಾಂಸ್ಕೃತಿಕ ವಿನಿಮಯ. ನಮ್ಮ ರಾಜ್ಯದ ಸಿನಿತಾರೆಯರು ಹಾಗೂ ಮಾಲ್ಡೀವ್ಸ್‌ನ ಸಿನಿತಾರೆಯರ ನಡುವೆ ನಡೆಯುವ ಫುಟ್ಬಾಲ್ ಟೂರ್ನಮೆಂಟ್. ಕ್ರೀಡೆಯಷ್ಟೇ ಅಲ್ಲ. ಬೇರೆಬೇರೆ ರೀತಿಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಭಾರತ, ಶ್ರೀಲಂಕಾ ಹಾಗೂ ಮಾಲ್ಡೀವ್ಸ್ ಈ ಮೂರೂ ದೇಶಗಳಲ್ಲಿ ನಡೆಸುವ ಉದ್ದೇಶವಿದೆ. ಇಲ್ಲಿನ ಚಿತ್ರಗಳು ಮಾಲ್ಡೀವ್ಸ್‌ನಲ್ಲೂ ಬಿಡುಗಡೆಯಾಗಲಿವೆ ಎಂದು ಟೂರ್ನಿವಲ್‌ನ ಮ್ಯಾನೇಜಿಂಗ್ ಡೈರೆಕ್ಟರ್ ಪೂಜಾಶ್ರೀ ಅವರು ವಿವರಣೆ ನೀಡಿದರು. ಈ ಸಂಸ್ಥೆಯವರು ತುಂಬಾ ಒಳ್ಳೆಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ಅವರಿಗೆ ಬೇಕಾದ ಸಹಕಾರ ನೀಡಲು ನಾವುಗಳು ಸಿದ್ದರಿದ್ದೇವೆ ಎಂದು ಮಾಲ್ಡೀವ್ಸ್ ಪ್ರವಾಸೋದ್ಯಮ ಸಚಿವ ಇಬ್ರಾಹಿಂ ರಷೀದ್ ಹಾಗೂ ಶ್ರೀಲಂಕಾ ಪ್ರವಾಸೋದ್ಯಮ ಸಚಿವ ಡಯನಾ ಗ್ಯಾಮೇಜ್ ಅವರುಗಳು ತಿಳಿಸಿದರು. ಈ ಸಂದರ್ಭದಲ್ಲಿ ಫ್ಯಾಷನ್ ಶೋ ಸೇರಿದಂತೆ ವಿವಿಧ ಮನೋರಂಜನಾ ಕಾರ್ಯಕ್ರಮಗಳನ್ನು ಆಯೋಜಿಸಲಾ ಗಿತ್ತು. ಅಲ್ಲದೆ ಇದೇ ಸಂಸ್ಥೆಯಿಂದ ನಿರ್ಮಾಣ ವಾಗುತ್ತಿರುವ 'ಲೈಫ್ ಆಫ್ ಕಾಕ್ರೋಚ್' ಚಿತ್ರದ ಶೀರ್ಷಿಕೆಯ ಅನಾವರಣವೂ ನಡೆಯಿತು.

ಇಂದಿನಿಂದ ವಿಷ್ಣುಮಂಚು ಅಭಿನಯದ 'ಜಿನ್ನಾ'



ಟಾಲಿವುಡ್‌ನ ಖ್ಯಾತನಟ ನಟ ವಿಷ್ಣುಮಂಚು ನಾಯಕನಾಗಿ ನಟಿಸಿರುವ ಆ್ಯಕ್ಷನ್, ಕಾಮಿಡಿ ಜಾನರ್ ಚಿತ್ರ 'ಜಿನ್ನಾ' ತೆಲುಗು, ಮಲೆಯಾಳಂ ಹಾಗೂ ಹಿಂದಿ ಭಾಷೆಗಳಲ್ಲಿ ಇಂದಿನಿಂದ ವಿಶ್ವಾದ್ಯಂತ ತೆರೆಗೆ ಬರುತ್ತಿದೆ. ಚಿತ್ರದ ಪ್ರಾರಂಭಕ್ಕೆಂದೇ ಬೆಂಗಳೂರಿಗೆ ಬಂದಿದ್ದ ನಾಯಕ ವಿಷ್ಣು ಮಂಚು, ಹಿಂದೆ 2012ರಲ್ಲಿ ನಾನು ಬೆಂಗಳೂರಿಗೆ ಬಂದಿದ್ದ ಆಗ ನನಗೆ ಅಂಬರೀಶ್ ಅವರು ತುಂಬಾ ಸಪೋರ್ಟ್ ಮಾಡಿದ್ದರು. ಜಿನ್ನಾ ಚಿತ್ರವನ್ನು ಕರ್ನಾಟಕದಲ್ಲಿ ಬಿಡುಗಡೆ ಮಾಡುವಂತೆ ರಾಕ್‌ಲೈನ್ ವೆಂಕಟೇಶ್ ಅವರನ್ನು ಕೇಳಿದಾಗ, ಅವರು ವಿತರಕ ವೆಂಕಟೇಶ್‌ರನ್ನು ಪರಿಚಯಿಸಿದರು. ವೆಂಕಟೇಶ್ ಅವರು ನಮ್ಮ ಚಿತ್ರವನ್ನು ಕರ್ನಾಟಕದಲ್ಲಿ ಬಿಡುಗಡೆ ಮಾಡುತ್ತಿದ್ದಾರೆ.

ಇದು ನನ್ನ ಫೇವರಿಟ್ ಆ್ಯಕ್ಷನ್, ಕಾಮಿಡಿ ಜಾನರ್ ಚಿತ್ರವಾಗಿದ್ದು, ಸಸ್ಪೆನ್ಸ್, ಥ್ರಿಲ್ಲರ್ ಕೂಡ ಇದೆ. ಸಿನಿಮಾ ಚೆನ್ನಾಗಿದ್ದರೆ ಭಾರತದ ಯಾವ ಭಾಷೆಯಲ್ಲಾದರೂ ಜನ ನೋಡುತ್ತಾರೆ. ಅದಕ್ಕೆ 'ಕಾಂತಾರ' ಚಿತ್ರಕ್ಕಿಂತ ಒಳ್ಳೆ ಉದಾಹರಣೆ ಬೇಕಿಲ್ಲ, ಮುಂದಿನ ದಿನಗಳಲ್ಲಿ ಕನ್ನಡದಲ್ಲಿ ದೊಡ್ಡ ಬಜೆಟ್‌ನಲ್ಲಿ ಚಿತ್ರವೊಂದನ್ನು ಮಾಡುವ ಯೋಜನೆಯಿದೆ ಎಂದರು.

ಕರ್ನಾಟಕದಲ್ಲಿ ತೆಲುಗು ಭಾಷೆಯಲ್ಲಿಯೇ 50ರಿಂದ 60 ಚಿತ್ರಮಂದಿರಗಳಲ್ಲಿ ಜಿನ್ನಾ ಚಿತ್ರವನ್ನು ಬಿಡುಗಡೆ ಮಾಡಲಿದ್ದೇವೆ ಎಂದು ವಿತರಕ ವೆಂಕಟೇಶ್ ಹೇಳಿದರು. ನಿರ್ಮಾಪಕ ಎನ್.ಎಸ್. ರಾಜಕುಮಾರ್, ಪರಿಜಾತ ಮಧುಸೂದನ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು. ಈ ಚಿತ್ರದಲ್ಲಿ ವಿಷ್ಣುಮಂಚು ಜೊತೆ ನಾಯಕಿಯರಾಗಿ ಸನ್ನಿಲಿಯೋನ್ ಹಾಗೂ ಪಾಯಲ್ ರಜಪೂತ್ ಅಭಿನಯಿಸಿದ್ದಾರೆ. ಜಿನ್ನಾ ಚಿತ್ರವನ್ನು ಸೂರ್ಯ ನಿರ್ದೇಶನ ಮಾಡಿದ್ದು, ಹಿರಿಯ ನಟ, ನಿರ್ಮಾಪಕ ಮೋಹನ್‌ಬಾಬು ಅವರು ನಿರ್ಮಾಣ ಮಾಡಿದ್ದಾರೆ.


'ಆರ್ಟಿಕಲ್ 370' ಪೋಸ್ಟರ್ ಬಿಡುಗಡೆ



ಕೆ.ಶಂಕರ್ ಅವರ ನಿರ್ದೇಶನದಲ್ಲಿ ಮೂಡಿಬರುತ್ತಿರುವ 'ಆರ್ಟಿಕಲ್ 370' ಚಿತ್ರದ ಪೋಸ್ಟರ್ ಬಿಡುಗಡೆಯಾಯಿತು. ಈ ಸಂದರ್ಭದಲ್ಲಿ ಪತ್ರಕರ್ತ ಹಾಗೂ ಕಾಶ್ಮೀರಿ ಪಂಡಿತರೂ ಆದ ಆರ್.ಕೆ.ಮುಟ್ಟು, ಮಾಜಿ ಸೈನಿಕ ಪ್ರಹ್ಲಾದ್ ವಿ.ಕುಲಕರ್ಣಿ ಸೇರಿದಂತೆ ಇತರೆ ಸೈನಿಕರು ಹಾಜರಿದ್ದರು. ಹಿಂದೆ ಕಾಶ್ಮೀರದಲ್ಲಿ ಕಾಶ್ಮೀರಿ ಪಂಡಿತರ ಮೇಲೆ ನಡೆದ ಘೋರ ಹಲ್ಲೆ, ದೌರ್ಜನ್ಯದ ಕಥೆಯನ್ನು 'ಕಾಶ್ಮೀರಿ ಫೈಲ್ಸ್' ಚಿತ್ರದಲ್ಲಿ ಹೇಳಲಾಗಿತ್ತು. ಈಗ ಅಲ್ಲಿ ಆರ್ಟಿಕಲ್ 370 ಜಾರಿಯಾದ ನಂತರ ಏನೆಲ್ಲ ಬದಲಾವಣೆಗಳಾಗಿವೆ ಎಂಬುದನ್ನು ಈ ಚಿತ್ರದಲ್ಲಿ ಹೇಳಲಾಗಿದೆ.

ಆ ಸಮಯದಲ್ಲಿ ಅಲ್ಲೇ ಇದ್ದು ನಡೆದ ಎಲ್ಲಾ ಘಟನೆಗಳನ್ನು ಕಣ್ಣಾರೆ ಕಂಡ ಮುಟ್ಟು ಅವರು, ಮಾತನಾಡಿ. ಆಗ ಸುಮಾರು 800 ರಿಂದ 850 ಕಾಶ್ಮೀರಿ ಪಂಡಿತರನ್ನು ಕೊಲೆ ಮಾಡಲಾಯಿತು. ಆ ಸಮುದಾಯದ ಮಹಿಳೆಯರ ಮೇಲೆ ರೇಪ್ ಮಾಡುವುದು, ರುಂಡ ಕತ್ತರಿಸುವುದು ಹೆಚ್ಚಾಗಿ ನಡೀತು. 32 ವರ್ಷಗಳಿಂದ ಅಲ್ಲಿನ ಜನ ಈ ಯಾತನೆಯನ್ನು ಅನುಭವಿಸುತ್ತಾ ಇದ್ದರು. 370, 35 ಎ ಅಲ್ಲಿ ಜಾರಿಯಲ್ಲಿತ್ತು. ಈಗ ಇದನ್ನು ತೆಗೆದಿದ್ದರಿಂದ ಖುಷಿ ಇದೆ ಎಂದು ವಿವರಿಸಿದರು. ಮಾಜಿ ಸೈನಿಕರಾದ ಪ್ರಹ್ಲಾದ ವಿ ಕುಲಕರ್ಣಿ ಮಾತನಾಡಿ. ನಾನು 16ನೇ ವಯಸ್ಸಿನಲ್ಲಿಯೇ ಸೈನ್ಯಕ್ಕೆ ಸೇರಿದೆ. ಆಗಿನಿಂದಲೂ ದೇಶಕ್ಕಾಗಿ ಹೋರಾಟ ಮಾಡುತ್ತ ಬಂದಿದ್ದೇವೆ. 370ನೇ ವಿಧಿ ಅವರಿಗೆ ಕೊಟ್ಟ ನಂತರ ನಮ್ಮ ಮೇಲೆ ಹಲ್ಲೆ ಮಾಡುತ್ತಾ ಬಂದರು. ಈಗ ಅದನ್ನು ತೆಗೆದಿದ್ದರಿಂದ ಒಳ್ಳೆಯದಾಗುತ್ತಿದೆ. ಕಾಶ್ಮೀರ ನಮ್ಮ ಭಾರತದ ಒಂದು ಭಾಗ ಎಂದು ಹೇಳಿದರು. ನಿರ್ಮಾಪಕ ಭರತ ಗೌಡ ಮಾತನಾಡಿ ನಿರ್ದೇಶಕರು ಈ ಕಥೆ ಹೇಳಿದಾಗ ತುಂಬಾ ಇಷ್ಟವಾಯಿತು. ಹಾಗಾಗಿ ಈ ಸಿನಿಮಾ ನಿರ್ಮಾಣ ಮಾಡಿದ್ದೇನೆ. ಅಲ್ಲಿ ಚಿತ್ರೀಕರಣಕ್ಕೆ ಹೋದಾಗ ಸೈನಿಕರು ತುಂಬಾ ಸಪೋರ್ಟ್ ಮಾಡಿದರು ಎಂದರು.

ಸಿನಿಪದಬಂಧ–030
ಆಜ಼ಾದ್ ಜಿ. ಆಚಾರ್ಯ



ಹೆಸರು ______________________

ವಿಳಾಸ ______________________

____

ದೂರವಾಣಿ ಸಂಖ್ಯೆ ______________________

ವಿಜೇತರು: ಗಣೇಶ, ಹೆಬ್ಬಾಳು, ಮೈಸೂರು

ಎಡದಿಂದ ಬಲಕ್ಕೆ

1. ಬೇಬಿ ಶ್ಯಾಮಿಲಿ ಅಭಿನಯದಲ್ಲಿ ಕರುನಾಡ ದೇವಿಯ ಹೆಸರಿನ ಚಿತ್ರ (5)
3. ನೀನೇ _ _ _ _ _, ಮಾನಸ ಸರೋವರ ಚಿತ್ರದ ಪ್ರಸಿದ್ಧ ಗೀತೆ (5)
6. ಈ ನಟನ ಹೆಸರಿನೊಂದಿಗೆ ದುನಿಯಾ ಸೇರಿಕೊಂಡಿದೆ (3)
7. ಟೈಗರ್ ಪ್ರಭಾಕರರ ಮಗ (3)
9. _ _ _ ಅಲ್ಲ, ಈ ಹೆಣ್ಣು ಸಬಲೆ (3)
13. ರವಿಚಂದ್ರನ್– ಕಸ್ತೂರಿ– ಶೃತಿ ಅಭಿನಯದಲ್ಲಿ ಶಿವಮಣಿ ನಿರ್ದೇಶನದ ಬುದ್ಧಿವಂತ ಎಂಬ ಎಂಬರ್ಥದ ಸಿನಿಮಾ (2)
14. ಆಟವೇನು ನೋಟವೇನು ನನಗೆ ಹೇಳಿದ ಮಾತೇನು ..... ಈ ಗೀತೆಯನ್ನು ಒಳಗೊಂಡ ಚಿತ್ರ (5)
15. ರಾಜಕುಮಾರ್ ಮತ್ತು ತಾರಾ ಅಣ್ಣ– ತಂಗಿಯರಾಗಿ ಅಭಿನಯಿಸಿದ ಚಿತ್ರ (2)
16. ಶಿವರಾಜ್ ಕುಮಾರ್– ದಾಮಿನಿ ಅಭಿನಯದಲ್ಲಿ ರಾಕ್ಷಸ ಎಂಬರ್ಥದ ಸಿನಿಮಾ (3)
17. ನಾನಿರುವುದೆ ನಿಮಗಾಗಿ...ನಾಡಿರುವುದೆ ನಮಗಾಗಿ... ಈ ಗೀತೆಯನ್ನು ಒಳಗೊಂಡ ಸುಪ್ರಸಿದ್ಧ ಸಿನಿಮಾ (3)
19. _ _ ರೇಖೆ, ರೇಣುಕಾ ಶರ್ಮಾ ನಿರ್ದೇಶನದಲ್ಲಿ ಕಾಶಿನಾಥ್ ಅಭಿನಯದ ಸಿನಿಮಾ (3)
21. ಮೆಲ್ಲಗೆ, ನಡೆ ಮೆಲ್ಲಗೆ, ಈ ಕೋಪವೇಕೆ ಚಿನ್ನಾ.... ಎಂಬ ಸುಪ್ರಸಿದ್ಧ ಗೀತೆ ಈ ಚಿತ್ರದ್ದು (5)
22. ರಾಮ್ ಕುಮಾರ್–ಪ್ರೇಮಾ–ಶಿವಧ್ವಜ್ ಅಭಿನಯದಲ್ಲಿ ಕೆ.ವಿ. ಜಯರಾಮ್ ನಿರ್ದೇಶನದ ಚಿತ್ರ (5)

ಸಿನಿ ಪದಬಂಧ 029ರ ಸರಿ ಉತ್ತರ

ಧ	ನ	ಪಿ	ಶಾ	ಚಿ		ಮ	ಹಾ	ಕ್ಷ	ತ್ರಿ	ಯ
ರ್ಮ			ಮಿ		ಅ		ಲ			ಮ
ವಿ			ಲಿ		ನು		ಪ್ಪ			ಕಿಂ
ಜ	ಗ್ಗೇ	ಶ್		ಭ	ರಾ	ಟೆ		ಹಂ	ತ	ಕ
ಯ			ದೇ		ಗ		ಸಿ			ರ
	ಬೆ	ಳು	ವ	ಲ	ದ	ಮ	ಡಿ	ಲ	ಲ್ಲಿ	
ಗಾ			ರ		ಅ		ಲು			ಪ್ರೇ
ಜಿ	ತೇಂ	ದ್ರ		ಹೆ	ಲೆ	ನ್		ವಿ	ಕ್ರ	ಮ
ನ			ಅ		ಗ		ನಿ			ತ
ಮ			ಘೋ		ಳು		ನ್ನಿಂ			ರಂ
ನೆ	ನ	ಪಿ	ರ	ಲಿ		ಹೃ	ದ	ಯ	ರಾ	ಗ

ಮೇಲಿನಿಂದ ಕೆಳಕ್ಕೆ

2. – – – – ತಾಯಿ ನಮಗೆಲ್ಲ, ಅವಳ ನೆರಳಲ್ಲಿ ಬಾಳೋರು ನಾವೆಲ್ಲ ಎಂಬ ಪ್ರಕೃತಿಮಾತೆಯ ಕುರಿತಾದ ಹಾಡು ರಾಮಲಕ್ಷ್ಮಣ ಚಿತ್ರದ್ದು (4)
4. ಅಂಬರೀಶ್ – ಗೀತಾ ಅಭಿನಯದ ಬೆಟ್ಟದ ಹುಡುಗಿ ಎಂಬರ್ಥದ ಸಿನಿಮಾ (4)
5. ಆನೆ ಎಂಬರ್ಥದ ದರ್ಶನ್ ಸಿನಿಮಾ (2)
8. ರಾಜಕುಮಾರ್ – ಉದಯಕುಮಾರ್ – ರಾಜಶಂಕರ್ ಅಭಿನಯದ ವಿಷ್ಣುವಿನ ಕಥೆಯನ್ನು ಹೊಂದಿರುವ ಪೌರಾಣಿಕ ಚಿತ್ರ (5)
9. ಅನಂತನಾಗ್ – ವನಿತಾ ವಾಸು ಅಭಿನಯದ 1990ರ ಚಿತ್ರ (5)
10. ಆದಿ ಲೋಕೇಶ್ – ನೀತು ಜೋಡಿಯ ಅರ್ಚಕ ಎಂಬರ್ಥದ ಸಿನಿಮಾ (3)
11. ರಮೇಶ್ ಅರವಿಂದ್ – ಪಂಚಮಿ ಅಭಿನಯದ ಕೊಲೆಕಡುಕ ಎಂಬರ್ಥದ ಸಿನಿಮಾ (3)
12. _ _ _ ಐ ಲವ್ ಯು ಕರುನಾಡ ಮೇಲಾಣೆ (3)
16. ಹುಣಸೂರು ಕೃಷ್ಣಮೂರ್ತಿ ನಿರ್ದೇಶಿಸಿ ನಿರ್ಮಿಸಿರುವ 1968ರ ಚಿತ್ರ (4)
18. ಆ ಕಿರಣಗಳಿಗೆ ಚುಂಬಿಸೋ ರಘುರಾಮ.... ಈ ಗೀತೆಯನ್ನು ಒಳಗೊಂಡ, ರವಿಚಂದ್ರನ್–ನಗ್ಮಾ ಅಭಿನಯದ ಚಿತ್ರ (4)
20. ಪಿ ವಾಸು ನಿರ್ದೇಶನದಲ್ಲಿ ರವಿಚಂದ್ರನ್–ನವ್ಯಾ ನಾಯರ್ ಅಭಿನಯದ ಥ್ರಿಲ್ಲರ್ ಸಿನಿಮಾ (2)

ಕಾರ್ಮಿಕರಿಗೆ ನಿವೇಶನ ನೀಡುವಂತೆ ಆಗ್ರಹಿಸಿ ಪ್ರತಿಭಟನೆ



ವಿರಾಜಪೇಟೆ, ಅ.20– ತಾಲೂಕಿನಲ್ಲಿ ಸ್ವಂತ ಮನೆ ಇಲ್ಲದೆ ಬಾಡಿಗೆ ಮನೆಯಲ್ಲಿ ವಾಸಿಸುತ್ತಿರುವ ಕಾರ್ಮಿಕರಿಗೆ ನಿವೇಶನ ನೀಡುವಂತೆ ಒತ್ತಾಯಿಸಿ ಕೊಡಗು ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್ ವತಿಯಿಂದ ನಗರದ ದೊಡ್ಡಟ್ಟಿ ಚೌಕಿಯಿಂದ ತಾಲೂಕು ಕಛೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿ, ತಹಸೀಲ್ದಾರ್ ಅರ್ಚನಾ ಭಟ್ ಅವರಿಗೆ ಮನವಿ ಸಲ್ಲಿಸಲಾಯಿತು.

ಪ್ರತಿಭಟನೆ ನೇತೃತ್ವ ವಹಿಸಿದ್ದ ವರ್ಕರ್ಸ್ ಯೂನಿಯನ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎ.ಮಹಾದೇವ ಮಾತನಾಡಿ, ಕೊಡಗು ಜಿಲ್ಲೆಯ ಶಾಸಕರು ಜನರಿಗೆ ಮೂಲ ಸೌಲಭ್ಯಗಳನ್ನು ಒದಗಿಸುವಲ್ಲಿ ವಿಫಲರಾಗಿದ್ದಾರೆ. ಅನೇಕ ವರ್ಷಗಳಿಂದಲೂ ಮನೆ ನಿವೇಶನಕ್ಕಾಗಿ ಕಾರ್ಮಿಕರು ಹೋರಾಟ ನಡೆಸುತ್ತ ಬಂದರು ಶಾಸಕರು ಮಾತ್ರ ಇತ್ತ ಗಮನ ಹರಿಸುತ್ತಿಲ್ಲ. ಚುನಾವಣೆ ಸಂದರ್ಭದಲ್ಲಿ ಗುಡಿಸಲು ಮನೆಗಳನ್ನು ಹುಡುಕುತ್ತಾರೆ. ಗೆದ್ದು ಬಂದ ನಂತರ ಬಡಜನರನ್ನು ನಿರ್ಲಕ್ಷಿಸುತ್ತಿದ್ದಾರೆ. ಈಗ ಜಿಲ್ಲಾಧಿಕಾರಿಗಳ ನಡೆ ಹಳ್ಳಿಕಡೆಗೆ ಎನ್ನುತ್ತಾರೆ ಅಧಿಕಾರಿಗಳ ಈ ನಡೆಯಿಂದ ಜನರಿಗೆ ಸೂಕ್ತ ಸ್ಪಂದನೆ ದೊರಕಿಲ್ಲ ಎಂದು ದೂರಿದರು.

ಯೂನಿಯನ್ ಅಧ್ಯಕ್ಷ ರಮೇಶ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ದಿನ ನಿತ್ಯ ಉಪಯೋಗಿಸುವ ವಸ್ತುಗಳ ಬೆಲೆ ಗಗನಕ್ಕೇರಿದೆ ಕಾರ್ಮಿಕರು ಬಡ ಕುಟುಂಬದವರು ಜೀವನ ನಡೆಸುವುದೇ ಸಮಸ್ಯೆಯಾಗಿದೆ ಸರಕಾರ ಬೆಲೆ ಏರಿಕೆಯನ್ನು ಇಳಿಸಬೇಕು ಹಾಗೂ ನಿವೇಶನ ರಹಿತರಿಗೆ ನಿವೇಶನ ಒದಗಿಸಿ ಕೊಡಬೇಕು. ಇದಕ್ಕಾಗಿ ಮಾಲ್ದಾರೆಯಲ್ಲಿ ತೋಟದ ಮಾಲೀಕರೇ ಸರ್ಕಾರಿ ಜಾಗವನ್ನು ಬಿಟ್ಟು ಕೊಡವುದಾಗಿ ಪತ್ರದ ಮೂಲಕ ಹೇಳಿದ್ದಾರೆ ಆ ಜಾಗದಲ್ಲಿ ಕಾರ್ಮಿಕರಿಗೆ ನಿವೇಶನ ನೀಡಲು ಅಧಿಕಾರಿಗಳು ಅಡ್ಡಗಾಲು ಹಾಕುತ್ತಿದ್ದಾರೆ. ಅಮ್ಮತ್ತಿ ಹೋಬಳಿಯಲ್ಲಿ ಜಾಗ ಇದ್ದರು ಅಧಿಕಾರಿಗಳು ಇಚ್ಛಾಶಕ್ತಿ ತೋರುತ್ತಿಲ್ಲ ಎಂದರು.

ಪ್ರತಿಭಟನೆಯಲ್ಲಿ ಸಿಐಟಿಯು ಜಿಲ್ಲಾಧ್ಯಕ್ಷ ಭರತ್, ಉಪಾಧ್ಯಕ್ಷ ಡಾ.ದುರ್ಗಾಪ್ರಸಾದ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎ.ಸಿ.ಸಾಬು, ಸಮಿತಿಯ ರಾಚಪ್ಪಾಜಿ, ಪಾಪಣ್ಣ, ಯಶೋಧ ಅವರು ನಿವೇಶನ ಮತ್ತು ಮೂಲ ಸೌಲಭ್ಯ ಕಲ್ಪಸುವಂತೆ ಆಗ್ರಹಿಸಿದರು.

ಮನವಿ ಸ್ವೀಕರಿಸಿದ ತಹಶೀಲ್ದಾರ್ ಅರ್ಚನಾ ಭಟ್ ಮಾತನಾಡಿ, ನಿವೇಶನ ರಹಿತರು ಮೊದಲಿಗೆ ವಸತಿ ರಹಿತರ ಪಟ್ಟಿಯಲ್ಲಿ ಹೆಸರು ನೋಂದಾಯಿಸಿಕೊಳ್ಳಬೇಕು. ಅದ್ಯತೆ ಮೇರೆ ವಸತಿ ನೀಡಲಾಗುತ್ತದೆ. ಇನ್ನು ಮುಂದೆ ಕಛೇರಿಯಲ್ಲಿ ರೈತರ ಕಾರ್ಮಿಕರ ಕೆಲಸಗಳು ಸರಾಗವಾಗಿ ನಡೆಯಲಿದೆ ಎಂದರು. ನಂತರ ಪ್ರತಿಭಟನಾಕಾರರು ಅರಣ್ಯ ಭವನಕ್ಕೆ ಜಾಥಾ ನಡೆಸಿ, ಅರಣ್ಯಾಧಿಕಾರಿಗೆ ಮನವಿ ಸಲ್ಲಿಸಿ, ಕಾಡಾನೆ ಹಾವಳಿಯನ್ನು ತಪ್ಪಿಸಬೇಕು, ಕಾಡಾನೆ ದಾಳಿಯಿಂದ ಮೃತಪಟ್ಟವರ ಕುಟುಂಬಕ್ಕೆ 25 ಲಕ್ಷ ರೂ. ಪರಿಹಾರ ನೀಡಬೇಕು. ಮೃತರ ಕುಟುಂಬದ ಒಬ್ಬರಿಗೆ ಉದ್ಯೋಗ ನೀಡುವಂತೆ ಆಗ್ರಹಿಸಿದರು.

ಇಂದು ಪೋಲಿಸ್ ಹುತಾತ್ಮರ ದಿನಾಚರಣೆ

ಮಡಿಕೇರಿ, ಅ.20– ಕೊಡಗು ಜಿಲ್ಲಾ ಪೋಲಿಸ್ ಆಶ್ರಯದಲ್ಲಿ ಪೋಲಿಸ್ ಹುತಾತ್ಮರ ದಿನಾಚರಣೆಯು ಅ.21 ರಂದು ಬೆಳಗ್ಗೆ 9 ಗಂಟೆಗೆ ನಗರದ ಜಿಲ್ಲಾ ಪೋಲಿಸ್ ಕವಾಯತು ಮೈದಾನದಲ್ಲಿ ನಡೆಯಲಿದೆ.

ಪ್ರಧಾನ ಜಿಲ್ಲಾ ಮತ್ತು ಸೆಷನ್ ನ್ಯಾಯಾಧೀಶರಾದ ಎಂ.ಭೃಂಗೇಶ್, ಪೋಲಿಸ್ ಅಧೀಕ್ಷಕರಾದ ಎಂ.ಎ.ಅಯ್ಯಪ್ಪ ಇತರರು ಪಾಲ್ಗೊಳ್ಳಲಿದ್ದಾರೆ.

ಅ.29 ರಿಂದ ಪೌತಿ ಖಾತೆ ಆಂದೋಲನ

ಮಡಿಕೇರಿ, ಅ.20– ಸರ್ಕಾರದ ಆದೇಶದಂತೆ ತಾಲೂಕು ವ್ಯಾಪ್ತಿಯಲ್ಲಿನ ಹೋಬಳಿವಾರು ಪೌತಿ ಖಾತೆ ಬದಲಾವಣೆ, ಪಟ್ಟೆದಾರಿಕೆ ಬದಲಾವಣೆ, ಪಹಣಿಯಲ್ಲಿ ತಿದ್ದುಪಡಿಗಳು, ಕಂದಾಯ ನಿಗದಿ ಹಾಗೂ ಬೆಳೆ ಇಂಡೀಕರಣ ಸಂಬಂಧ ಆಂದೋಲನವು ಅಕ್ಟೋಬರ್ 29 ರಂದು ಭಾಗಮಂಡಲ ಹೋಬಳಿಯ ಚೇರಂಬಾಣೆ ವೃತ್ತದ ಕೊಳಗದಾಳು ಗ್ರಾಮದಲ್ಲಿ ನವೆಂಬರ್ 7 ರಂದು ನಾಪೋಕ್ಲು ಹೋಬಳಿಯ ನೆಲಜಿ ವೃತ್ತದ ಎಮ್ಮೆಮಾಡು ಗ್ರಾಮದಲ್ಲಿ, ನ.14 ರಂದು ಸಂಪಾಜೆ ಹೋಬಳಿಯ ಬಿಳಿಗೇರಿ ವೃತ್ತದ ಬಿಳಿಗೇರಿ ಗ್ರಾಮದಲ್ಲಿ ಮತ್ತು ನ.17 ರಂದು ಮಡಿಕೇರಿ ಹೋಬಳಿಯ ಮಕ್ಕಂದೂರು ವೃತ್ತದ ಮಕ್ಕಂದೂರು ಗ್ರಾಮದಲ್ಲಿ ನಡೆಯಲಿದೆ.

ಆಯಾಯ ದಿನಗಳಂದು ಪೌತಿ ವಾರಸುದಾರಿಕೆಯ ಖಾತೆಗೆ ಖಾತೆದಾರನ ಮರಣ ದೃಢೀಕರಣ ಪತ್ರ, ಒಂದು ವೇಳೆ ಮರಣ ದೃಢೀಕರಣ ಲಭ್ಯವಿಲ್ಲದ್ದಲ್ಲಿ ಆಧಾರ್ ಮತ್ತು ಪಡಿತರ ಚೀಟಿ ದಾಖಲೆಗಳಂತೆ ಸಂಬಂಧಪಟ್ಟ ವಾರಸುದಾರರಿಂದ ಅಫಿಡವಿಟ್‌ನ್ನು ಪಡೆದುಕೊಳ್ಳುವುದು. ಆರ್‌ಡಿ ಸಂಖ್ಯೆಯುಳ್ಳ ವಂಶವೃಕ್ಷ ದೃಢೀಕರಣ ಪತ್ರ, ಚಾಲ್ತಿ ಸಾಲಿನ ಪಹಣಿ, ಚಾಲ್ತಿ ಸಾಲಿನ ಪಹಣಿ ಕಾಲಂ 10 ರಲ್ಲಿ ದಾಖಲಿರುವ ಮ್ಯೂಟೇಷನ್ ಪ್ರತಿ, ಜಮಾಬಂದಿ ಮತ್ತು ಆಧಾರ್ ಪ್ರತಿ ಮತ್ತು ದೂರವಾಣಿ ಸಂಖ್ಯೆ ಈ ದಾಖಲಾತಿಗಳೊಂದಿಗೆ (ಪಟ್ಟೆದಾರರು ಮರಣ ಹೊಂದಿದರೆ ಪಟ್ಟೆದಾರರ ನೇರ ವಾರಸುದಾರರಲ್ಲದೇ ಇತರೆ ಸಂಬಂಧಿಗಳಿಗೆ ನೇರ ಖಾತೆ ಮಾಡುವ ಪ್ರಕ್ರಿಯೆ ಹೊರತು ಪಡಿಸಿ), ನಮೂನೆ–1 ರಲ್ಲಿ ಮನವಿಯನ್ನು ಸಲ್ಲಿಸುವಂತೆ ತಹಶೀಲ್ದಾರ್ ಪಿ.ಎಸ್.ಮಹೇಶ್ ಕೋರಿದ್ದಾರೆ.

ರಾಜ್ಯೋತ್ಸವ ಆಚರಣೆ: ತಹಸೀಲ್ದಾರ್ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆ



ಕುಶಾಲನಗರ, ಅ.20– ತಾಲೂಕು ಆಡಳಿತದ ವತಿಯಿಂದ ನವೆಂಬರ್ 1 ರಂದು ನಡೆಯಲಿರುವ ಕನ್ನಡ ರಾಜ್ಯೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸುವ ಸಂಬಂಧ ತಾಲೂಕು ತಹಸೀಲ್ದಾರ್ ಟಿ.ಎಂ.ಪ್ರಕಾಶ್ ಅಧ್ಯಕ್ಷತೆಯಲ್ಲಿ ಕುಶಾಲನಗರದ ಸಂಘ ಸಂಸ್ಥೆಗಳ ಪ್ರಮುಖರನ್ನು ಒಳಗೊಂಡ ಸಭೆ ನಡೆಯಿತು.

ನಾಡಹಬ್ಬದ ಅಂಗವಾಗಿ ಪಟ್ಟಣದ ವಿವಿಧ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಂದ ಪಟ್ಟಣದ ಬೈಚನಹಳ್ಳಿ ಮಾರಮ್ಮ ದೇವಾಲಯದ ಬಳಿಯಿಂದ ಮುಖ್ಯ ರಸ್ತೆಯಲ್ಲಿ ಕನ್ನಡಾಂಬೆ ತಾಯಿ ಭುವನೇಶ್ವರಿಯ ಅಲಂಕೃತ ಭಾವಚಿತ್ರದೊಂದಿಗೆ ಬೆಳಗ್ಗೆ 8–30 ಗಂಟೆಗೆ ಮೆರವಣಿಗೆಯಲ್ಲಿ ಸಾಗಿ 9–30 ಗಂಟೆಗೆ ಸರ್ಕಾರಿ ಪ್ರಾಥಮಿಕ ಶಾಲಾ ಮೈದಾನದ ಬಳಿ ಬರುವುದು. ಬಳಿಕ ಶಾಲಾ ಮೈದಾನದಲ್ಲಿ ಕನ್ನಡ ಧ್ವಜಾರೋಹಣ ನೆರವೇರಿಸುವುದು. ನಂತರ ಸಂಪನ್ಮೂಲ ವ್ಯಕ್ತಿಯಿಂದ ನಾಡಹಬ್ಬದ ಮಹತ್ವದ ಕುರಿತು ಭಾಷಣ, ಬಳಿಕ ನಾಡು ನುಡಿಗಾಗಿ ಸೇವೆ ಸಲ್ಲಿಸಿದ ಸಾಧಕರನ್ನು ಸನ್ಮಾನಿಸುವುದು. ಕಾರ್ಯಕ್ರಮಕ್ಕೂ ಮುನ್ನಾ ಶಾಲಾ ಮೈದಾನದಲ್ಲಿ ಶಾಲಾ ಮಕ್ಕಳು, ಎನ್‌ಸಿಸಿ, ಪೋಲೀಸ್, ಅಗ್ನಿಶಾಮಕ ಸಿಬ್ಬಂದಿ ಒಳಗೊಂಡು ಪಥ ಸಂಚಲನ ನಡೆಸುವ ಬಗ್ಗೆ ಸಭೆಯಲ್ಲಿ ತೀರ್ಮಾನಿಸಲಾಯಿತು.

ಕಾರ್ಯಕ್ರಮಕ್ಕೆ ಆರ್ಥಿಕ ಸಂಪನ್ಮೂಲದ ಅಲಭ್ಯತೆಯ ಕಾರಣದಿಂದ ಸ್ಥಳೀಯರು, ಸಾರ್ವಜನಿಕರು ಅಥವಾ ಸಂಘಟನೆಗಳ ಸಹಕಾರಕ್ಕಾಗಿ ಸಭಾಧ್ಯಕ್ಷರೂ ಆದ ತಹಸೀಲ್ದಾರ್ ಪ್ರಕಾಶ್ ಮನವಿ ಮಾಡಿದರು.

ನಾಡಹಬ್ಬ ಕನ್ನಡ ರಾಜ್ಯೋತ್ಸವ ಆಚರಣೆಗೆ ಸರ್ಕಾರದಿಂದ ಹಣಕಾಸು ನೆರವು ಬಾರದ ಬಗ್ಗೆ ಕರವೇ ಅಧ್ಯಕ್ಷ ವೆಂಕಟೇಶ್ ಪೂಜಾರಿ ಅಸಮಾಧಾನ ವ್ಯಕ್ತಪಡಿಸಿದರು.

ರಾಜ್ಯೋತ್ಸವದಂದು ಮೆರವಣಿಗೆಯಲ್ಲಿ ವಿವಿಧ ಕಲಾ ತಂಡಗಳಿರಬೇಕು. ಹಾಗಾಗಿ ವಿವಿಧ ಇಲಾಖೆಯವರು ಆಸಕ್ತಿ ವಹಿಸಿ ಕಲಾ ತಂಡಗಳ ಸಹಕಾರಕ್ಕೆ ತಹಸೀಲ್ದಾರ್ ಪ್ರಕಾಶ್ ಮನವಿ ಮಾಡಿದರು.

ಕನ್ನಡ ಸಾಹಿತ್ಯ ಪರಿಷತ್ತು ಕುಶಾಲನಗರ ತಾಲೂಕು ಅಧ್ಯಕ್ಷ ಕೆ.ಎಸ್.ಮೂರ್ತಿ ಈ ಸಂದರ್ಭ ಮಾತನಾಡಿ, ತಾಲೂಕು ಆಡಳಿತದಿಂದ ನಡೆಸುವ ರಾಜ್ಯೋತ್ಸವದ ಅಂಗವಾಗಿ ಕುಶಾಲನಗರ ಪಟ್ಟಣದಾದ್ಯಂತ ಇರುವ ಅಂಗಡಿ ಮುಂಗಟ್ಟುಗಳಲ್ಲಿ ಸ್ಪಷ್ಟವಾಗಿ ಬರೆದ ಕನ್ನಡದ ನಾಮಫಲಕಗಳು ಇರಬೇಕು.

ಕಾರ್ಯಕ್ರಮದ ಸಾಂಸ್ಕೃತಿಕ ವೇದಿಕೆಯಲ್ಲಿ ಕನ್ನಡ ನಾಡು ನುಡಿ ಬಿಂಬಿಸುವ ಕನ್ನಡ ಗೀತೆಗಳಿಗಷ್ಟೇ ಪ್ರಾಧಾನ್ಯತೆ ಇರಬೇಕು. ಮೆರವಣಿಗೆಯಲ್ಲಿ ಭಾಗವಹಿಸುವ ಪ್ರತಿಯೊಬ್ಬರ ಕೈಯಲ್ಲೂ ಕನ್ನಡ ಧ್ವಜ ರಾರಾಜಿಸಬೇಕು ಎಂದು ಮನವಿ ಮಾಡಿದರು.

ಕುಶಾಲನಗರ ಪಟ್ಟಣ ಪಂಚಾಯಿತಿ ಅಧ್ಯಕ್ಷ ಜಯವರ್ಧನ, ಉಪಾಧ್ಯಕ್ಷೆ ಸುರಯ್ಯಾಭಾನು ಇದ್ದರು.

ಕಂದಾಯ ಇಲಾಖೆಯ ಉಪತಹಸೀಲ್ದಾರ್ ಮಧುಸೂದನ್, ಕಂದಾಯ ಅಧಿಕಾರಿ ಸಂತೋಷ್, ಜಲಮಂಡಳಿ ಇಂಜಿನಿಯರ್ ಆನಂದ್, ಉಪ ಖಜಾನಾಧಿಕಾರಿ ಜಯಕುಮಾರ್, ಕೃಷಿ ಅಧಿಕಾರಿ ಸ್ವರ್ಣ, ಆಹಾರ ಅಧಿಕಾರಿ ಸ್ವಾತಿ, ಎಪಿಸಿಎಂಎಸ್ ಅಧ್ಯಕ್ಷ ಕುಮಾರಪ್ಪ, ವಿವಿಧ ಸಂಘಟನೆಗಳ ಪ್ರಮುಖರಾದ ಕೃಷ್ಣ, ಅಣ್ಣಯ್ಯ, ಜಗದೀಶ್, ಕೆ.ಬಿ.ರಾಜು ಮೊದಲಾದವರಿದ್ದರು.

ಟಿ.ಎಸ್.ವಿಜಯಕುಮಾರ್ ನಿಧನ

ಕುಶಾಲನಗರ, ಅ.20– ತಾಲೂಕಿನ ತೊರೆನೂರು ಗ್ರಾಮದ ಗದ್ದೆಹೊಸಳ್ಳಿಯ ಟಿ.ವೈ.ಸಂಗಮೇಶ ಎಂಬುವರ ಪುತ್ರ ಟಿ.ಎಸ್.ವಿಜಯಕುಮಾರ್(42) ಇಂದು ಅನಾರೋಗ್ಯದಿಂದ ಮೈಸೂರಿನ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರಿ ಹಾಗೂ ಬಂಧು ವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಅ.21 (ಶುಕ್ರವಾರ) ರಂದು ಮಧ್ಯಾಹ್ನ 1 ಗಂಟೆಗೆ ಸ್ವಗೃಹ ಗದ್ದೆಹೊಸಳ್ಳಿಯಲ್ಲಿ ನಡೆಯಲಿದೆ.



ಶ್ರೀರಂಗಪಟ್ಟಣದಲ್ಲಿ ಭಾಗ್ಯಜ್ಯೋತಿ ಹಾಗೂ ಕುಟೀರ ಜ್ಯೋತಿಯ ಫಲಾನುಭವಿಗಳ ವಿದ್ಯುತ್ ಬಿಲ್ ಬಾಕಿ ಹಿನ್ನೆಲೆಯಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಳಿಸಲು ಮುಂದಾಗಿರುವ ವಿದ್ಯುತ್ ಇಲಾಖೆ ವಿರುದ್ಧ ವಿವಿಧ ಸಂಘಟನೆಗಳ ವತಿಯಿಂದ ಪ್ರತಿಭಟನೆ ನಡೆಸಲಾಯಿತು. ರೈತ ಸಂಘದ ಉಪಾಧ್ಯಕ್ಷ ನಾಗೇಂದ್ರ ಸ್ವಾಮಿ, ಪಿಎಸ್‌ಎಸ್‌ಕೆ ನಿರ್ದೇಶಕ ಪಾಂಡು, ದೊಡ್ಡಪಾಳ್ಯ ಜಯರಾಮು, ಉದ್ಯೋಗದಾತ ಸಂಸ್ಥೆಯ ರುಕ್ಮಾಂಗದ, ದಲಿತ ಸಂಘಟನೆಯ ರವಿಚಂದ್ರ, ಕುಬೇರಪ್ಪ, ಮುಂಡದೊರೆ ಮೋಹನ, ಕರವೇ ತಾಲೂಕು ಅಧ್ಯಕ್ಷ ಚಂದಗಾಲು ಶಂಕರ್, ರೈತ ಸಂಘದ ರಮೇಶ್ ಬಿ.ಎಸ್., ಕರವೇ ಸ್ವಾಮೀಗೌಡ, ಗೌಡಹಳ್ಳಿ ದೇವರಾಜು, ಮಹೇಶ್ ಸೇರಿದಂತೆ ಇತರರಿದ್ದರು.

ಅ.28 ರಂದು ಶಿವಪುರ ಸತ್ಯಾಗ್ರಹ ಸೌಧದಲ್ಲಿ ಕೋಟಿ ಕಂಠ ಗಾಯನ

ಮಂಡ್ಯ, ಅ.20– ಅಕ್ಟೋಬರ್ 28 ರಂದು ಶಿವಪುರ ಸತ್ಯಾಗ್ರಹ ಸೌಧದಲ್ಲಿ 67ನೇ ಕನ್ನಡ ರಾಜ್ಯೋತ್ಸವದ ಅಂಗವಾಗಿ ಕೋಟಿ ಕಂಠ ಗಾಯನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್. ನಾಗರಾಜು ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ 67ನೇ ಕನ್ನಡ ರಾಜ್ಯೋತ್ಸವದ ಅಂಗವಾಗಿ ಕೋಟಿ ಕಂಠ ಗಾಯನದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಂಡ್ಯ ಜಿಲ್ಲೆಯಲ್ಲಿ ಶಿವಪುರ ಸೇರಿದಂತೆ ಇನ್ನಿತರ ಐತಿಹಾಸಿಕ ಸ್ಥಳಗಳಲ್ಲಿ ಕೋಟಿ ಕಂಠ ಗಾಯನ ಕಾರ್ಯಕ್ರಮ ಹಮ್ಮಿಕೊಂಡು ಕನ್ನಡ ನಾಡಿಗೆ ಗೌರವ ಸಲ್ಲಿಸಲಾಗುವುದು. ಶಾಲಾ, ಕಾಲೇಜು ವಿದ್ಯಾರ್ಥಿಗಳು ಸ್ವಯಂ ಸೇವಾ ಸಂಸ್ಥೆಗಳು ಸೇರಿದಂತೆ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಹೆಸರು ನೋಂದಾಯಿಸಿಕೊಂಡು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಿ ಎಂದು ಕರೆ ನೀಡಿದರಲ್ಲದೆ, ಜಿಲ್ಲೆಯಲ್ಲಿ 4 ಲಕ್ಷಕ್ಕೂ ಹೆಚ್ಚಿನ ಜನರು ನೋಂದಾಯಿಸುವ ನಿರೀಕ್ಷೆ ಇದೆ ಎಂದರು.

ನಾಡಿನಾದ್ಯಂತ ನಡೆಯುವ ಕೋಟಿ ಕಂಠ ಗಾಯನ ಅಭಿಯಾನದಲ್ಲಿ ಪಾಲ್ಗೊಳ್ಳಲು ಮತ್ತು ಸಮೂಹ ಗಾಯನ ಆಯೋಜಿಸಲು ಮೊಬೈಲ್ ಸಂಖ್ಯೆ: 9900534569, 9916832044, 9986837037, 9880442804 ಅಥವಾ kanbhavblr@gmail.com kanajacoordinator@gmail.com ಸಂಪರ್ಕಿಸಬಹುದು ಎಂದರು.

ಕೋಟಿ ಕಂಠ ಗಾಯನ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಪ್ರತಿಯೊಬ್ಬರಿಗೂ ಅಭಿನಂದನಾ ಪತ್ರವನ್ನು ನೀಡಲಾಗುತ್ತದೆ. ಭಾಗವಹಿಸಲು ಕ್ಯೂಆರ್ ಕೋಡ್ ಅನ್ನು ಉಪಯೋಗಿಸಿ ನೋಂದಾಯಿಸಿಕೊಳ್ಳಿ ಎಂದರು.

ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಎನ್. ಉದಯ್ ಕುಮಾರ್, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಬಿ.ರಂಗೇಗೌಡ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಓಂ ಪ್ರಕಾಶ್, ಜಿಲ್ಲಾಧಿಕಾರಿಗಳ ಕಚೇರಿಯ ಹಿರಿಯ ಸಹಾಯಕ ಸ್ವಾಮಿಗೌಡ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಕೆಂಪೇಗೌಡ ಥೀಮ್ ಪಾರ್ಕ್‌ಗಾಗಿ ಮೃತ್ತಿಕೆ ಸಂಗ್ರಹ



ಮಂಡ್ಯ,ಅ.20– ಶ್ರೇಷ್ಠ ಆಡಳಿತಗಾರ, ಬೆಂಗಳೂರು ನಗರ ನಿರ್ಮಾತೃ ನಾಡಪ್ರಭು ಕೆಂಪೇಗೌಡರ 108 ಅಡಿ ಎತ್ತರದ ಕಂಚಿನ ಪ್ರತಿಮೆ ಮತ್ತು ಕೆಂಪೇಗೌಡ ಥೀಮ್ ಪಾರ್ಕ್‌ಗಾಗಿ ಮೃತ್ತಿಕೆಯನ್ನು ಸಂಗ್ರಹಿಸುವ ಕಾರ್ಯಕ್ಕೆ ಚಾಲನೆ ನೀಡಲಾಗಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥ ನಾರಾಯಣ ತಿಳಿಸಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಕಾರ್ಯಕ್ರಮದ ರೂಪುರೇಷೆಗಳನ್ನು ಸಿದ್ಧಪಡಿಸುವ ಸಂಬಂಧ ನಡೆದ ಪೂರ್ವಭಾವಿ ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಭಾವನಾತ್ಮಕವಾಗಿ ಪ್ರಗತಿಯ ಪ್ರತಿಮೆಯನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ ಎಂದರು.

ನಾಡಪ್ರಭು ಕೆಂಪೇಗೌಡರು ನಿರ್ಮಿಸಿದ ಬೆಂಗಳೂರು ಇಡೀ ದೇಶಕ್ಕೇ ನಂಬರ್ ಒನ್ ಸ್ಥಾನದಲ್ಲಿದೆ. ಇದರ ಹತ್ತಿರದಲ್ಲೂ ಯಾವುದೇ ನಗರಗಳೂ ಇಲ್ಲ. ವಿಶ್ವ ಮಟ್ಟದಲ್ಲಿ 24ನೇ ಸ್ಥಾನವನ್ನು ಪಡೆದಿದೆ. ನಮಗೆಲ್ಲರಿಗೂ ಬದುಕು, ಶಕ್ತಿಯನ್ನು ಕೊಡು ವಂತದ್ದಾಗಿದೆ. ವ್ಯವಸಾಯದಿಂದ ಹಿಡಿದು ಎಲ್ಲ ವೃತ್ತಿಗೂ ಸುಧಾರಣೆಯನ್ನು ತಂದು ಒಳ್ಳೆಯ ಆಡಳಿತ ತರುವ ನಿಟ್ಟಿನಲ್ಲಿ ಬೆಂಗಳೂರನ್ನು ಉತ್ತಮವಾಗಿ ರೂಪಿಸುವ ಮೂಲಕ ದೂರದೃಷ್ಟಿಯ ನಾಡನ್ನಾಗಿ ಕಟ್ಟಿದ್ದರು. ಈ ಕಾರಣಕ್ಕೆ ಪ್ರಗತಿಯ ಪ್ರತಿಮೆ ಎಂದು ಹೆಸರಿಡಲಾಗಿದೆ ಎಂದು ವಿವರಿಸಿದರು.

ನಾಡಪ್ರಭು ಕೆಂಪೇಗೌಡರು 5ನೇ ಶತಮಾನದ ಹಿಂದೆಯೇ ಸಾಮಂತ ರಾಜರಾಗಿ, ವಿಜಯನಗರ ಸಾಮ್ರಾಜ್ಯದ ಕೃಷ್ಣದೇವರಾಯ ಮತ್ತವರ ಕಾಲಘಟ್ಟದಲ್ಲಿ ಹೇಗೆ ಸಮೃದ್ಧಿಯಾಗಿ ಬೆಳೆದಿತ್ತು, ಅದೇ ರೀತಿ ಬೆಂಗಳೂರನ್ನೂ ನಿರ್ಮಿಸಿದ್ದರು. 64 ಪೇಟೆಗಳು, ದೇವಸ್ಥಾನಗಳು, ಕೋಟೆಗಳು, ಕೆರೆ–ಕಟ್ಟೆಗಳು ಸೇರಿದಂತೆ ಹಲವಾರು ಕೆಲಸಗಳನ್ನು ಮಾಡಿ ಅದ್ಭುತವಾಗಿ ಆಡಳಿತ ನೀಡಿದ್ದರು. ಜೊತೆಗೆ ಒಂದು ನಾಣ್ಯವನ್ನೂ ಅವರು ಹೊರತಂದಿದ್ದರು ಎಂದು ಹೇಳಿದರು.

ಇಂತಹ ವ್ಯಕ್ತಿಗೆ ಗೌರವ ಸಲ್ಲಿಸುವ ನಿಟ್ಟಿನಲ್ಲಿ ಭಾವನಾತ್ಮಕವಾಗಿ ಪ್ರತಿಯೊಂದು ಗ್ರಾಮದಿಂದಲೂ ಪ್ರತಿಯೊಬ್ಬ ವ್ಯಕ್ತಿಯೂ ಗೌರವ ಸಲ್ಲಿಸುವಂತಾಗಬೇಕು. ಎಲ್ಲಾ ಪುಣ್ಯ ಸ್ಥಳಗಳಿಂದಲೂ ಮೃತ್ತಿಕೆಯನ್ನು ತಂದು ಪ್ರತಿಮೆ ಸ್ಥಾಪಿಸುವ ಸ್ಥಳದಲ್ಲಿ ನಿರ್ಮಿಸುತ್ತಿರುವ ಉದ್ಯಾನವನಕ್ಕೆ ಹಾಕಲಾಗುವುದು ಎಂದರು.


16 ಜಿಲ್ಲೆಗಳಲ್ಲಿ ಕೆಂಪೇಗೌಡರ ಪ್ರಭಾವ ಇತ್ತು ಈ ಜಿಲ್ಲೆಗಳಲ್ಲಿ ರಥಗಳು ತೆರಳಿ ಮೃತ್ತಿಕೆಯನ್ನು ಸಂಗ್ರಹಿಸಲಾಗುವುದು ಎಂದರು.

ಈ ವೇಳೆ ಜಿಲ್ಲಾಧ್ಯಕ್ಷ ಸಿ.ಪಿ.ಉಮೇಶ್, ಮುಖಂಡರಾದ ಡಾ.ಸಿದ್ದರಾಮಯ್ಯ, ಎಚ್.ಆರ್.ಅರವಿಂದ್, ಡಾ.ಎಸ್.ಎನ್. ಇಂದ್ರೇಶ್ ಸೇರಿದಂತೆ ಮತ್ತಿತರರಿದ್ದರು.



ಭಾರತೀನಗರ ಸಮೀಪದ ಮುಟ್ಟನಹಳ್ಳಿ–ಅಂಬರಹಳ್ಳಿ ಹೊರ ವಲಯದಲ್ಲಿರುವ ಸೂಳೆಕೆರೆಯನ್ನು ಗ್ರಾಮಸ್ಥರ ಮತ್ತು ಅಧಿಕಾರಿಗಳೊಂದಿಗೆ ಶಾಸಕ ಡಿ.ಸಿ.ತಮ್ಮಣ್ಣ ಭೇಟಿನೀಡಿ ಪರಿಶೀಲನೆ ನಡೆಸಿದರು. ಇದೇ ವೇಳೆ ಗ್ರಾಪಂ ಮಾಜಿ ಅಧ್ಯಕ್ಷ ಲೋಕೇಶ್, ಸದಸ್ಯ ಮನು, ಮುಖಂಡರಾದ ರಾಜೇಶ್, ಪುಟ್ಟೇಗೌಡ, ವೈ.ಪಿ.ಮನುಕುಮಾರ್, ಸಿದ್ದೇಗೌಡ, ಜಗ್ಗಿ, ಶಶಿಕಾಂತ್, ರಮೇಶ್, ವೈ.ಡಿ.ಸಿದ್ದರಾಜು, ರಾಜಣ್ಣ, ದ್ಯಾವೇಗೌಡ, ಕುಮಾರ್, ಚಂದ್ರ, ರವಿ, ಸಂಜಯ ಸೇರಿದಂತೆ ಇತರರಿದ್ದರು.

ಅಪ್ರಮೇಯಂ ನರಸಿಂಹಯ್ಯಂಗಾರ್ ನಿಧನ



ಮೇಲುಕೋಟೆ, ಅ.20– ಶ್ರೀ ಚೆಲುವನಾರಾಯಣಸ್ವಾಮಿ ದೇವಾಲಯದ ವಂಶ ಪಾರಂಪರ್ಯ ಪರಿಚಾರಕರಾದ ಅಪ್ರಮೇಯಂ ನರಸಿಂಹಯ್ಯಂ ಗಾರ್(72– ನಚ್ಚುಮಾಮ) ಗುರುವಾರ ವೈಕುಂಠವಾಸಿಯಾದರು.

ಪತ್ನಿ ಓರ್ವಪುತ್ರ, ಮೂವರು ಸಹೋದರರು, ಇಬ್ಬರು ಸಹೋದರಿಯರು ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ಮೇಲುಕೋಟೆಯಲ್ಲಿ ನಡೆಯಿತು.

6 ದಶಕಗಳಿಗೂ ಹೆಚ್ಚು ಕಾಲ ಚೆಲುವನಾರಾಯಣ ದೇಗುಲದ ಪರಿಚಾರಿಕೆ. ನಮ್ಮಾಳ್ವಾರ್, ಸುದರ್ಶನಾಳ್ವಾರ್ ಇತರ ಸನ್ನಿಧಿಗಳ ನಿರ್ವಹಣೆಯ ಜೊತೆಗೆ ದೇವಾಯದ ಪವಿತ್ರೋತ್ಸವಕ್ಕೆ ವೈಭವದ ಮೆರುಗು ತಂದುಕೊಟ್ಟಿದ್ದರು. ಎಲ್ಲರೊಂದಿಗೆ ಆತ್ಮೀಯತೆಯಿಂದ ಬೆರೆಯುತ್ತಿದ್ದ ನಚ್ಚುಮಾಮ ನಿರಂತರ ಸೇವಾಕೈಂಕರ್ಯಕ್ಕಾಗಿ ಜೀವನ ಮುಡಿಪಾಗಿಟ್ಟಿದ್ದರು.

ಜೋಡಿರಸ್ತೆಯಲ್ಲಿ ಮಳೆ ನೀರು ನಿಲ್ಲದಂತೆ ಕ್ರಮಕ್ಕೆ ಒತ್ತಾಯಿಸಿ ಅರೆಬೆತ್ತಲೆ ಪ್ರತಿಭಟನೆ

15 ದಿನಗಳೊಳಗೆ ಸಮಸ್ಯೆ ಬಗೆಹರಿಯದಿದ್ದರೆ ಚಾ.ನಗರ ಬಂದ್ ಕರೆ ಎಚ್ಚರಿಕೆ

ಚಾಮರಾಜನಗರ, ಅ.20– ನಗರದ ಜೋಡಿ ರಸ್ತೆಯಲ್ಲಿ ಮಳೆ ನೀರು ನಿಲ್ಲದಂತೆ ಕ್ರಮಕೈಗೊಳ್ಳಬೇಕು ಎಂದು ಒತ್ತಾಯಿಸಿ ಕರ್ನಾಟಕ ಸೇನಾಪಡೆ ವತಿಯಿಂದ ನಗರದಲ್ಲಿ ಅರೆಬೆತ್ತಲೆ ಪ್ರತಿಭಟನೆ ನಡೆಸಲಾಯಿತು.

ನಗರದ ಜಿಲ್ಲಾಡಳಿತ ಭವನದ ಮುಂಭಾಗ ಜಮಾಯಿಸಿದ ಪ್ರತಿಭಟನಾನಿರತರು ಸರ್ಕಾರ, ಜಿಲ್ಲಾಡಳಿತದ ವಿರುದ್ಧ ಘೋಷಣೆ ಕೂಗಿ ಅಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಸೇನಾಪಡೆ ಅಧ್ಯಕ್ಷ ಶ್ರೀನಿವಾಸಗೌಡ ಮಾತನಾಡಿ, ನಗರದ ಜೋಡಿರಸ್ತೆಯನ್ನು ಅವೈಜ್ಞಾನಿಕವಾಗಿ ನಿರ್ಮಾಣ ಮಾಡಿರುವುದರಿಂದ ಮಳೆ ಬಂದರೆ ಈ ರಸ್ತೆಯು ಸಂಪೂರ್ಣ ಮುಳುಗಡೆಯಾಗಿ ಸಂಚಾರಕ್ಕೆ ತೊಂದರೆ ಉಂಟಾಗುತ್ತಿದೆ. ಅಲ್ಲದೆ ಬಾಬುಜಗಜೀವನರಾಂ ಬಡಾವಣೆ, ಸೋಮಣ್ಣ ಲೇಔಟ್, ರೈಲ್ವೆ ಬಡಾವಣೆ, ಇತರ ಬಡಾವಣೆ ಜಲಾವೃತಗೊಂಡು ನಿವಾಸಿಗಳು ತೀವ್ರ ಸಂಕಷ್ಟ ಎದುರಿಸುತ್ತಿದ್ದಾರೆ. ಇಷ್ಟೆಲ್ಲ ಸಮಸ್ಯೆಗಳಿದ್ದರೂ ಜಿಲ್ಲಾಡಳಿತ ಕುರುಡುತನ ತೋರುತ್ತಿದೆ ಎಂದು ಆರೋಪಿಸಿದರು.

ನೆರೆಸಂತ್ರಸ್ತರಿಗೆ ಪರಿಹಾರ ವಿತರಸಬೇಕು. ಸರ್ಕಾರ, ಜಿಲ್ಲಾಡಳಿತ ಇನ್ನೂ 15 ದಿನಗಳೊಳಗೆ ಜೋಡಿರಸ್ತೆಯಲ್ಲಿ ಮಳೆನೀರು ನಿಲ್ಲದಂತೆ ಕ್ರಮಕೈಗೊಳ್ಳದಿದ್ದರೆ ಚಾಮರಾಜನಗರ ಬಂದ್‌ಗೆ ಕರೆ ನೀಡುವುದಾಗಿ ಚಾ.ರಂ.ಶ್ರೀನಿವಾಸಗೌಡ ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಶಾ.ಮುರಳಿ, ಪಣ್ಯದಹುಂಡಿ ರಾಜು, ನಿಜಧ್ವನಿ ಗೋವಿಂದರಾಜು, ಮರಿಯಾಲದಹುಂಡಿ ಕುಮಾರ್, ಕೆ.ಎಂ. ನಾಗರಾಜು, ಗು.ಪುರುಷೋತ್ತಮ್, ಗಡಿನಾಡು ಕನ್ನಡ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷ ಚಾ.ರಾ. ಕುಮಾರ್, ನಂಜುಂಡಶೆಟ್ಟಿ, ಚಾ.ಸಿ.ಗುರು ಸ್ವಾಮಿ ಆಕಾಶ್ ಆಟೋ ಇತರರು ಭಾಗವಹಿಸಿದ್ದರು.



ಭ್ರಷ್ಟಾಚಾರದ ನಿರ್ಮೂಲನೆಗೆ ಯುವ ಸಮೂಹ ಮುಂದಾಗಬೇಕು



ಚಾಮರಾಜನಗರ, ಅ.20– ಲಂಚ, ಭ್ರಷ್ಟಾಚಾರದ ನಿರ್ಮೂಲನೆಗೆ ಯುವ ಸಮೂಹದ ಪಾಲ್ಗೊಳ್ಳುವಿಕೆ ಅತ್ಯವಶ್ಯವಾಗಿದೆ ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ಹೇಳಿದರು.

ನಗರದ ವರನಟ ಡಾ. ರಾಜ್‌ಕುಮಾರ್ ರಂಗಮಂದಿರದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ನೆಹರು ಯುವ ಕೇಂದ್ರ, ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಜಿಲ್ಲಾಮಟ್ಟದ ಯುವ ಉತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಆಸೆ ಆಮಿಷಗಳಿಗೆ ಯುವಕರು ಒಳಗಾಗಬಾರದು. ಸಮಾಜದಲ್ಲಿನ ಭ್ರಷ್ಟಾಚಾರ ನಿರ್ಮೂಲನೆ ಮಾಡಲು ಯುವಸಮೂಹ ಮುಂದಾಗ ಬೇಕಿದೆ. ಯುವ ಸಮೂಹಕ್ಕೆ ಸೌಲಭ್ಯಗಳು ಸಮರ್ಪಕವಾಗಿ ತಲುಪಬೇಕು. ಈ ನಿಟ್ಟಿನಲ್ಲಿ ಅಧಿಕಾರಿಗಳು ಶಿಸ್ತುಬದ್ಧವಾಗಿ ಯೋಜನೆಗಳನ್ನು ತಲುಪಿಸುವ ಕೆಲಸ ಮಾಡಬೇಕೆಂದು ಪುಟ್ಟರಂಗಶೆಟ್ಟಿ ತಿಳಿಸಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಕಾಡಾ ಅಧ್ಯಕ್ಷ ಜಿ.ನಿಜಗುಣರಾಜು, ದೇಶದ ಯುವಜನತೆ ಯಶಸ್ವಿಯಾಗಿ ಗುರಿ ತಲುಪಲು ಆತ್ಮವಿಶ್ವಾಸವನ್ನು ಅಳವಡಿಸಿಕೊಳ್ಳಬೇಕು. ಯುವಶಕ್ತಿ ರಾಷ್ಟ್ರದ ಶಕ್ತಿಯಾಗಿದೆ. ಯುವ ಸಮೂಹ ಯಶಸ್ಸಿಗಾಗಿ ನಿಗದಿತ ಗುರಿ ಹೊಂದಿ ಗುರುವಿನ ಮಾರ್ಗದರ್ಶನದಲ್ಲಿ ಮುನ್ನಡೆಯಬೇಕು ಎಂದರು.

ಪ್ರಾಸ್ತಾವಿಕ ನುಡಿಗಳನ್ನಾಡಿದ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯದ ನೆಹರು ಯುವ ಕೇಂದ್ರ ಸಂಘಟನೆಯ ರಾಜ್ಯ ನಿರ್ದೇಶಕ ಎಂ.ಎನ್. ನಟರಾಜು, ದೇಶವು ಸುಮಾರು 45 ಕೋಟಿ ಯುವಜನತೆಯನ್ನು ಹೊಂದಿದೆ. ಯುವಶಕ್ತಿ ಅಣುಶಕ್ತಿ ಇದ್ದಹಾಗೆ, ದೇಶವು ಇದನ್ನು ಪರಿಪೂರ್ಣವಾಗಿ ಬಳಸಿಕೊಳ್ಳಬೇಕು. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ಸೇವಾ ಯೋಜನೆ ಸ್ಥಾಪಿಸಲಾಯಿತು. ಯುವಕ–ಯುವತಿಯರ ಸಬಲೀಕರಣಕ್ಕಾಗಿ ನೆಹರು ಯುವ ಕೇಂದ್ರಗಳನ್ನು ಆರಂಭಿಸಲಾಗಿದೆ ಎಂದರು.

ನಗರಸಭೆ ಅಧ್ಯಕ್ಷೆ ಆಶಾ ನಟರಾಜು, ಸದಸ್ಯರಾದ ಹೆಚ್.ಎಸ್.ಮಮತಾ ಬಾಲಸುಬ್ರಹ್ಮಣ್ಯಂ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರಾದ ಆರ್.ಅನಿತಾ, ಕಾರ್ಮಿಕ ಇಲಾಖೆ ಯೋಜನಾಧಿಕಾರಿ ಮಹೇಶ್, ರಘು, ರಾಷ್ಟ್ರ ಯುವಪ್ರಶಸ್ತಿ ಪುರಸ್ಕೃತರಾದ ಸುರೇಶ್ ಋಗ್ವೇದಿ, ಸಿ.ಎಂ. ನರಸಿಂಹ ಮೂರ್ತಿ, ರಾಜ್ಯ ಯುವ ಪ್ರಶಸ್ತಿ ಪುರಸ್ಕೃತರಾದ ಎಸ್.ಪಿ. ನಾಗರಾಜು, ಜಿ. ಬಂಗಾರು ಇತರರು ಉಪಸ್ಥಿತರಿದ್ದರು.

ಶಾಸಕ ಪುಟ್ಟರಂಗಶೆಟ್ಟಿಗೆ ಕ್ಷೇತ್ರದ ಅಭಿವೃದ್ಧಿಗಿಂತ ತಮ್ಮ ಅಭಿವೃದ್ಧಿ ಮುಖ್ಯ

ಚಾಮರಾಜನಗರ, ಅ.20– ಸ್ಥಳೀಯ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರಿಗೆ ಕ್ಷೇತ್ರದ ಅಭಿವೃದ್ಧಿಗಿಂತ ತಮ್ಮ ಅಭಿವೃದ್ಧಿ ಮುಖ್ಯವಾಗಿದೆ ಎಂದು ಬಿಜೆಪಿ ರೈತ ಮುಖಂಡ ಅಮ್ಮನಪುರ ಮಲ್ಲೇಶ್ ಗಂಭೀರ ಆರೋಪ ಮಾಡಿದರು.

ಸತತವಾಗಿ ಮಳೆ ಬೀಳುತ್ತಿರುವ ಕಾರಣ ನೂರಾರು ಮನೆಗಳ ಗೋಡೆ ಕುಸಿದಿದೆ. ಸಾವಿರಾರು ಎಕರೆ ಫಸಲು ನಷ್ಟವಾಗಿವೆ. ಈ ಬಗ್ಗೆ ಅವರಿಗೆ ಮಾಹಿತಿ ಇಲ್ಲ. ನೊಂದವರ ಬಳಿಗೆ ತೆರಳಿ ಕಷ್ಟ ಕೇಳುತ್ತಿಲ್ಲ. ಇದರ ಬದಲು ತಮ್ಮ ಅಭಿವೃದ್ಧಿಗಾಗಿ ಕರಿಕಲ್ಲು ಉದ್ಯಮದಲ್ಲಿ ತೊಡಗಿಕೊಂಡಿದ್ದಾರೆ. ಪೆಟ್ರೋಲ್ ಬಂಕ್ ನಿರ್ಮಿಸಿಕೊಂಡು ತಾವು ಅಭಿವೃದ್ಧಿ ಆಗುತ್ತಿದ್ದಾರೆ. ಕ್ಷೇತ್ರದ ಅಭಿವೃದ್ಧಿ ಬಗ್ಗೆ ತಲೆಕೆಡಿಸಿಕೊಳ್ಳದೆ ಬಿಸಿನೆಸ್‌ನಲ್ಲಿ ತೊಡಗಿದ್ದಾರೆ ಎಂದು ಸುದ್ದಿಗೋಷ್ಠಿಯಲ್ಲಿ ದೂರಿದರು.

ಕಳೆದ 15 ವರ್ಷಗಳಿಂದ ಶಾಸಕರಾಗಿರುವ ಪುಟ್ಟರಂಗಶೆಟ್ಟಿ ಬಹಳಷ್ಟು ಆಸ್ತಿ ಸಂಪಾದಿಸಿದ್ದಾರೆ. ಇವರಿಗೆ ಜನರ ಅಭಿವೃದ್ಧಿಗಿಂತ ತಮ್ಮ ಅಭಿವೃದ್ಧಿಯೇ ಮುಖ್ಯವಾಗಿದೆ ಎಂದರು.

ರಾಷ್ಟ್ರಮಟ್ಟದ ಅಥ್ಲೆಟಿಕ್ಸ್ ಕ್ರೀಡಾಕೂಟಕ್ಕೆ ಆಯ್ಕೆ



ಚಾಮರಾಜನಗರ, ಅ.20– ರಾಜ್ಯದ ಬಳ್ಳಾರಿಯಲ್ಲಿ ನಡೆದ ವಿದ್ಯಾ ಭಾರತಿ ರಾಜ್ಯ ಮಟ್ಟದ ಕ್ರೀಡಾಕೂಟದಲ್ಲಿ ನಗರದ ಸೇವಾ ಭಾರತಿ ಪಬ್ಲಿಕ್ ಶಾಲೆಯ ಇಬ್ಬರು ಕ್ರೀಡಾಪಟುಗಳು ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ಭಾಗವಹಿಸಿದ್ದ ಶಾಲೆಯ ಚಿನ್ಮಯ್ ತ್ರಿವಿಧ ಜಿಗಿತದಲ್ಲಿ ಪ್ರಥಮ, ಎತ್ತರ ಜಿಗಿತದಲ್ಲಿ ದ್ವಿತೀಯ ಹಾಗೂ ಉದ್ದ ಜಿಗಿತದಲ್ಲಿ ತೃತೀಯ ಸ್ಥಾನ ಪಡೆದರೆ, ಮತ್ತೊಬ್ಬ ವಿದ್ಯಾರ್ಥಿ ದಿವ್ಯಪ್ರಕಾಶ್ ಡಿಸ್ಕಸ್ ಥ್ರೋನಲ್ಲಿ ಪ್ರಥಮ ಸ್ಥಾನವನ್ನು ಗಳಿಸಿದ್ದಾನೆ. ಇವರು ಹರಿಯಾಣದ ಕುರುಕ್ಷೇತ್ರದಲ್ಲಿ ನಡೆಯುವಂತಹ ರಾಷ್ಟ್ರಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾಗಿ ಶಾಲೆಗೆ ಕೀರ್ತಿಯನ್ನು ತಂದಿರುತ್ತಾರೆ. ಇವರನ್ನು ಸೇವಾ ಭಾರತಿ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ, ಪ್ರಾಂಶುಪಾಲರು ಹಾಗೂ ಶಿಕ್ಷಕ ವೃಂದದವರು ಅಭಿನಂದಿಸಿದ್ದಾರೆ.

ಜೆಡಿಎಸ್‌ಗೆ 30–40 ಸ್ಥಾನ ಬಂದರೆ ಅಧಿಕಾರದಿಂದ ದೂರ... ದೂರ...

ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಸ್ಪಷ್ಟ ನುಡಿ



ಮೈಸೂರು,ಅ.20(ಆರ್‌ಕೆಬಿ)– ಈ ಬಾರಿ ಜೆಡಿಎಸ್‌ಗೆ 30–40 ಸ್ಥಾನ ಬಂದರೆ ನಾನು ಅಧಿಕಾರದಿಂದ ದೂರ ಉಳಿಯಲು ನಿರ್ಧರಿಸಿದ್ದೇನೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ತಿಳಿಸಿದರು. ಗುರುವಾರ ಕುಟುಂಬ ಸಮೇತ ಚಾಮುಂಡಿಬೆಟ್ಟಕ್ಕೆ ಭೇಟಿ ನೀಡಿ, ದೇವರ ದರ್ಶನ ಪಡೆದ ಬಳಿಕ ಮಾಧ್ಯಮದೊಂದಿಗೆ ಮಾತನಾಡಿದ ಅವರು, ಈ ಬಾರಿ ಜೆಡಿಎಸ್‌ಗೆ 30–40 ಸ್ಥಾನ ಬಂದರೂ ಕುಮಾರಸ್ವಾಮಿ ಸಿಎಂ ಆಗುತ್ತಾರೆ ಎಂದು ನಮ್ಮ ಪಕ್ಷದ ಶಾಸಕರು ಅಂದುಕೊಳ್ಳುವುದು ಬೇಡ. ನಮ್ಮಲ್ಲೇ ಯಾರಾದರೂ ಒಬ್ಬರನ್ನೂ ಆ ಸ್ಥಾನದಲ್ಲಿ ಕೂರಿಸಿ, ನಾನು ಮಾರ್ಗದರ್ಶನ ಮಾಡುತ್ತೇನಷ್ಟೇ ಎಂದು ಹೇಳಿದರು.

ಸಂಪೂರ್ಣ ಬಹುಮತ ನೀಡಲು ಮನವಿ: ಈ ಬಾರಿ ನನಗೆ ಸಂಪೂರ್ಣ ಬಹುಮತ ಕೊಟ್ಟರೆ, 'ಪಂಚರತ್ನ' ಯೋಜನೆಗಳನ್ನು 5 ವರ್ಷಗಳಲ್ಲಿ ಅನುಷ್ಠಾನಗೊಳಿಸುತ್ತೇನೆ ಎಂದು ಭರವಸೆಯ ಮಾತುಗಳನ್ನಾಡಿದ ಕುಮಾರಸ್ವಾಮಿ, ಕಾರ್ಯಕ್ರಮ ಅನುಷ್ಠಾನ ಮಾಡದಿದ್ದರೆ ಪಕ್ಷವನ್ನೇ ವಿಸರ್ಜಿಸುತ್ತೇನೆ. ಎಂದು ಚಾಮುಂಡಿ ದೇವಿಯ ಸನ್ನಿಧಾನದಲ್ಲಿ ನಿಂತು ಈ ಮಾತು ಹೇಳುತ್ತಿದ್ದೇನೆ. ಪಂಚರತ್ನ ಯೋಜನೆ ಅನುಷ್ಠಾನ ಆಗಬೇಕಾದರೆ ಸಮ್ಮಿಶ್ರ ಸರ್ಕಾರದಿಂದ ಸಾಧ್ಯವಿಲ್ಲ. ಸಂಪೂರ್ಣ ಬಹುಮತದಿಂದ ಮಾತ್ರ ಸಾಧ್ಯ. ಈ ಕಾರಣ ನಾನು ಸಮ್ಮಿಶ್ರ ಸರ್ಕಾರ ಸಂದರ್ಭ ಬಂದ್ರೆ ಮುಖ್ಯಮಂತ್ರಿ ಆಗುವುದಿಲ್ಲ ಎಂದು ಹೇಳಿದರು.

ವಿಧಾನಸಭೆ ಚುನಾವಣೆಗೆ ನಿಖಿಲ್ ಸ್ಪರ್ಧೆ ಸುಳಿವು: ಜೆಡಿಎಸ್‌ನ 126 ಅಭ್ಯರ್ಥಿಗಳ ಪಟ್ಟಿ ಸಿದ್ಧವಾಗಿದೆ. ನಿಖಿಲ್ ಕುಮಾರಸ್ವಾಮಿ ತಮ್ಮ ಶಕ್ತಿ ಬಳಸಿಕೊಂಡು ರಾಜ್ಯಾದ್ಯಂತ ಪ್ರವಾಸ ಮಾಡಲು ತೀರ್ಮಾನ ಮಾಡಿಕೊಂಡಿದ್ದಾರೆ. ಈಗ ಸಿದ್ಧವಾಗಿರುವ 126 ಸಂಭವನೀಯ ಅಭ್ಯರ್ಥಿಗಳ ಪಟ್ಟಿಯಲ್ಲಿ ಅವರ ಹೆಸರೂ ಇರಬಹುದು ಎಂದು ಹೇಳುವ ಮೂಲಕ ಹೆಚ್.ಡಿ.ಕುಮಾರಸ್ವಾಮಿ ಅವರು ವಿಧಾನಸಭೆ ಚುನಾವಣೆಗೆ ನಿಖಿಲ್ ಕುಮಾರಸ್ವಾಮಿ ಸ್ಪರ್ಧೆ ಕುರಿತು ಸುಳಿವು ನೀಡಿದರು.

ಎರಡು ದಿನಗಳ ಜೆಡಿಎಸ್ ಸಮಾಲೋಚನಾ ಕಾರ್ಯಾಗಾರಕ್ಕೆ ತೆರೆ

ಮೈಸೂರು, ಅ.20(ಎಸ್‌ಬಿಡಿ)– ಮುಂಬರುವ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಸಂಘಟನೆಯ ಸಂಕಲ್ಪದೊಂದಿಗೆ ಜೆಡಿಎಸ್ ಮೈಸೂರಿನಲ್ಲಿ ಏರ್ಪಡಿಸಿದ್ದ ಎರಡು ದಿನಗಳ ಸಮಾಲೋಚನಾ ಕಾರ್ಯಾಗಾರ ಗುರುವಾರ ಸಮಾರೋಪಗೊಂಡಿತು.

ಮೈಸೂರು ಹೊರವಲಯದ ಖಾಸಗಿ ರೆಸಾರ್ಟ್‌ನಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ನೇತೃತ್ವದಲ್ಲಿ ನಡೆದ ಕಾರ್ಯಾಗಾರದಲ್ಲಿ ಜೆಡಿಎಸ್ ವರಿಷ್ಠರಾದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಭಾಗವಹಿಸಿ ಪಕ್ಷದ ಸಂಘಟನೆ, ನಾಯಕರು, ಮುಖಂಡರು ಹಾಗೂ ಕಾರ್ಯಕರ್ತರ ನಡುವಿನ ಸಮನ್ವಯತೆ ಬಗ್ಗೆ ಕಿವಿಮಾತು ಹೇಳಿದರು.

ಹೆಚ್.ಡಿ.ದೇವೇಗೌಡರು, ಹೆಚ್.ಡಿ.ಕುಮಾರಸ್ವಾಮಿ ಹಾಗೂ ಪಕ್ಷದ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ ಜಿಲ್ಲಾವಾರು ಟಿಕೆಟ್ ಆಕಾಂಕ್ಷಿಗಳೊಂದಿಗೆ ದುಂಡು ಮೇಜಿನ ಸಭೆ ನಡೆಸಿ, ಪ್ರತಿಯೊಬ್ಬರ ಅಭಿಪ್ರಾಯ ಹಾಗೂ ಪಕ್ಷ ಸಂಘಟನೆ ಸಂಬಂಧ ಸಲಹೆ ಸಂಗ್ರಹಿಸಿದರು. ಈ ವೇಳೆ ಹೆಚ್.ಡಿ.ದೇವೇಗೌಡರು, ಟಿಕೆಟ್ ಆಕಾಂಕ್ಷಿಗಳಿಗೆ ಕೆಲವು ಸಲಹೆ–ಸೂಚನೆ ನೀಡಿದರು.

ಹೆಚ್‌ಡಿಕೆ ಖಡಕ್ ಎಚ್ಚರಿಕೆ: ಟಿಕೆಟ್ ಆಕಾಂಕ್ಷಿಗಳೊಂದಿಗೆ ನಡೆಸಿದ ಗೌಪ್ಯ ಸಭೆಯಲ್ಲಿ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ, ಪ್ರತಿಯೊಂದು ಕ್ಷೇತ್ರದಲ್ಲೂ ಒಮ್ಮತದ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಉದ್ದೇಶವಿದೆ. ಟಿಕೆಟ್ ವಿಚಾರವಾಗಿ ಯಾವುದೇ ಕಾರಣಕ್ಕೂ ಗೊಂದಲ ಆಗಬಾರದು. ಸಮಸ್ಯೆ ಸೃಷ್ಟಿಸುವ ಪ್ರವೃತ್ತಿಯನ್ನು ಸಹಿಸುವ ಪ್ರಶ್ನೆಯೇ ಇಲ್ಲ. ಉಡಾಫೆ ಮಾಡದೆ ಪಕ್ಷದ ಗೆಲುವಿಗೆ ಹೆಚ್ಚು ಗಮನ ಹರಿಸಬೇಕು ಎಂದು ತೀಕ್ಷ್ಣವಾಗಿ ಎಚ್ಚರಿಕೆ ನೀಡಿದರೆಂದು ತಿಳಿದುಬಂದಿದೆ.

ವಿಶ್ವಾಸವಿದ್ದವರಿಗೆ 'ಬಿ' ಫಾರಂ: ಇದಕ್ಕೂ ಮುನ್ನ ಕಾರ್ಯಾಗಾರದಲ್ಲೂ ಹೆಚ್.ಡಿ.ಕುಮಾರಸ್ವಾಮಿ, ಹಾಲಿ ಶಾಸಕರು, ಮುಂಬರುವ ಚುನಾವಣಾ ಆಕಾಂಕ್ಷಿಗಳು, ಪಕ್ಷದ ಜಿಲ್ಲಾ ಘಟಕಗಳ ಅಧ್ಯಕ್ಷರಿಗೆ ಖಡಕ್ ಆಗಿಯೇ ಸೂಚನೆ ನೀಡಿದ್ದಾರೆ. 2023ರ ವಿಧಾನಸಭೆ ಚುನಾವಣೆ ಪಕ್ಷಕ್ಕೆ ನಿರ್ಣಾಯಕವಾಗಿದ್ದು, ಇದನ್ನು ಯಾರೂ ನಿರ್ಲಕ್ಷ್ಯ ಮಾಡಬಾರದು. ಪ್ರತಿಯೊಂದು ಕ್ಷೇತ್ರದಲ್ಲೂ ಸಮಾನ ಪರಿಶ್ರಮ ಇರಬೇಕು. ಗೆಲ್ಲುವ ಅವಕಾಶವನ್ನು ಕೈಚೆಲ್ಲಿ ಕೂರಬೇಡಿ. ನೋಡೋಣ, ಮಾಡೋಣ ಎನ್ನುವ ಉಡಾಫೆ ಸಲ್ಲದು. ಚುನಾವಣೆಯಲ್ಲಿ ಗೆಲ್ಲುವ ವಿಶ್ವಾಸವಿದ್ದವರು ಮಾತ್ರ 'ಬಿ' ಫಾರಂ ಪಡೆದುಕೊಳ್ಳಿ. ಇಲ್ಲವಾದರೆ ಸುಮ್ಮನೆ ಹಣ ಏಕೆ ನಷ್ಟ ಮಾಡಿಕೊಳ್ಳುತ್ತೀರಿ. ನಮಗೆ ಚುನಾವಣಾ ಫಲಿತಾಂಶದಲ್ಲಿ ಗುರಿ ಸಾಧನೆ ಮುಖ್ಯ. ಚುನಾವಣೆ ಎದುರಿಸುವ ರೀತಿಯ ಬಗ್ಗೆ ಮಾರ್ಗದರ್ಶನ ನೀಡುತ್ತೇವೆ. ಆದರೆ ಈ ವಿಷಯದಲ್ಲಿ ಹುಡುಗಾಟಿಕೆ ಆಡದೆ ಎಚ್ಚರಿಕೆಯಿಂದ ನಡೆದುಕೊಳ್ಳಬೇಕು ಎಂದು ತಿಳಿಸಿದರು.

ದಿನವಿಡೀ ಕಾರ್ಯಾಗಾರದಲ್ಲಿ ಭಾಗಿಯಾಗಿದ್ದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಮುಂಬರುವ ಚುನಾವಣೆಯಲ್ಲಿ ಜೆಡಿಎಸ್ ಗುರಿ ಸಾಧಿಸಲೇಬೇಕಿದೆ. ಈ ನಿಟ್ಟಿನಲ್ಲಿ ಕುಮಾರಸ್ವಾಮಿ ಅವರು ನೀಡಿರುವ ಸಲಹೆ–ಸೂಚನೆಗಳನ್ನು ಪಾಲಿಸಿಕೊಂಡು ಪಕ್ಷ ಸಂಘಟನೆ ಮಾಡಬೇಕೆಂದು ಹೇಳಿದರು.



ನ.1ರಿಂದ ಜನತಾ 'ಪಂಚರತ್ನ ರಥಯಾತ್ರೆ'

ಕಾಂಗ್ರೆಸ್‌ನ 'ಭಾರತ ಐಕ್ಯತಾ ಯಾತ್ರೆ, ಬಿಜೆಪಿಯ 'ಜನಸಂಕಲ್ಪ ಯಾತ್ರೆಗೆ ಜೆಡಿಎಸ್ ಸೆಡ್ಡು ಹೊಡೆಯುವ ನಿಟ್ಟಿನಲ್ಲಿ ನ.1ರಿಂದ ಜನತಾ 'ಪಂಚರತ್ನ ರಥಯಾತ್ರೆ' ಆರಂಭಿಸಲಿದೆ. ಮುಳಬಾಗಿಲು ತಾಲೂಕಿನಲ್ಲಿ ಆಂಜನೇಯ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸುವ ಮೂಲಕ ಮಹತ್ವದ ರಥಯಾತ್ರೆಗೆ ಜೆಡಿಎಸ್ ನಾಯಕರು ಚಾಲನೆ ನೀಡಲಿದ್ದಾರೆ.

ಸಿದ್ದರಾಮಯ್ಯ ವಿರುದ್ಧ ದಾಖಲೆ ಇದ್ದರೆ ತನಿಖೆ ಮಾಡಿಸಿ: ಸಿಎಂ ಬೊಮ್ಮಾಯಿಗೆ ಹೆಚ್‌ಡಿಕೆ ಸಲಹೆ

ಮೈಸೂರು, ಅ.20(ಆರ್‌ಕೆಬಿ)– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಭ್ರಷ್ಟಾಚಾರ ಆರೋಪ ಮಾಡುತ್ತಿರುವ ವಿಚಾರಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಮಾಜಿ ಸಿಎಂ ಕುಮಾರಸ್ವಾಮಿ, ಸಿಎಂ ಬಳಿ ದಾಖಲೆ ಇದ್ದರೆ ತನಿಖೆ ಮಾಡಿಸಿ. ಯಾಕೆ ವಿಳಂಬ ಮಾಡುತ್ತಿದ್ದೀರಿ. ನಿಮ್ಮ ಭಾಷಣ ಆರೋಪಕ್ಕೆ ಸೀಮಿತವಾಗಬಾರದು. ಸಿದ್ದರಾಮಯ್ಯ ಕೂಡ ತನಿಖೆಗೆ ಆಗ್ರಹಿಸಿದ್ದಾರೆ. ನೀವು ಮೊದಲು ತನಿಖೆ ಮಾಡಿಸಿ ಎಂದು ಮುಖ್ಯಮಂತ್ರಿಳಿಗೆ ಅವರಿಗೆ ಸಲಹೆ ನೀಡಿದರು.

ಇತ್ತೀಚಿಗೆ ಕಾಂಗ್ರೆಸ್, ಬಿಜೆಪಿ ಪರಸ್ಪರ ಅವರೇ ಟೀಕೆ ಮಾಡಿಕೊಳ್ಳುತ್ತಿದ್ದಾರೆ. ಜೆಡಿಎಸ್ ವಿಚಾರ ಎತ್ತುತ್ತಿಲ್ಲ. ಅದರ ಅರ್ಥವನ್ನು ಸೂಕ್ಷ್ಮವಾಗಿ ಗಮನಿಸಿ, ಜೆಡಿಎಸ್ ಪಕ್ಷವನ್ನು ಒಳ್ಳೆತನದಲ್ಲಿ ಇಟ್ಟುಕೊಳ್ಳಲು ಕಾಂಗ್ರೆಸ್ ಬಿಜೆಪಿ ಈ ಕೆಲಸ ಮಾಡುತ್ತಿವೆ. ಕಾಂಗ್ರೆಸ್, ಬಿಜೆಪಿಗೆ ಸ್ವತಂತ್ರ ಸರ್ಕಾರ ಬರುವ ಯಾವ ವಿಶ್ವಾಸವೂ ಇಲ್ಲ. ಜೆಡಿಎಸ್ ಅವಶ್ಯಕತೆ ಬೇಕಾಗಬಹುದು ಎಂದು ನಮ್ಮನ್ನು ಯಾರು ಟೀಕೆ ಮಾಡುತ್ತಿಲ್ಲ. ಇದೆಲ್ಲವೂ ನನಗೆ ಅರ್ಥವಾಗಿದೆ ಎಂದು ತಿಳಿಸಿದರು.

ಕರ್ನಾಟಕದ ಮಟ್ಟಿಗೆ ಖರ್ಗೆ ಇನ್ನೊಂದು ಪವರ್ ಸೆಂಟರ್ ಆಗ್ತಾರೆ

ಎಐಸಿಸಿ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಮಲ್ಲಿಕಾರ್ಜುನ ಖರ್ಗೆ ವಿಚಾರಕ್ಕೆ ಪ್ರತಿಕ್ರಿಯಿಸಿದ ಕುಮಾರಸ್ವಾಮಿ, ಅದು ಅವರ ಆಂತರಿಕ ವಿಚಾರ. ಆದರೆ, ಕನ್ನಡಿಗರೊಬ್ಬರು ಆ ಸ್ಥಾನಕ್ಕೆ ಆಯ್ಕೆಯಾಗಿರುವುದು ಸಂತೋಷ ನೀಡಿದೆ. ಹಿಂದೆ ನಿಜಲಿಂಗಪ್ಪ ಎಐಸಿಸಿ ಅಧ್ಯಕ್ಷರಾಗಿದ್ದರು. ಆಗಿನ ಕಾಂಗ್ರೆಸ್ ಬೇರೆ, ಈಗಿನ ಕಾಂಗ್ರೆಸ್ ಬೇರೆ. ಖರ್ಗೆ ಅವರು ಸ್ವತಂತ್ರವಾಗಿ ಕೆಲಸ ಮಾಡಲು ಅವಕಾಶ ಆಗುತ್ತ ಅಂತ ಕಾದು ನೋಡಬೇಕು. ಕರ್ನಾಟಕದ ಮಟ್ಟಿಗೆ ಅವರು ಇನ್ನೊಂದು ಪವರ್ ಸೆಂಟರ್ ಆಗುತ್ತಾರೆ ಎಂದು ನುಡಿದರು.

ಶಾಸಕ ಶಿವಲಿಂಗೇಗೌಡ ನಮ್ಮ ಜೊತೆಗೇ ಇರುವುದಾಗಿ ತಿಳಿಸಿದ್ದಾರೆ: ಹೆಚ್‌ಡಿಕೆ

ಅರಸೀಕೆರೆ ಶಾಸಕ ಶಿವಲಿಂಗೇಗೌಡರ ಗೈರು ಹಾಜರಿ ಬಗ್ಗೆ ಪ್ರತಿಕ್ರಿಯಿಸಿದ ಕುಮಾರಸ್ವಾಮಿ, ಅವರಿಗೆ ಸ್ಥಳೀಯವಾಗಿ ಒಂದಿಷ್ಟು ಸಮಸ್ಯೆಗಳಿರುವ ಕಾರಣಕ್ಕಾಗಿ ಅವರು ಕಾರ್ಯಾಗಾರಕ್ಕೆ ಬಂದಿಲ್ಲ. ನಮ್ಮ ಜೊತೆಯೇ ಇರುತ್ತೇನೆ ಎಂದಿದ್ದಾರೆ. ಇರುವುದು ಬಿಡುವುದು ಅವರ ವೈಯಕ್ತಿಕ ನಿರ್ಧಾರ. ಕಾಂಗ್ರೆಸ್ ಮತ್ತು ಬಿಜೆಪಿ ಈ ಬಾರಿ ಅವರನ್ನು ಸೋಲಿಸುವ ಹುನ್ನಾರ ನಡೆಸಿವೆ. ಅದೆಲ್ಲದರ ಲೆಕ್ಕಾಚಾರದಲ್ಲಿ ತೊಡಗಿದ್ದಾರೆ. ಈಗಾಗಲೇ ಮೈಸೂರು ಭಾಗದ ಅಭ್ಯರ್ಥಿಗಳ ಬಹುತೇಕ ಪಟ್ಟಿ ಸಿದ್ಧವಿದೆ ಎಂದರು.

ನಿಖಿಲ್ ಜೊತೆಗೆ ಸೆಲ್ಫಿಗೆ ಮುಗಿಬಿದ್ದ ಅಭಿಮಾನಿಗಳು



ಮೈಸೂರು, ಅ.20– ತಮ್ಮ ತಂದೆ ಕುಮಾರಸ್ವಾಮಿ, ತಾಯಿ ಅನಿತಾ ಕುಮಾರಸ್ವಾಮಿ ಅವರೊಂದಿಗೆ ಗುರುವಾರ ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡಿ, ದೇವರ ದರ್ಶನ ಪಡೆದ ರಾಜ್ಯ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರ ಜೊತೆ ಸೆಲ್ಫಿ ತೆಗೆದುಕೊಳ್ಳಲು ಅಭಿಮಾನಿಗಳು ಮುಗಿಬಿದ್ದರು.

ರಾಜಕೀಯ ರಂಗದ ಜೊತೆಗೆ ಚಲನಚಿತ್ರ ನಟರೂ ಆಗಿರುವ ನಿಖಿಲ್ ಕುಮಾರಸ್ವಾಮಿ ಅವರನ್ನು ಕಂಡ ಕೂಡಲೇ ಅಭಿಮಾನಿಗಳು ಸೆಲ್ಫಿಗೆ ಮುಂದಾದರು. ಆದರೆ ನಿಖಿಲ್ ಸ್ವಲ್ಪವೂ ಬೇಸರಿಸಿಕೊಳ್ಳದೇ ಅಭಿಮಾನಿಗಳಿಗೆ ಸೆಲ್ಫಿಗೆ ಫೋಸ್ ನೀಡಿ, ಖುಷಿಪಡಿಸಿದರು.

ರಾಜ್ಯದಲ್ಲಿ ಜೆಡಿಎಸ್ ಸರ್ಕಾರ; ಹೆಚ್‌ಡಿಕೆ ಮುಖ್ಯಮಂತ್ರಿ



ಮೈಸೂರು, ಅ.20(ಆರ್‌ಕೆಬಿ)– ಮಾಜಿ ಪ್ರಧಾನಿ, ಜೆಡಿಎಸ್ ವರಿಷ್ಠ ಹೆಚ್.ಡಿ.ದೇವೇಗೌಡರು ತಮ್ಮ 92ನೇ ವಯಸ್ಸಿನಲ್ಲೂ ಪಕ್ಷದ ಕಾರ್ಯಕ್ರಮದಲ್ಲಿ ಭಾಗಿಯಾಗಿರುವುದು ನಮ್ಮೆಲ್ಲರ ಸೌಭಾಗ್ಯ ಎಂದು ಪಕ್ಷದ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ ತಿಳಿಸಿದರು.

ಪಕ್ಷದ ಸಮಾಲೋಚನಾ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಹೆಚ್.ಡಿ.ದೇವೇಗೌಡರು ರಾಜ್ಯಕ್ಕೆ ನೀಡಿರುವ ಕೊಡುಗೆ ಅಪಾರವಾದದ್ದು. ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಜೆಡಿಎಸ್ ಸರ್ಕಾರ ರಚನೆ ಮಾಡಲಿದೆ. ಕುಮಾರಸ್ವಾಮಿ ಮತ್ತೊಮ್ಮೆ ಸಿಎಂ ಆಗಲಿರುವುದನ್ನು ನೀವು ಕಣ್ತುಂಬಿಕೊಳ್ಳಲಿದ್ದೀರಿ ಎಂದರು.

ನಕಲಿ ದಾಖಲೆ ಸೃಷ್ಟಿಸಿ ಭೂ ಪರಿಹಾರ ಬಿಡುಗಡೆ

ಮುಡಾ ವಿಶೇಷ ಭೂಸ್ವಾಧೀನಾಧಿಕಾರಿ ಸೇರಿ 6 ಮಂದಿ ವಿರುದ್ಧ ಕೇಸ್ ದಾಖಲು

ಮೈಸೂರು,ಅ.20–ಜಮೀನಿಗೆ ನಕಲಿ ದಾಖಲೆ ಸೃಷ್ಟಿಸಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಮತ್ತು ನ್ಯಾಯಾಲಯವನ್ನು ವಂಚಿಸಿ ಮುಡಾದಿಂದ 98.33 ಲಕ್ಷ ರೂ. ನಿಗದಿತ ಬೆಲೆ ಪರಿಹಾರ ಹಣ ಪಡೆದ ಆರೋಪದ ಮೇರೆಗೆ ಮುಡಾದ ಹಿಂದಿನ ವಿಶೇಷ ಭೂಸ್ವಾಧಿನಾಧಿಕಾರಿ ಮತ್ತು ಓರ್ವ ವಕೀಲರು ಸೇರಿ 6 ಮಂದಿ ವಿರುದ್ಧ ಮೈಸೂರಿನ ಅಶೋಕಪುರಂ ಠಾಣೆಯಲ್ಲಿ ಕ್ರಿಮಿನಲ್ ಕೇಸ್ ದಾಖಲಾಗಿದೆ.

ಮೈಸೂರಿನ ಲಲಿತಾದ್ರಿಪುರಂ ನಿವಾಸಿ ಎಂ.ಮಹದೇವಸ್ವಾಮಿ ವಂಚನೆಗೊಳಗಾದವರಾಗಿದ್ದು, ನಕಲಿ ದಾಖಲೆಗಳ ಮೂಲಕ ಇವರಿಗೆ ಸೇರಬೇಕಾದ ಹಣವನ್ನು ಪಡೆದ ಆರೋಪದ ಮೇರೆಗೆ ಪುಟ್ಟ ಬುದ್ಧಿ, ಪುಷ್ಪ, ಲಿಂಗಣ್ಣ, ಮಹದೇವ, ಮುಡಾದ ಹಿಂದಿನ ವಿಶೇಷ ಭೂಸ್ವಾಧೀನಾಧಿಕಾರಿ (ಹಾಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಭೂಸ್ವಾಧೀನಾಧಿಕಾರಿ) ಹರ್ಷವರ್ಧನ್ ಹಾಗೂ ಮೈಸೂರಿನ ವಕೀಲ ಎಂ.ರಾಜೇಶ್ ವಿರುದ್ಧ ಪೊಲೀಸರು ಮೈಸೂರಿನ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಸಿಜೆಎಂ ನ್ಯಾಯಾಲಯದ ಆದೇಶದ ಮೇರೆಗೆ ಭಾರತೀಯ ದಂಡ ಸಂಹಿತೆ 416, 419,420,406 ರಡಿ ಪ್ರಕರಣ ದಾಖಲಿಸಿದ್ದಾರೆ.

ವಿವರ: ಈ ಪ್ರಕರಣದಲ್ಲಿ ದೂರುದಾರರಾದ ಎಂ.ಮಹದೇವಸ್ವಾಮಿ ಅವರ ತಾಯಿ ಕೆಂಪಮ್ಮ ಅವರಿಗೆ ಯಡದೇವಯ್ಯನ ಪುಟ್ಟ ಮಾದಯ್ಯನ ಪತ್ನಿ ಚಿಕ್ಕತಾಯಮ್ಮ ಮತ್ತು ಅವರ ಮಕ್ಕಳು 1968ರ ಡಿ.7ರಂದು ಜಮೀನನ್ನು ಭೋಗ್ಯಕ್ಕೆ ನೀಡಿದ್ದರು. ಭೋಗ್ಯದ ಹಣ ತೀರಿಸಲಾಗದ ಕಾರಣ 1969ರ ಡಿ.15 ರಂದು ಸದರಿ ಜಮೀನನು ಕೆಂಪಮ್ಮನವರಿಗೆ ಕ್ರಯ ಪತ್ರದ ಮೂಲಕ ಹಸ್ತಾಂತರಿಸಿದ್ದಾರೆ. ಪತ್ರ ಬರೆಯುವಾಗ ಕಣ್ತಪ್ಪಿನಿಂದ ಸರ್ವೇ ನಂ.29 ಎಂದು ಬರೆದಿದ್ದು, ಅದನ್ನು 1974ರ ಏ.10 ರಂದು ಸರ್ವೇ ನಂ.26 ಎಂದು ತಿದ್ದುಪಡಿ ಮಾಡಿದ್ದಾರೆ. ಆದರೆ, ಹಿಂದಿನ ಎಲ್ಲಾ ದಾಖಲಾತಿಗಳಲ್ಲೂ ಸರ್ವೇ ನಂ.24/1 ಮತ್ತು 24/2 ಎಂದು ನಮೂದಿಸುವ ಬದಲಾಗಿ ಸರ್ವೇ ನಂ26 ಎಂದೇ ನಮೂದಿಸಲಾಗಿದೆ. ಆದರೆ, ಚಕ್ಕುಬಂಧಿ ಸರಿಯಾಗಿದೆ.

ಈ ಜಮೀನನ್ನು ನಿವೇಶನಕ್ಕಾಗಿ ಮುಡಾ ವಶಪಡಿಸಿಕೊಂಡಿದ್ದು, ಜಮೀನು ಮಾಲೀಕರಾದ ಕೆಂಪಮ್ಮ ಅಥವಾ ಅವರ ಪುತ್ರ ಮಹದೇವಸ್ವಾಮಿ ಅವರಿಗೆ ಬೆಲೆ ಪರಿಹಾರದ ನೋಟಿಸನ್ನು ಕೂಡ ನೀಡದೆ 2005ರಲ್ಲಿ ಹಣವನ್ನು ನ್ಯಾಯಾಲಯದಲ್ಲಿ ಠೇವಣಿ ಇಟ್ಟಿದ್ದರು. ಈ ಮಧ್ಯೆ ಭೂಮಿಯ ಮರು ನಿರ್ವಹಣೆ ಪರಿಹಾರ ಕೋರಿ ಮುಡಾ ವಿಶೇಷ ಭೂಸ್ವಾಧೀನಾಧಿಕಾರಿ ಅರ್ಜಿ ಸಲ್ಲಿಸಿದ್ದು, ಈ ಅರ್ಜಿಗೆ ಮಹದೇವಸ್ವಾಮಿ ತಕರಾರು ಅರ್ಜಿಯನ್ನು ಸಲ್ಲಿಸಿದ್ದರು. ಆದರೆ, ಇದಾವುದನ್ನು ಗಣನೆಗೆ ತೆಗೆದುಕೊಳ್ಳದೆ ಮುಡಾದ ಹಿಂದಿನ ವಿಶೇಷ ಭೂಸ್ವಾಧೀನಾಧಿಕಾರಿ ಹರ್ಷವರ್ಧನ್, ಇತರ ಆರೋಪಿಗಳು ಜಮೀನಿನ ಮಾಲೀಕರಲ್ಲದಿದ್ದರೂ ಅವರ ಜೊತೆ ಶಾಮೀಲಾಗಿ 98.33,862 ರೂ.ಗಳನ್ನು ಮುಡಾದಿಂದ ಸಂದಾಯ ಮಾಡಿದ್ದಾರೆ. ವಕೀಲ ರಾಜೇಶ್ ಅವರು ಎಲ್ಲಾ ಮಾಹಿತಿ ತಿಳಿದಿದ್ದರು ನ್ಯಾಯಾಲಯಕ್ಕೆ ತಪ್ಪು ಮಾಹಿತಿ ನೀಡಿದ್ದಾರೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ಮೈಸೂರು ಮಹಾ ನಗರಪಾಲಿಕೆ ವಲಯ ಕಚೇರಿ 6ಕ್ಕೆ ಅನಿರೀಕ್ಷಿತ ಭೇಟಿ

ಅರ್ಜಿ ವಿಲೇವಾರಿ ವಿಳಂಬ; ಅಧಿಕಾರಿ ವರ್ಗ ತರಾಟೆಗೆ ತೆಗೆದುಕೊಂಡ ಮೇಯರ್



ಮೈಸೂರು,ಅ.20(ಎಂಟಿವೈ)– ಮೈಸೂರು ಮಹಾನಗರ ಪಾಲಿಕೆಯ ವಲಯ ಕಚೇರಿಗಳಿಗೆ ಅನಿರೀಕ್ಷಿತ ಭೇಟಿ ನೀಡುತ್ತಿರುವ ಮೇಯರ್ ಶಿವಕುಮಾರ್, ಆ ಮೂಲಕ ಸಾರ್ವಜನಿಕರ ಕೆಲಸ–ಕಾರ್ಯಗಳು ತ್ವರಿತಗತಿಯಲ್ಲಿ ಆಗಲು ಅಧಿಕಾರಿ ವರ್ಗಕ್ಕೆ ಚಾಟಿ ಬೀಸುತ್ತಿದ್ದಾರೆ.

ಅಂತೆಯೇ ಬುಧವಾರ ಪಾಲಿಕೆಯ ವಲಯ ಕಚೇರಿ–6ಕ್ಕೆ ದಿಢೀರ್ ಭೇಟಿ ನೀಡಿದ್ದ ಮೇಯರ್, ಸಾರ್ವಜನಿಕರ ಕುಂದು–ಕೊರತೆ ಆಲಿಸಿದರಲ್ಲದೆ, ಅಧಿಕಾರಿ ವರ್ಗದ ಕಾರ್ಯವೈಖರಿ ಪರಿಶೀಲಿಸಿದರು. ಈ ವೇಳೆ ಖಾತೆಗಾಗಿ ಸಲ್ಲಿಸಿದ್ದ ಅರ್ಜಿಗಳು ವಿಲೇವಾರಿ ಆಗದಿರುವುದು ಹಾಗೂ ತೆರಿಗೆ ನಿಗದಿಪಡಿಸಲು ವಿಳಂಬ ಮಾಡಿರುವ ಅಂಶಗಳನ್ನು ಗಮನಿಸಿದ ಮೇಯರ್, ಅಧಿಕಾರಿ ಹಾಗೂ ಸಿಬ್ಬಂದಿ ವರ್ಗವನ್ನು ತರಾಟೆ ತೆಗೆದುಕೊಂಡರು.

ವಿವಿಧ ಕೆಲಸ–ಕಾರ್ಯ ನಿಮಿತ್ತ ಸದರಿ ಕಚೇರಿಗೆ ಆಗಮಿಸಿದ್ದ ಸಾರ್ವಜನಿಕರು, ಇದೇ ಸಂದರ್ಭದಲ್ಲಿ ಮೇಯರ್ ಅವರಲ್ಲಿ ತಮ್ಮ ಅಹವಾಲು ಹೇಳಿಕೊಂಡರು. ಖಾತೆ ಬದಲಾವಣೆ, ಖಾತೆ ಮಾಡುವುದು ಸೇರಿದಂತೆ ವಿವಿಧ ಅರ್ಜಿಗಳನ್ನು ವಿಲೇವಾರಿ ಮಾಡದೇ ಸಿಬ್ಬಂದಿ ತಮ್ಮನ್ನು ಸತಾಯಿಸುತ್ತಿದ್ದಾರೆ ಎಂದು ದೂರಿದರು.

ಈ ವೇಳೆ ಸಿಬ್ಬಂದಿ ಟೇಬಲ್ ಮೇಲಿದ್ದ ಕಡತ ಪರಿಶೀಲಿಸಿದ ಮೇಯರ್, ಸಾಕಷ್ಟು ಅರ್ಜಿಗಳನ್ನು ವಿಲೇವಾರಿ ಮಾಡದೇ ಉಳಿಸಿಕೊಂಡಿದ್ದನ್ನು ಕಂಡು ರಾಜಸ್ವ ನಿರೀಕ್ಷಕರನ್ನು ತರಾಟೆಗೆ ತೆಗೆದುಕೊಂಡರು. ಅಲ್ಲದೆ, ಮೂರು ತಿಂಗಳಾದರೂ ಖಾತೆ ಬದಲಿಸಿಕೊಡುವ ಪ್ರಕ್ರಿಯೆ ಪೂರ್ಣಗೊಳಿಸದೇ ಸತಾಯಿಸುತ್ತಿದ್ದಾರೆ ಎಂದು ನಾಗರಿಕರೊಬ್ಬರು ದೂರಿದಾಗ, ಸಮರ್ಪಕ ದಾಖಲೆ ಒದಗಿಸದ ಕಾರಣ ಖಾತೆ ಮಾಡಿಕೊಡಲು ಸಾಧ್ಯವಾಗಿಲ್ಲ ಎಂದು ಸಬೂಬು ಹೇಳಲು ಮುಂದಾದ ರಾಜಸ್ವ ನಿರೀಕ್ಷಕರ ವಿರುದ್ಧ ಮೇಯರ್ ಕಿಡಿಕಾರಿದರು. ಸಮರ್ಪಕ ದಾಖಲೆಗಳನ್ನು ಸಲ್ಲಿಸಿಲ್ಲವೆಂದು ಅರ್ಜಿಗಳನ್ನು ವಿಲೇವಾರಿ ಮಾಡದೇ ಇರುವುದು ಸರಿಯಲ್ಲ. ಅಂತಹ ಅರ್ಜಿಗಳಿಗೆ ಹಿಂಬರಹ ನೀಡಬೇಕು ಎಂದು ಮೇಯರ್ ತಾಕೀತು ಮಾಡಿದರಲ್ಲದೆ, ಖಾತೆಗಾಗಿ ಸಲ್ಲಿಕೆಯಾಗಿರುವ ಅರ್ಜಿಗಳನ್ನು ತಿಂಗಳಲ್ಲಿ ಇತ್ಯರ್ಥಪಡಿಸಬೇಕು. ಇಲ್ಲದಿದ್ದರೆ ಅಧಿಕಾರಿಗಳನ್ನೇ ಹೊಣೆ ಮಾಡಿ ಶಿಸ್ತು ಕ್ರಮ ಜರುಗಿಸಬೇಕಾಗುತ್ತದೆ ಎಂದು ಮೇಯರ್ ಎಚ್ಚರಿಕೆ ನೀಡಿದರು.

ಪಾಲಿಕೆ ನಿವೃತ್ತ ಅಧಿಕಾರಿಗೂ ತಪ್ಪದ ತೊಂದರೆ: ಪಾಲಿಕೆ ವಲಯ ಕಚೇರಿ–9ರಲ್ಲಿ ಸಹಾಯಕ ಆಯುಕ್ತರಾಗಿ ಕಾರ್ಯನಿರ್ವಹಿಸಿ ನಿವೃತ್ತರಾಗಿರುವ ಪುಟ್ಟಶೇಷಗಿರಿ ಎಂಬುವರೂ ವಲಯ ಕಚೇರಿ–6ರಲ್ಲಿ ತಮ್ಮ ಕೆಲಸ ಆಗದ ಬಗ್ಗೆ ಮೇಯರ್ ಅವರಲ್ಲಿ ದೂರಿದರು. ತಮ್ಮ ಮನೆಗೆ ಕಂದಾಯ ನಿಗದಿಪಡಿಸಲು ಅರ್ಜಿ ಸಲ್ಲಿಸಿ ಒಂದೂವರೆ ತಿಂಗಳಾದರೂ ಕ್ರಮಕ್ಕೆಗೊಂಡಿಲ್ಲ ಎಂದು ಅವರು ಮೇಯರ್ ಅವರಲ್ಲಿ ಅಹವಾಲು ಹೇಳಿಕೊಂಡರು. ಈ ವೇಳೆ ಅಧಿಕಾರಿ ವರ್ಗದ ವಿರುದ್ಧ ಹರಿಹಾಯ್ದ ಮೇಯರ್, ಕೂಡಲೇ ಸ್ಥಳ ಪರಿಶೀಲನೆ ನಡೆಸಿ ಕಂದಾಯ ನಿಗದಿಪಡಿಸಬೇಕು. ಎರಡು ದಿನಗಳಲ್ಲಿ ಈ ಪ್ರಕ್ರಿಯೆ ಪೂರ್ಣಗೊಳಿಸಬೇಕು ಎಂದು ಸೂಚನೆ ನೀಡಿದರು. ಅಲ್ಲದೆ, ಎರಡು ದಿನಗಳಲ್ಲಿ ಇತ್ಯರ್ಥ ಆಗದಿದ್ದರೆ ನೇರವಾಗಿ ತಮ್ಮನ್ನು ಭೇಟಿ ಮಾಡುವಂತೆ ಪುಟ್ಟಶೇಷಗಿರಿ ಅವರಿಗೆ ಹೇಳಿದರು.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಸಂಖ್ಯೆ.ಮೈ.ನ.ಪ್ರಾ/ವಕ–4/2022–23
ದಿನಾಂಕ: 22.09.2022

"ಪತ್ರಿಕಾ ಪ್ರಕಟಣೆ"

ಸಾರ್ವಜನಿಕರ ಗಮನಕ್ಕೆ

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ಮೈಸೂರು ನಗರ ವಿಶ್ವಸ್ಥ ಮಂಡಳಿ ವತಿಯಿಂದ ಶ್ರೀಮತಿ ಬಿ.ಪಿ.ಚಂದ್ರಬಾಯಿ ರವರಿಗೆ ಗಂಗೋತ್ರಿ 1ನೇ ಹಂತ ಬಡಾವಣೆಯ ನಿವೇಶನ ಸಂಖ್ಯೆ : 20 ಅಳತೆ 40*60 ಅಡಿಗಳು ನಿವೇಶನ ದಿ: 13.05.1977 ರಲ್ಲಿ ಮಂಜೂರಾಗಿರುತ್ತದೆ. ಇವರು ದಿ: 25.05.1983 ರಂದು ಸ್ವಾಧೀನ ಪತ್ರವನ್ನು ಪಡೆದು ಕೊಂಡಿರುತ್ತಾರೆ. ಶ್ರೀಮತಿ ಬಿ.ಪಿ.ಚಂದ್ರಬಾಯಿ ರವರು ದಿ: 02.02.2008 ರಂದು ಮರಣ ಹೊಂದಿರುತ್ತಾರೆ. ಇವರ ಪತಿ ಪ್ರಭಾಕರ್ ದತ್ತಾತ್ರೆಯ ನಾಗವಂಶಿ ರವರು ದಿ: 13.05.1978 ರಂದು ನಿಧನ ಹೊಂದಿರುತ್ತಾರೆ.

ಲೇಟ್ ಬಿ.ಪಿ.ಚಂದ್ರಬಾಯಿರವರಿಗೆ (1) ಶ್ರೀ ಪ್ರಶಾಂತ್ ಪಿ. ನಾಗವಂಶಿ (2) ಶ್ರೀ. ಪ್ರದೀಪ್ ಪಿ. ನಾಗವಂಶಿ (3) ಶ್ರೀ.ಹರೀಶ್ ಪಿ. ನಾಗವಂಶಿ ಎಂಬ ಮೂರು ಜನ ಮಕ್ಕಳಿದ್ದು, ದಿ: 28.04.2006 ರಲ್ಲಿ ನೋಂದಾಯಿತವಲ್ಲದ ವಿಲ್ ಯಾ ಮರಣ ಶಾಸನ ಪತ್ರ ಬರೆದಿದ್ದು, ಅದರನ್ವಯ ಶ್ರೀ.ಪ್ರದೀಪ್ ಪಿ. ನಾಗವಂಶಿ ರವರಿಗೆ ಸದರಿ ನಿವೇಶನದ ಮಾಲೀಕತ್ವ ಬಂದಿರುತ್ತದೆ. ಇವರು ಮೈಸೂರು ಮಹಾನಗರ ಪಾಲಿಕೆಯಲ್ಲಿ ದಿ: 22.10.2008 ರಂದು ಖಾತಾ ನೋಂದಾಯಿಸಿಕೊಂಡು ಉತ್ತರ ಪತ್ರ ಪಡೆದುಕೊಂಡಿರುತ್ತಾರೆ. ಇವರ ಹೆಸರಿನಲ್ಲಿ ವ್ಯತ್ಯಾಸವಿದ್ದು, ಘನ ನಾಲ್ಕನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮೈಸೂರು ಇಲ್ಲಿ ಅಸಲು ದಾವಾ ಸಂಖ್ಯೆ 496/2020 ಪ್ರಕರಣ ದಾಖಲಿಸಿ, ದಿ: 23.12.2021 ರ ಆದೇಶದಲ್ಲಿ ಶ್ರೀ.ಪ್ರದೀಪ್ ಪ್ರಭಾಕರ್ ನಾಗವಂಶಿ, ಚಿ.ಪ್ರದೀಪ್ ಪಿ.ನಾಗವಂಶಿ, ಚಿ.ಪ್ರದೀಪ್ ಈ ಎಲ್ಲಾ ಹೆಸರುಗಳು ಒಂದೇ ಎಂದು ಆದೇಶವಾಗಿರುತ್ತದೆ.

ಶ್ರೀ.ಪ್ರದೀಪ್ ಪಿ.ನಾಗವಂಶಿ ಇವರ ಹೆಸರಿಗೆ ಸದರಿ ನಿವೇಶನ ಪೌತಿ ವರ್ಗಾವಣೆ ಮಾಡಿ ಹಕ್ಕು ಪತ್ರ ನೀಡಬೇಕಾಗಿದ್ದು, ಯಾರಿಂದಾದರು ತಕರಾರು ಏನಾದರೂ ಇದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 15 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ತಕರಾರು ಸಲ್ಲಿಸುವುದು. ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಿಯಮಾನುಸಾರ ಕ್ರಮ ವಹಿಸಲಾಗುವುದು.

ಸಹಿ/– ವಿಶೇಷ ತಹಸೀಲ್ದಾರ್
ವಲಯ ಕಛೇರಿ –4
ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ
ಮೈಸೂರು

ರಾಜೇಶ್ವರಿಗೆ ಪಿಹೆಚ್.ಡಿ ಪದವಿ



ಮೈಸೂರು, ಅ. 20– ಡಿ. ರಾಜೇಶ್ವರಿ ಅವರು ಕಂಪ್ಯೂಟರ್ ಮತ್ತು ಮಾಹಿತಿ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಇಂದಿನಿಂದ ಮೈಸೂರಲ್ಲಿ ಪಟಾಕಿ ಮಾರಾಟ

- ಸಂಬಂಧಿಸಿದ ಇಲಾಖೆ ಅನುಮತಿ: ಮಹಿಳೆಯರು, ಮಕ್ಕಳಿಗೂ ಬಂದಿದೆ ವಿಶೇಷ ಪಟಾಕಿ
- ಮೈಸೂರಿನಾದ್ಯಂತ 500ಕ್ಕೂ ಅಧಿಕ ಮಳಿಗೆಗಳಲ್ಲಿ ಮಾರಾಟ ವ್ಯವಸ್ಥೆ
- ಕೈ ಸುಡಲಿದೆ ಬೆಲೆ





ಮೈಸೂರು, ಅ.20(ಜಿಎ)– ದೀಪಾವಳಿ ಹಬ್ಬದ ಪ್ರಯುಕ್ತ ಮೈಸೂರಿನಲ್ಲಿ ಭರ್ಜರಿ ಪಟಾಕಿ ಮಾರಾಟಕ್ಕೆ ತಯಾರಿ ಮಾಡಿಕೊಳ್ಳುತ್ತಿರುವ ಪಟಾಕಿ ವ್ಯಾಪಾರಿಗಳು ನಾಳೆ(ಅ.21)ಯಿಂದ ಅ.26ರವರೆಗೂ ಪಟಾಕಿ ಮಾರಾಟ ಆರಂಭಿಸಲಿದ್ದಾರೆ.

ನಗರದಲ್ಲಿ 500ಕ್ಕೂ ಹೆಚ್ಚು ಮಳಿಗೆಗಳಲ್ಲಿ ಪಟಾಕಿ ಮಾರಾಟ ಮಾಡಲು ಸಿದ್ಧತೆಗಳನ್ನು ಮಾಡಿಕೊಂಡಿದ್ದು, ಪ್ರಮುಖವಾಗಿ ರೈಲ್ವೇ ನಿಲ್ದಾಣದ ಮುಂಭಾಗವಿರುವ ಜೆ.ಕೆ.ಮೈದಾನದಲ್ಲಿ 11 ಅಂಗಡಿ ತೆರೆಯಲಾಗಿದೆ. ಇಂದಿನಿಂದ 5 ದಿನಗಳ ಕಾಲ ಮಾರಾಟ ನಡೆಯಲಿದೆ.

ದೀಪಗಳ ಹಬ್ಬ ದೀಪಾವಳಿಯಲ್ಲಿ ದೀಪಕ್ಕಿಂತ ಕಾರ್ತಿಕ ಮಾಸ ಮುಗಿಯುವವರೆಗೂ ಪಟಾಕಿಗಳ ಸದ್ದು ಎಲ್ಲೆಡೆ ಕೇಳಿಬರುತ್ತದೆ. ಇದಕ್ಕಾಗಿ ಮಾರಾಟಗಾರರು ಮತ್ತು ಖರೀದಿದಾರರು ಬಹಳ ಉತ್ಸುಕರಾಗಿರುತ್ತಾರೆ. ಮಾರುಕಟ್ಟೆಗೆ ಹೊಸ ಪಟಾಕಿ ಪರಿಚಯಿಸುವ ಉದ್ದೇಶದಿಂದ ಹತ್ತು ದಿನಕ್ಕೆ ಮುಂಚಿತವಾಗಿ ತಮಿಳುನಾಡಿನ ಶಿವಕಾಶಿಯಿಂದ ಪಟಾಕಿಗಳನ್ನು ತರುತ್ತಾರೆ.

ಪಟಾಕಿ ಮಾರಾಟಕ್ಕೆ ಪರವಾನಿಗೆ ಪಡೆದವರು 5 ದಿನ ಮಾರಾಟ ಮಾಡಲಿದ್ದು, ಪ್ರತಿ ಬಾರಿಯಂತೆ ನಗರದ ಜೆ.ಕೆ.ಮೈದಾನದಲ್ಲಿ 11 ಮಳಿಗೆಗಳು ತೆರೆಯಲು ಅನುಮತಿ ನೀಡಿದ್ದು, ಮಾರಾಟಗಾರರು ಈಗಾಗಲೇ ಮಳಿಗೆ ನಿರ್ಮಾಣ ಮಾಡಿಕೊಳ್ಳುತ್ತಿದ್ದಾರೆ. ಮಳೆ ಹಿನ್ನೆಲೆಯಲ್ಲಿ ಪಟಾಕಿಗಳು ನೆನೆಯದಂತೆ ಸೂಕ್ತ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಈ ಸ್ಥಳ ಹೊರತು ಪಡಿಸಿ ರಾಮಕೃಷ್ಣ ನಗರದ ರಾಮಕೃಷ್ಣ ಪರಮಹಂಸ ವೃತ್ತ, ವಿವೇಕಾನಂದ ನಗರದ ವಿವೇಕಾನಂದ ವೃತ್ತ ಸೇರಿದಂತೆ 500ಕ್ಕೂ ಹೆಚ್ಚಿನ ಸ್ಥಳದಲ್ಲಿ ಪಟಾಕಿ ಮಾರಾಟ ಮಾಡಲಿದ್ದಾರೆ.

ಪೊಲೀಸ್ ಇಲಾಖೆ, ಮೈಸೂರು ಮಹಾನಗರ ಪಾಲಿಕೆ ಮತ್ತು ಅಗ್ನಿಶಾಮಕ ದಳದಿಂದ ಪಟಾಕಿ ಮಾರಾಟ ಮಾಡಲು ಪರವಾನಿಗೆ ಪಡೆಯಲಾಗಿದೆ. ಹಾಗೇ ಸರ್ಕಾರ ನಿಷೇಧಿಸಿರುವ ಪಟಾಕಿಗಳನ್ನು ಮಾರಾಟ ಮಾಡುತ್ತಿಲ್ಲ ಎಂದು ಮೈಸೂರು ಪಟಾಕಿ ಮಾರಾಟ ಸಂಘದ ಅಧ್ಯಕ್ಷ ಮರವೇಗೌಡ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಕಳೆದ ಬಾರಿಗಿಂತ ಈ ಬಾರಿ ಪಟಾಕಿಗಳ ದರ ಮೂಲ ಸಂಸ್ಥೆಗಳಲ್ಲಿಯೇ ಶೇ.40ರಷ್ಟು ಹೆಚ್ಚಳವಾಗಿದ್ದು, ನಮ್ಮ ಬಳಿ 300 ರೂ. ನಿಂದ 1000 ರೂ.ಗೂ ಹೆಚ್ಚಿನ ಪಟಾಕಿಗಳು ಇವೆ. ಸರ್ಕಾರ ಹಸಿರು ಪಟಾಕಿ ಬಳಸಬೇಕು ಎಂದು ಆದೇಶ ನೀಡಿರುವುದರಿಂದ ಆ ಮಾದರಿಯ ಪಟಾಕಿಗಳೇ ಎಲ್ಲಾ ಮಳಿಗೆಯಲ್ಲಿದ್ದು, ಸರ್ಕಾರದ ಯಾವುದೇ ನಿಯಮಗಳನ್ನು ಮೀರುತ್ತಿಲ್ಲ. ನಮಗೂ ಎಲ್ಲಾ ಇಲಾಖೆಯಿಂದ ಸೂಕ್ತ ಸೌಲಭ್ಯ ನೀಡಿದ್ದಾರೆ ಎಂದರು.

ಪಟಾಕಿ ವ್ಯಾಪಾರದಿಂದ ನಮಗೆ ಯಾವಾಗಲೂ ನಷ್ಟವಾಗಿಲ್ಲ. ಈ ಬಾರಿ ಪ್ರತಿ ಮಾರಾಟಗಾರರು 5 ಲಕ್ಷ ರೂ. ಗಿಂತ ಹೆಚ್ಚಿನ ಬಂಡವಾಳವನ್ನು ಹಾಕಿದ್ದು, ಪಟಾಕಿಗೆ ಪ್ರತಿವರ್ಷವು ಬೇಡಿಕೆ ಇದ್ದೇ ಇರುತ್ತದೆ. ಜನರ ಸಹಕಾರ ಬಹಳ ಮುಖ್ಯವಾಗಿರುತ್ತದೆ ಅಷ್ಟೇ. ಮಹಿಳೆಯರು ಮತ್ತು ಮಕ್ಕಳಿಗಾಗಿಯೇ ಈ ಬಾರಿ ವಿಶೇಷ ಪಟಾಕಿಗಳು ಬಂದಿದೆ ಎಂದರು. ಒಂದು ಪಟಾಕಿ ಬಾಕ್ಸ್‌ನಲ್ಲಿ 60 ಐಟಂಗಳು ಇರಲಿದ್ದು, ಅದರಲ್ಲಿ ಪ್ರಮುಖವಾಗಿ 8ರಿಂದ 10 ಪಟಾಕಿಗಳು ಮಹಿಳೆಯರಿಗಾಗಿಯೇ ಮಾಡಲಾಗಿದೆ. ಮಿಕ್ಕಿದ 50 ಪಟಾಕಿಗಳು ಮಕ್ಕಳಿಗಾಗಿ ವಿನ್ಯಾಸ ಮಾಡಲಾಗಿದೆ. ಈ ಬಾರಿ ನವಿಲು ಪಟಾಕಿ ಬಹಳ ವಿಶಿಷ್ಟವಾಗಿದ್ದು, ಇದನ್ನು ಹಚ್ಚಿದರೆ, ನವಿಲಿನ ಗರಿ ಬಿಚ್ಚಿ ನರ್ತಿಸುವಂತೆ ಕಾಣಲಿದೆ. ಇದನ್ನು ಹೊರತುಪಡಿಸಿ ಸ್ಟ್ಯಾಂಡರ್ಡ್ ಪಟಾಕಿ ಸಂಸ್ಥೆಯವರು ವಿಭಿನ್ನ ರೀತಿಯ ಪಟಾಕಿಗಳನ್ನು ಮಕ್ಕಳು ಮತ್ತು ಮಹಿಳೆಯರಿಗೆ ಪರಿಚಯಿಸಿದ್ದಾರೆ ಎಂದು ತಿಳಿಸಿದರು.

PUBLIC NOTICE

Notice is given to the general public at large that my clients i.e., Sri. Purushothama & Sri. Keshavamurthy K.B. (PH: 9845205630) are negotiating and intending to purchase the notice schedule property from its owners i.e., Sri. Rajesh, S/o Shivegowda, R/at #571, 1st Main Road, Belavadi, Mysuru-570018, Sri. Ananda, S/o Siddegowda, R/at #135, 1st Main, 10th Cross, Ilwala Hobli, Belavadi, Mysuru-570018 and Sri. Byrappa, S/o Siddegowda R/at #491, Basavanagudi Street, Belavadi, Mysuru-570018. Any individuals, banks, financial institutions, governmental agencies, statutory bodies, etc. having any objections for my clients entering into any transaction including purchase of the notice schedule property is hereby required to communicate their objections in writing to my office with documentary evidence within 07 days from the date of this publication. In the absence of any authenticated objections/claims, my clients will proceed to complete the transaction of sale and no claim in this regard will be entertained thereafter.

SCHEDULE OF THE PROPERTY:

Item No.: 1
All that piece and parcel of the land bearing in Survey No. 121/7 measuring 0.10.08.00 Guntas and in Survey No. 122/8 measuring 0.32.00 Guntas standing in the name of Sri.Rajesh, S/o Shivegowda.

Item No.: 2
All that piece and parcel of the land bearing in Survey No. 121/2 measuring 0.10.08.00 Guntas and in Survey No. 122/1 measuring 0.32.00 Guntas standing jointly in the name of Sri. Ananda, S/o Siddegowda, and Sri. Byrappa, S/o Siddegowda.

Place : Mysore
Date : 21/10/2022

Mallikarjuna Swamy B.Com.,L.L.B. (Advocate)
28, VaniVilasa Road, Agrahara Circle, K.R.Mohalla, Mysore | Mob: 9742792146, 9844159030

ಮೈಸೂರು ಮಿತ್ರ

ಮೂರನೇ ಪುಟದಿಂದ

2023ರಲ್ಲಿ ಜೆಡಿಎಸ್‌ಗೆ ಅಧಿಕಾರ

ಸಂಕಲ್ಪ ಮಾಡುತ್ತೇನೆ. ಎಲ್ಲರೂ ಐಕ್ಯತೆಯಿಂದ ಹೋರಾಟ ಮಾಡೋಣ. ಪಕ್ಷವನ್ನು ಅಧಿಕಾರಕ್ಕೆ ತರಲು ಶ್ರಮಿಸೋಣ ಎಂದು ಕರೆ ನೀಡಿದರು. ಜೆಡಿಎಸ್ ಕಥೆ ಮುಗಿದೇ ಹೋಯ್ತು ಎನ್ನುವವರೂ ಇದ್ದಾರೆ. ಅಂಥವರಿಗೆ ಯಾವ ಸಂದರ್ಭದಲ್ಲಿ ಹೇಗೆ ಉತ್ತರ ಕೊಡಬೇಕು ಎಂಬ ಶಕ್ತಿ ನನಗಿದೆ. ಮೀಸಲಾತಿ ಬಗ್ಗೆ ಮಾತನಾಡುವವರು ನನ್ನ ಮುಂದೆ ಬರಲಿ. ಅವರು ಕಾಂಗ್ರೆಸ್ ಇರಲಿ, ಬಿಜೆಪಿ ಇರಲಿ ಯಾರೇ ಇರಲಿ ಸಾರ್ವಜನಿಕವಾಗಿ ಮಾತನಾಡೋಣ, ವೇದಿಕೆ ರಚನೆ ಮಾಡಿ ದರೆ ನಾನು ಹೋಗಲು ಸಿದ್ದನಿದ್ದೇನೆ. ಸತ್ಯ ಹೇಳಲು ಯಾವ ಅಳುಕು ಇಲ್ಲ ಎಂದು ಸವಾಲು ಹಾಕಿದರು.

ನಾನು ಹೆಚ್.ಡಿ.ಕುಮಾರಸ್ವಾಮಿಯನ್ನು ಹೊಗಳಲೋ, ತೆಗಳಲೋ ಇಲ್ಲಿಗೆ ಬಂದಿಲ್ಲ. ಆ ಸಂದರ್ಭವೂ ಇದಲ್ಲ. ಮಾತುಕೊಟ್ಟಿದ್ದೇನೆ. ಮುಂಬರುವ ಚುನಾವಣೆಯಲ್ಲಿ ಗೆಲ್ಲಬೇಕು ಎಂಬುದೇ ನಮ್ಮ ಗುರಿ. ಅದ ರತ್ತ ಎಲ್ಲರೂ ಗಮನಹರಿಸೋಣ ಎಂದರು. ರಾಜ್ಯದಲ್ಲಿ ಮೊದಲ ಬಾರಿ ಮೀಸಲಾತಿ ವ್ಯವಸ್ಥೆ ಜಾರಿಗೊಳಿಸಿದ್ದು ನಾನು. ಮುಸ್ಲಿಮರಿಗೂ ಮೀಸಲಾತಿ ನೀಡಿದ್ದು ನಾನು. ಮೀಸಲಾತಿ ಬಗ್ಗೆ ಮಾತ ನಾಡುವವರು ನಮ್ಮ ಮುಂದೆ ನಿಂತು ಮಾತನಾಡಲಿ ನಾನು ಉತ್ತರಿದಲು ಸಿದ್ದನಿದ್ದೇನೆ ಎಂದು ದೇವೇಗೌಡರು ಕಾಂಗ್ರೆಸ್, ಬಿಜೆಪಿಗೆ ತಿರುಗೇಟು ನೀಡಿದರು.

ಹೆಚ್.ಡಿ. ಕುಮಾರಸ್ವಾಮಿ ರೂಪಿಸಿರುವ 'ಪಂಚರತ್ನ' ಕಾರ್ಯಕ್ರಮ ಉತ್ತಮ ಕಾರ್ಯಕ್ರಮ. ಗುರಿ ಮುಟ್ಟುವವರೆಗೂ ಹೋರಾಡೋಣ ಎಂದು ದೇವೇಗೌಡರು ಪಕ್ಷದ ಮುಖಂಡರಲ್ಲಿ ಕೈಮುಗಿದು ಮನವಿ ಮಾಡಿದರು. ಇದೇ ಸಂದರ್ಭದಲ್ಲಿ ಮಾತ ನಾಡಿದ ಮಾಜಿ ಸಿಎಂ ಹೆಚ್.ಡಿ.ಕುಮಾರ ಸ್ವಾಮಿ, ನ.1ರಂದು ಆರಂಭವಾಗಲಿರುವ ಪಕ್ಷದ 'ಪಂಚರತ್ನ ರಥಯಾತ್ರೆ'ಯನ್ನು ಸಂಪೂರ್ಣ ಯಶಸ್ವಿಗೊಳಿಸು ವಂತೆ ಪಕ್ಷದ ಕಾರ್ಯಕರ್ತರಲ್ಲಿ ಮನವಿ ಮಾಡಿದರು.

ಭೇಟಿಯಾದ ದೊಡ್ಡ ಗೌಡರು!

ಜಿ.ಡಿ.ಹರೀಶ್‌ಗೌಡರು ಆತ್ಮೀಯ ವಾಗಿ ಬರಮಾಡಿಕೊಂಡರು. ಈ ವೇಳೆ ಜಿಟಿಡಿ ಕುಟುಂಬ ದವರೊಂದಿಗೆ ಹೆಚ್.ಡಿ.ದೇವೇಗೌಡರು ಕೆಲಕಾಲ ಕುಶಲೋಪರಿ ನಡೆಸಿದರು.

ಈ ಸಂದರ್ಭದಲ್ಲಿ ಜಿ.ಟಿ.ದೇವೇಗೌಡರನ್ನು, ಅವರ ಪುತ್ರ ಹರೀಶ್‌ಗೌಡರನ್ನು ಅಕ್ಕ-ಪಕ್ಕದಲ್ಲೇ ಕೂರಿಸಿಕೊಂಡು ಮಾಧ್ಯಮಗಳ ಜತೆ ಮಾತನಾಡಿದ ದೇವೇಗೌಡರು, ನಾನು ಜಿ.ಟಿ.ದೇವೇಗೌಡರನ್ನು ಮರಿದೇವೇಗೌಡ ಎಂದು ಕರೆಯುತ್ತೇನೆ. ನಾನು ಎಲ್ಲವನ್ನೂ ಸೂಕ್ಷ್ಮವಾಗಿ ಗಮನಿಸಿದ್ದೇನೆ. ನಮ್ಮ ಪಕ್ಷ ತೊರೆದವರೊಂದಿಗೆ ನಮ್ಮವರು ನಾಲ್ಕು ಜನ ಇದ್ದರು. ಅವರಲ್ಲಿ ಕೆಲವರು ಬಿಜೆಪಿ, ಕಾಂಗ್ರೆಸ್‌ಗೆ ಹೋದರು. ಆದರೆ ಜಿ.ಟಿ.ದೇವೇಗೌಡರು ಮಾತ್ರ ನಮ್ಮೊಂದಿಗೇ ಇದ್ದಾರೆ. ಸಾ.ರಾ.ಮಹೇಶ್ ಬರುವ ಮೊದಲೇ ಜಿ.ಟಿ.ದೇವೇಗೌಡರು ನಮ್ಮ ಜತೆಯಲ್ಲಿ ಇದ್ದರು. ಅವರನ್ನು ಬೆಳೆಯಲು ಬಿಡಬಾರದು ಎಂದು ಎಂಪಿ ಚುನಾವಣೆಯಲ್ಲಿ ಸೋಲಿಸಿದರು. ಹಾಗೆ ಸೋಲಿಗೆ ಕಾರಣರಾದವರು ಈಗ ನಮ್ಮ ಜೊತೆಯಲ್ಲಿ ಇಲ್ಲ ಎಂದು ಪರೋಕ್ಷವಾಗಿ ಸಿದ್ದರಾಮಯ್ಯ ವಿರುದ್ಧ ಚಾಟಿ ಬೀಸಿದರು. ಜಿ.ಟಿ.ದೇವೇಗೌಡರನ್ನು ಬೆಳೆಯಲು ಬಿಟ್ಟರೆ ಅವರು ಜಿಲ್ಲೆಯಲ್ಲಿ ಪ್ರಭುತ್ವ ಸಾಧಿಸಿ ಬಿಡುತ್ತಾರೆ ಎಂದು ಭಾವಿಸಿ ಅವರ ಬೆಳವಣಿಗೆ ತಡೆಯಲು ಪ್ರಯತ್ನ ಮಾಡಿದರು. ಎಲ್ಲವನ್ನೂ ತಿಳಿದುಕೊಂಡೇ ಜಿ.ಟಿ.ದೇವೇಗೌಡರ ಮನೆಗೆ ಬಂದಿದ್ದೇನೆ. ಇವತ್ತು ನನಗೆ ಸಂತೋಷವಾಗಿದೆ. ನಾವೆಲ್ಲಾ ಒಗ್ಗಟ್ಟಾಗಿ ಇರಬೇಕು. ಅಂತಹ ಸಮಯ ಬಂದಿದೆ. ಹೀಗಾಗಿ ಎಲ್ಲರೂ ಒಗ್ಗಟ್ಟಾಗಿ ಸೇರಿದ್ದೇವೆ. ಇದು ತುಂಬಾ ಸಂತೋಷದ ವಿಷಯ ಎಂದರು.

ಪಾರ್ಲಿಮೆಂಟ್ ಹಾಗೂ ವಿಧಾನಸಭೆ ಚುನಾವಣೆಯಲ್ಲಿ ನಾವೆಲ್ಲಾ ಒಗ್ಗಟ್ಟಾಗಿ ಕೆಲಸ ಮಾಡಬೇಕು. ಎದುರಾಳಿಯನ್ನು ಎದುರಿಸುವ ಶಕ್ತಿ ನಮಗಿದೆ. ಆ ಶಕ್ತಿಯನ್ನು ಸಮರ್ಥವಾಗಿ ಬಳಸಿಕೊಳ್ಳಬೇಕು ಎಂದು ಅವರು ಮಾರ್ಮಿಕವಾಗಿ ಹೇಳಿದರು.

ಜಿಟಿಡಿ ಭಾವುಕ ನುಡಿ

ಅಧಿಕಾರಕ್ಕೆ ತರುತ್ತೇನೆ ಎಂದು ಮಾತನಾಡುತ್ತಾ... ಮಾತನಾಡುತ್ತಲೇ ಭಾವುಕರಾದರು. ದೊಡ್ಡವರು ನನ್ನನ್ನು ಪ್ರೀತಿಯ ಹಗ್ಗದಿಂದ ಕಟ್ಟಿಹಾಕಿದ್ದಾರೆ. ನಾನು ಜೆಡಿಎಸ್‌ನಲ್ಲೇ ಉಳಿಯುತ್ತೇನೆ. ಯಾವುದೇ ತ್ಯಾಗ ಮಾಡಲು ಸಿದ್ಧವಿದ್ದೇನೆ. ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿ ಮಾಡುತ್ತೇನೆ. ಅದಕ್ಕಾಗಿ ದುಡಿಯುತ್ತೇನೆ. ಈಗ ನಮ್ಮಲ್ಲಿ ಯಾವುದೇ ಮುನಿಸು ಇಲ್ಲ. ಒಂದೇ ಒಂದು ದಿನ ಪಕ್ಷಕ್ಕೆ ಕಳಂಕ ಅಥವಾ ಧಕ್ಕೆ ತರುವ ಕೆಲಸ ಮಾಡಿಲ್ಲ ಎಂದರು.

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನನ್ನನ್ನು ಕಾಂಗ್ರೆಸ್ ಸೇರುವಂತೆ ಕರೆದಿದ್ದರು. ಬಿಜೆಪಿಯವರೂ ಕರೆದಿದ್ದಾರೆ. ಆದರೆ ನಾನು ಜೆಡಿಎಸ್ ಬಿಟ್ಟು ಹೋಗಲ್ಲ ಎಂದು ಜಿಟಿಡಿ ಹೇಳಿದರು. ಈ ಸಂದರ್ಭ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ರಾಜ್ಯಾಧ್ಯಕ್ಷ ಸಿಎಂ ಇಬ್ರಾಹಿಂ, ಶಾಸಕರಾದ ಸಾ.ರಾ.ಮಹೇಶ್, ಸಿ.ಎಸ್. ಪುಟ್ಟರಾಜು ಸೇರಿದಂತೆ ಪಕ್ಷದ ಶಾಸಕರು, ಮುಖಂಡರು ಹಾಜರಿದ್ದರು.

ಜ್ಞಾನದ ಹಬ್ ಆಗಿ ಮೈಸೂರು ಪರಿವರ್ತನೆ

ಸಹಕಾರ ನೀಡಿದ್ದರಿಂದ ಈ ಭಾಗದಲ್ಲಿ ಬೃಹತ್ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸಾಧ್ಯವಾಯಿತು ಎಂದರು. ಐಟಿ-ಬಿಟಿ ಇಲಾಖೆ ಹೆಚ್ಚುವರಿ ಪ್ರಧಾನ ಕಾರ್ಯದರ್ಶಿ ಡಾ. ಇ.ವಿ.ರಮಣರೆಡ್ಡಿ ಮಾತನಾಡಿ, ಬಿಯಾಂಡ್ ಬೆಂಗಳೂರು ಯೋಜನೆಯಡಿ ಮೈಸೂರಿಗೆ ಹಲವು ಸಾಫ್ಟ್‌ವೇರ್ ಕಂಪನಿಗಳು, ಸೆಮಿಕಂಡಕ್ಟರ್ ಫ್ಯಾಬ್, ಮುಕ್ತ ವಿವಿಯಲ್ಲಿ ಟೆಕ್ ಪಾರ್ಕ್, ಸೆಂಟರ್ ಆಫ್ ಎಕ್ಸಲೆನ್ಸ್, ಕೆ.ಟೆಕ್‌ಗಳಂತಹ ಹಲವು ಉದ್ದಿಮೆಗಳು ಬಂದಿವೆ ಎಂದರು. ಡಿಸೆಂಬರ್ 3 ರಿಂದ 10ರವರೆಗೆ ಮೈಸೂರಲ್ಲಿ ಹಾಕಥಾನ್ ಮಾಡುವ ಚಿಂತನೆ ಇದೆ. ವಿಶ್ವ ಭೂಪಟದಲ್ಲಿ ಮೈಸೂರಿನ ಹೆಸರು ಚಿರಸ್ಥಾಯಿಯಾಗಿ ಮಾಡಲು ಸಿದ್ಧತೆ ನಡೆದಿದೆಯಲ್ಲದೆ, ರಾಜ್ಯ ರಾಜಧಾನಿಯಲ್ಲಿ ಬೆಂಗಳೂರು ಟೆಕ್ ಸಮ್ಮಿಟ್‌ಗೂ ಸಿದ್ಧತೆ ಮಾಡಲಾಗಿದೆ ಎಂದು ನುಡಿದರು. ಐಟಿ-ಬಿಟಿ ಇಲಾಖೆ ನಿರ್ದೇಶಕಿ ಮೀನಾ ನಾಗರಾಜ್, ಕೆಡಿಇಎಂ ಅಧ್ಯಕ್ಷ ಬಿ.ವಿ.ನಾಯ್ಡು, ಸಿಇಓ ಸಂಜೀವ್ ಗುಪ್ತ, ಕರ್ನಾಟಕ ಇನೋವೇಷನ್ ಅಂಡ್ ಟೆಕ್ನಾಲಜಿ ಸೊಸೈಟಿ ವ್ಯವಸ್ಥಾಪಕ ನಿರ್ದೇಶಕ ಎಸ್‌ಕೆ ಬೋ ರೋಸನ್ ಬರ್ಗ್, ಬ್ರಿಟಿಷ್ ಹೈ ಕಮಿಷ್ನರ್ ಆನ್ ಡ್ರಿವ್ ಫ್ಲೆಮ್ಮಿಂಗ್, ಎಂಇಐಟಿವೈ ಸೀನಿಯರ್ ಡೈರೆಕ್ಟರ್ ಡಾ. ಅಜಯ್ ಗರ್ಗ್, ಐಇಎಸ್‌ಎ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಡಾ. ಕೃಷ್ಣಮೂರ್ತಿ ಹಾಗೂ ಎಸಿಸಿಎಲ್ ಪಾಲುದಾರ ಪ್ರಶಾಂತ್, ಪ್ರಕಾಶ್ ಅವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಸುಗ್ರೀವಾಜ್ಞೆ ಮೂಲಕ ಜಾರಿ

ಕೈಗೊಳ್ಳಲಾಗಿದೆ. ಡಾ. ನಾಗಮೋಹನ್ ದಾಸ್ ವರದಿ ಅನ್ವಯ ಪರಿಶಿಷ್ಟ ಜಾತಿ ಮೀಸಲಾತಿ ಯನ್ನು ಶೇಕಡ 15 ರಿಂದ 17ಕ್ಕೆ, ಪರಿಶಿಷ್ಟ ಪಂಗಡದ ಮೀಸಲಾತಿಯನ್ನು ಶೇಕಡ 3ರಿಂದ 7ಕ್ಕೆ ಹೆಚ್ಚಿಸಲು ತೆಗೆದುಕೊಂಡ ತೀರ್ಮಾನವನ್ನು ಸರ್ಕಾರಿ ಆದೇಶ ಹೊರಡಿಸಲು ನಿರ್ಧರಿಸಲಾಯಿತು. ಆದರೆ ಇಂತಹ ಆದೇಶದಿಂದ ಮೀಸಲಾತಿ ಹೆಚ್ಚಳ ಜಾರಿಗೆ ಕಾನೂನು ತೊಡಕು ಬರುವ ಸಾಧ್ಯತೆ ಹಿನ್ನೆಲೆಯಲ್ಲಿ ಸುಗ್ರಿವಾಜ್ಞೆ ಮೂಲಕ ಜಾರಿಗೊಳಿಸಲು ನಿರ್ಧಾರ ಕೈಗೊಳ್ಳಲಾಗಿದೆ ಎಂದರು.

ಪರಿಶಿಷ್ಟ ಜಾತಿ ಮತ್ತು ಪಂಗಡದಲ್ಲಿ ಸೇರ್ಪಡೆಯಾಗಿರುವ ಜಾತಿಗಳು ಹೆಚ್ಚಾಗಿರುವುದರಿಂದ ಮೀಸಲಾತಿ ಹೆಚ್ಚಿಸಲು ಅವಕಾಶವಿದೆ. ಒಳ ಮೀಸಲಾತಿ ಬಗ್ಗೆಯು ಸರ್ಕಾರ ತೀರ್ಮಾನ ಕೈಗೊಳ್ಳುತ್ತದೆ. ನಾಗಮೋಹನ್‌ದಾಸ್, ಎ.ಜೆ. ಸದಾಶಿವ ಹಾಗೂ ಸುಭಾಷ್ ಅಡಿ ವರದಿಯಲ್ಲಿ ಮೀಸಲಾತಿ ಹೆಚ್ಚಳದ ಜೊತೆಗೆ ಒಳಮೀಸಲಾತಿ ಶಿಫಾರಸ್ಸುಗಳಿವೆ. ಇವನ್ನೆಲ್ಲ ಒಟ್ಟಾರೆಯಾಗಿ ಜಾರಿ ಮಾಡುವ ಸಂಬಂಧ ಅಧ್ಯಯನ ನಡೆಸಲು ಮುಖ್ಯಮಂತ್ರಿಯವರು ಸಚಿವ ಸಂಪುಟದ ಉಪ ಸಮಿತಿ ರಚನೆ ಮಾಡಿದ್ದಾರೆ. ಈ ಸಮಿತಿ ಎಲ್ಲ ವರದಿಗಳನ್ನು ಅಧ್ಯಯನ ಮಾಡಿ, ಸೂಕ್ತ ಶಿಫಾರಸ್ಸುಗಳನ್ನು ಸಂಪುಟದ ಮುಂದಿಡಲಿದ್ದಾರೆ ಎಂದರು.

ಯೋಜನೆ ನಿರ್ವಹಣೆ ಹೊಣೆ

ಎಂದರು. ಇದೇ ಕಾರಣಕ್ಕಾಗಿ ರಚಿಸಲಾದ ಕರಡು ನೀತಿಗೆ ಇಂದು ನಡೆದ ಸಚಿವ ಸಂಪುಟ ಒಪ್ಪಿಗೆ ನೀಡಿದೆ ಎಂದು ಸುದ್ದಿಗಾರರಿಗೆ ವಿವರಿಸಿದರು. ಕರ್ನಾಟಕ ನೀರಾವರಿ ನಿಗಮ ತನ್ನ ವ್ಯಾಪ್ತಿಯಲ್ಲಿ ಕೈಗೊಳ್ಳುವ ಕಾಮಗಾರಿಗಳಿಗೆ ಎಂಟುನೂರೈವತ್ತು ಕೋಟಿ ರೂಪಾಯಿಗಳ ಸಾಲ ಪಡೆಯಲು ಬಯಸಿದ್ದು, ಅದಕ್ಕೆ ಭದ್ರತೆ ನೀಡಲು ಸಂಪುಟ ಒಪ್ಪಿಗೆ ನೀಡಿದೆ. ಮೈಸೂರು ಜಿಲ್ಲೆ ಕೆ.ಆರ್.ನಗರ ತಾಲೂಕಿನ ಲಾಲಂದೇವನಹಳ್ಳಿ ಮತ್ತಿತರ ಮೂವತ್ತೇಳು ಜನವಸತಿ ಪ್ರದೇಶಗಳಿಗೆ ಜಲಜೀವನ್ ಮಿಷನ್ ಯೋಜನೆಯಡಿ ಕುಡಿಯುವ ನೀರು ಒದಗಿಸುವ ಯೋಜನೆಗೆ ಸಂಪುಟ ಅಂಗೀಕಾರ ನೀಡಿದ್ದು, ಇದಕ್ಕೆ ಮೂವತ್ತೈದು ಕೋಟಿ ರೂಪಾಯಿ ವೆಚ್ಚವಾಗಲಿದೆ ಎಂದರು. ರಾಯಚೂರು ವಿಶ್ವವಿದ್ಯಾಲಯಕ್ಕೆ ಹದಿನೈದು ಕೋಟಿ ರೂಪಾಯಿ ವೆಚ್ಚದಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸಂಪುಟ ಅಂಗೀಕಾರ ನೀಡಿದೆ. ರಾಜ್ಯದ ಹದಿನೆಂಟು ವೈದ್ಯಕೀಯ ಶಿಕ್ಷಣ ಸಂಸ್ಥೆಗಳಿಗೆ 33.92 ಕೋಟಿ ರೂಪಾಯಿ ವೆಚ್ಚದಲ್ಲಿ ಅನಸ್ತೇಷಿಯಾ ವರ್ಕ್ ಸ್ಟೇಷನ್ ಮತ್ತಿತರ ಉಪಕರಣಗಳನ್ನು ಒದಗಿಸಲು ಸಂಪುಟ ಒಪ್ಪಿಗೆ ನೀಡಿದೆ ಎಂದರು.

ಕರ್ನಾಟಕ ರತ್ನ ಪ್ರಶಸ್ತಿ ಪ್ರದಾನ


ಮುಖ್ಯ ಅತಿಥಿಗಳು, ನಟರು, ಸಚಿವರು, ಶಾಸಕರು, ಹಿರಿಯ ರಾಜಕಾರಣಿಗಳು ಭಾಗಿಯಾಗಲಿದ್ದಾರೆ. ನವೆಂಬರ್ 1ರ ನಂತರ ಬೆಂಗಳೂರಿನಲ್ಲಿ 10 ದಿನಗಳ ಅಂತರದಲ್ಲಿ ಮೂರು ಭಾಗಗಳಲ್ಲಿ ಅಪ್ಪು ಕಾರ್ಯಕ್ರಮ ಮಾಡಲು ತೀರ್ಮಾನ ಮಾಡಲಿದ್ದೇವೆ ಎಂದು ಸಿಎಂ ಬೊಮ್ಮಾಯಿ ಹೇಳಿದರು. ರಾಜ್‌ಕುಮಾರ್ ಕುಟುಂಬದ ಸದಸ್ಯರು ಸಹ ಇಂದಿನ ಸಭೆಯಲ್ಲಿ ಭಾಗಿಯಾಗಿದ್ದರು. ನವೆಂಬರ್ 1ರ ಸಂಜೆ 4 ಗಂಟೆಗೆ ವಿಧಾನಸೌಧದ ಮೆಟ್ಟಿಲುಗಳ ಮೇಲೆ ಕಾರ್ಯಕ್ರಮ ನಡೆಯಲಿದೆ ಎಂದರು.

ಎಐಸಿಸಿ ಅಧ್ಯಕ್ಷರಾಗಿ ಆಯ್ಕೆಯಾಗಿರುವ

ಮಲ್ಲಿಕಾರ್ಜುನ್ ಖರ್ಗೆ ಅವರಿಗೆ ಮೈಸೂರು ಕಾಂಗ್ರೆಸ್ ಅಭಿನಂದನಾ ನಿರ್ಣಯ

ರಾಜ್ಯದಲ್ಲಿ ಕಾಂಗ್ರೆಸ್ ಸಮರ್ಥ ರೀತಿ ಸಂಘಟನೆಗೆ ಕೆಪಿಸಿಸಿ ಕಾರ್ಯಾಧ್ಯಕ್ಷ ಧ್ರುವನಾರಾಯಣ ಕರೆ

ಮೈಸೂರು,ಅ.20(ಎಂಟಿವೈ)- ರಾಜ್ಯದಲ್ಲಿ ಲೀಡರ್ ಬೇಸ್ ರಾಜಕಾರಣವಿದ್ದು, ಅದನ್ನು ಕೇಡರ್ ಬೇಸ್ ಆಗಿ ಪರಿವರ್ತಿಸಬೇಕಾಗಿದೆ. ಎಐಸಿಸಿ ನೂತನ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಎಲ್ಲರೂ ಹೆಗಲಿಗೆ ಹೆಗಲುಕೊಟ್ಟು ಕೆಲಸ ಮಾಡಬೇಕು ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಅಭಿಪ್ರಾಯಪಟ್ಟಿದ್ದಾರೆ.



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಗುರುವಾರ ಎಐಸಿಸಿ ನೂತನ ಸಾರಥಿಯಾಗಿ ಆಯ್ಕೆಯಾದ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಮೈಸೂರು ನಗರ ಹಾಗೂ ಗ್ರಾಮಾಂತರ ಕಾಂಗ್ರೆಸ್ ಸಮಿತಿ ಜಂಟಿಯಾಗಿ ಆಯೋಜಿಸಿದ್ದ ಅಭಿನಂದನಾ ನಿರ್ಣಯ ಕೈಗೊಳ್ಳುವ ಸಭೆಯಲ್ಲಿ ಮಾತನಾಡಿದ ಅವರು, ಅಖಿಲ ಭಾರತ ಕಾಂಗ್ರೆಸ್ ಸಮಿತಿಗೆ ಅಧ್ಯಕ್ಷರಾದ ಕನ್ನಡಿಗರಲ್ಲಿ ಎರಡನೆಯವರೆಂಬ ಹೆಗ್ಗಳಿಕೆ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಸಲ್ಲುತ್ತದೆ. ರಾಜ್ಯದಲ್ಲಿ ಕಾಂಗ್ರೆಸ್ ಸಂಘಟನೆಗೆ ಖರ್ಗೆ ಅವರ ಕೊಡುಗೆ ಅಪಾರ. ರಾಜ್ಯದಲ್ಲಿ ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಕಾರ್ಯಕರ್ತರು ಒಗ್ಗಟ್ಟಾಗಿ ಪಕ್ಷದ ಗೆಲುವಿಗೆ ಶ್ರಮಿಸಬೇಕು. ವೈಮನಸ್ಸು ಬದಿಗೊತ್ತಿ ಕೆಲಸ ಮಾಡಬೇಕು. ಖರ್ಗೆ ಅವರ ಕೆಲಸಕ್ಕೆ ಪ್ರತಿಯೊಬ್ಬ ಕಾರ್ಯಕರ್ತರು ಹೆಗಲಿಗೆ ಹೆಗಲು ಕೊಟ್ಟು ಕೆಲಸ ಮಾಡಬೇಕು. ಆಗ ಮಾತ್ರ ಖರ್ಗೆ ಅವರಿಗೆ ಇನ್ನಷ್ಟು ಒಳ್ಳೆ ಹೆಸರು ಲಭಿಸುತ್ತದೆ. ಆ ನಿಟ್ಟಿನಲ್ಲಿ ಎಲ್ಲಾ ಕಾರ್ಯಕರ್ತರು, ಮುಖಂಡರು ವೈಮನಸ್ಸು ಬದಿಗೊತ್ತಿ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ಕೇರಳದಲ್ಲಿ ಕೇಡರ್ ಬೇಸ್, ರಾಜ್ಯದಲ್ಲಿ ಲೀಡರ್ ಬೇಸ್: ಭಾರತ ಐಕ್ಯತಾ ಯಾತ್ರೆ ವೇಳೆ ಎಐಸಿಸಿ ಮುಖಂಡ ರಾಹುಲ್ ಗಾಂಧಿ ಅವರು ನನ್ನ ಜೊತೆ ಮಾತನಾಡುವಾಗ ಕರ್ನಾಟಕ ಹಾಗೂ ಕೇರಳ ಕಾಂಗ್ರೆಸ್ ಸಮಿತಿಯಲ್ಲಿರುವ ವ್ಯತ್ಯಾಸವನ್ನು ಗುರುತಿಸಿರುವುದಾಗಿ ಹೇಳಿದರು. ಕೇರಳದಲ್ಲಿ ಕೇಡರ್(ತಳಮಟ್ಟ) ಬೇಸ್ ಪಕ್ಷ ಸಂಘಟನೆ, ಕರ್ನಾಟಕದಲ್ಲಿ ಲೀಡರ್(ನಾಯಕರ ವರ್ಚಸ್ಸು) ಬೇಸ್ ಸಂಘಟನೆ ಇರುವುದನ್ನು ತಿಳಿಸಿದರು. ಮುಂದಿನ ದಿನಗಳಲ್ಲಿ ರಾಜ್ಯದಲ್ಲೂ ಕಾಂಗ್ರೆಸ್ ಪಕ್ಷವನ್ನು ತಳಮಟ್ಟದಿಂದ ಸಂಘಟಿಸಲು ಕ್ರಮ ಕೈಗೊಳ್ಳಬೇಕು. ಪಂಚಾಯ್ತಿ, ಬೂತ್ ಮಟ್ಟದಲ್ಲಿ ಸಂಘಟಿಸಿದಾಗ ಮಾತ್ರ ಪಕ್ಷ ಗಟ್ಟಿಯಾಗಿ ನೆಲೆಯೂರುತ್ತದೆ ಎಂದು ಅಭಿಪ್ರಾಯಪಟ್ಟರು.

ಲೀಡರ್ ಆದರೆ ಸಾಲದು: ಪ್ರತಿಯೊಬ್ಬರು ಪಕ್ಷವನ್ನು ಶಿಸ್ತಾಗಿ ತೆಗೆದುಕೊಂಡು ಹೋಗಬೇಕು. ಎಲ್ಲರೂ ಲೀಡರ್ ಆದರೆ ಪ್ರಯೋಜನವಿಲ್ಲ. ಲೀಡರ್ ಆಗಲು ಜನ ಸಂಪಾದನೆ ಮಾಡಬೇಕು. ಜನ ಸಂಪಾದಿಸದೇ ಕೇವಲ ಲೀಡರ್‌ಗಳಾದರೆ ಸಾಕಾಗುವುದಿಲ್ಲ. ಪಕ್ಷಕ್ಕಿಂತ ದೊಡ್ಡವರು ಯಾರೂ ಇರಲ್ಲ. ಮುಂದಿನ ದಿನಗಳಲ್ಲಿ ಲೋಪವಾಗದಂತೆ ಕಟ್ಟೆಚ್ಚರ ವಹಿಸಬೇಕು. ಯಾವುದೇ ಲೋಪವಾದರೆ ಈ ಭಾಗದ ಉಸ್ತುವಾರಿಯಾಗಿ ರುವ ನಾನು ಕೂಡ ತಲೆಬಾಗಬೇಕು. ಹಾಗಾಗಿ ಅದಕ್ಕೆ ಅವಕಾಶ ಮಾಡಿಕೊಡಬಾರದು ಎಂದು ಮನವಿ ಮಾಡಿದರು.

ವಿಶೇಷ ಸ್ಥಾನಮಾನಕ್ಕೆ ಖರ್ಗೆ ಕೊಡುಗೆ: ಎಐಸಿಸಿ ಅಧ್ಯಕ್ಷರಾಗಿ ಮಲ್ಲಿಕಾರ್ಜುನ ಖರ್ಗೆ ಆಯ್ಕೆಯಾದ ಸಂದರ್ಭದಲ್ಲಿಯೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಟೀಕಿಸಿದ್ದಾರೆ. ಬಿಜೆಪಿ ನಾಯಕರು ಕೇವಲ ರಾಜಕಾರಣಕ್ಕಾಗಿ ಮಾತನಾಡುತ್ತಿದ್ದಾರೆ. ಹೈದ್ರಾಬಾದ್-ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ ದೊರಕಿಸಿಕೊಡಲು ಮಲ್ಲಿಕಾರ್ಜುನ ಖರ್ಗೆ ಹೋರಾಟ ಪ್ರಧಾನ ಪಾತ್ರ ವಹಿಸಿದೆ. ಆರ್ಟಿಕಲ್ 371ಎ ಅನುಷ್ಠಾನಕ್ಕೆ ಹೋರಾಟ ಮಾಡಿ ಹೈದ್ರಾಬಾದ್-ಕರ್ನಾಟಕಕ್ಕೆ ವಿಶೇಷ ಸವಲತ್ತು ದೊರಕಿಸಿಕೊಡಲು ಶ್ರಮಿಸಿದರು. ಆಂಧ್ರಪ್ರದೇಶದ ಸಿಎಂ ಆಗಿದ್ದ ಚಂದ್ರಬಾಬು ನಾಯ್ಡು ಅವರು ವಿಶೇಷ ಸ್ಥಾನಮಾನಕ್ಕಾಗಿ ಹೋರಾಟ ಮಾಡಿದ್ದರು. ಆದರೆ ಪ್ರಧಾನಿ ಮೋದಿ, ಅವರ ಬೇಡಿಕೆ ತಿರಸ್ಕರಿಸಿದ್ದರಿಂದ ಚಂದ್ರಬಾಬು ನಾಯ್ಡು ಎನ್‌ಡಿಎನಿಂದ ಹೊರ ಬಂದರು ಎಂದರು.

ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ಕಾಂಗ್ರೆಸ್ ಅತ್ಯಂತ ಹಿರಿಯ ನಾಯಕರಾಗಿರುವ ಮಲ್ಲಿಕಾರ್ಜುನ ಖರ್ಗೆ ಎಐಸಿಸಿ ಅಧ್ಯಕ್ಷರಾಗಿರುವುದು ಸಂತೋಷದ ಸಂಗತಿ. ಖರ್ಗೆ ಅವರು ದಲಿತ ನಾಯಕರೆಂದು ಈ ಪಟ್ಟ ನೀಡಿಲ್ಲ. ಬದಲಾಗಿ ರಾಷ್ಟ್ರಮಟ್ಟದಲ್ಲಿ ಪಕ್ಷವನ್ನು ಮುನ್ನಡೆಸಲು ಸಮರ್ಥರಿದ್ದಾರೆ ಎಂದು ಅರಿತು, ಚುನಾವಣೆ ಮೂಲಕವೇ ಆಯ್ಕೆ ಮಾಡಲಾಗಿದೆ. 9 ಭಾರಿ ಶಾಸಕರಾಗಿ ಸೇವೆ ಸಲ್ಲಿಸಿದ್ದಾರೆ. ಎದುರಿಸಿದ 12 ಚುನಾವಣೆಯಲ್ಲಿ ಕೇವಲ 1 ಬಾರಿ ಮಾತ್ರ ಸೋಲು ಕಂಡಿದ್ದಾರೆ. ಸೋಲಿಲ್ಲದ ಸರದಾರ ಎಂಬ ಬಿರುದಾಂಕಿತರಾಗಿರುವ ಮಲ್ಲಿಕಾರ್ಜುನ ಖರ್ಗೆ ಅವರು ಎಐಸಿಸಿ ಅಧ್ಯಕ್ಷರಾಗಿರುವುದಕ್ಕೆ ಅಭಿನಂದನಾ ನಿರ್ಣಯ ಕೈಗೊಂಡಿರುವುದು ಶ್ಲಾಘನೀಯ ಎಂದು ಅಭಿಪ್ರಾಯಪಟ್ಟರು.

ಸಭೆಯಲ್ಲಿ ಮಂಡಿಸಿದ ಅಭಿನಂದನಾ ನಿರ್ಣಯಕ್ಕೆ ಎಲ್ಲರೂ ಕೈ ಎತ್ತುವ ಮೂಲಕ ಎಲ್ಲರೂ ಸಹಮತಿಸಿದರು. ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ, ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಗ್ರಾಮಾಂತರ ಅಧ್ಯಕ್ಷ ಡಾ.ಬಿ.ಜೆ. ವಿಜಯ್‌ಕುಮಾರ್, ಜಿ.ಪಂ. ಮಾಜಿ ಅಧ್ಯಕ್ಷರಾದ ಕೆ.ಮರೀಗೌಡ, ಬಿ.ಎಂ. ರಾಮು, ವಕ್ತಾರ ಹೆಚ್.ಎ. ವೆಂಕಟೇಶ್, ಕೆಪಿಸಿಸಿ ಸದಸ್ಯ ಕೆ.ಹರೀಶ್‌ಗೌಡ, ಮಾಜಿ ಮೇಯರ್‌ಗಳಾದ ಪುಷ್ಪಲತಾ ಟಿ.ಬಿ.ಚಿಕ್ಕಣ್ಣ, ಮುಖಂಡರಾದ ಎಂ.ಶಿವಣ್ಣ, ಸೋಮಶೇಖರ್, ಪ್ರದೀಪ್ ಕುಮಾರ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು. ಇದೇ ವೇಳೆ ಸಿಹಿ ವಿತರಿಸಲಾಯಿತು.

ಬಲಿಜ ಸಮುದಾಯಕ್ಕೆ 2ಎ ಮೀಸಲಾತಿ ನೀಡಲು ಒತ್ತಾಯ

ಸಮಾಜದ ಶ್ರೇಯೋಭಿವೃದ್ಧಿಗೆ ನಿಗಮ ಸ್ಥಾಪಿಸಿ, ಶಾಲಾ ಪಠ್ಯದಲ್ಲಿ ಸಮುದಾಯದ ದಾರ್ಶನಿಕ ಶ್ರೀ ಕೈವಾರ ತಾತಯ್ಯರ ಜೀವನ ಚರಿತ್ರೆ ಅಳವಡಿಸಬೇಕು



ಮೈಸೂರು,ಅ.20(ಪಿಎಂ)- ಬಲಿಜ ಸಮುದಾಯಕ್ಕೆ ಪೂರ್ಣ ಪ್ರಮಾಣದಲ್ಲಿ 2ಎ ಮೀಸಲಾತಿ ಸೌಲಭ್ಯ ಕಲ್ಪಿಸಿ, ಸಮಾಜದ ಶ್ರೇಯೋಭಿವೃದ್ಧಿಗಾಗಿ ನಿಗಮ ಸ್ಥಾಪಿಸಬೇಕು ಹಾಗೂ ಸಮುದಾಯದ ದಾರ್ಶನಿಕ ಶ್ರೀ ಕೈವಾರ ತಾತಯ್ಯ ಅವರ ಜೀವನ ಚರಿತ್ರೆಯನ್ನು ಶಾಲಾ ಪಠ್ಯದಲ್ಲಿ ಅಳವಡಿಸಬೇಕು ಎಂದು ದಿ ಬಲಿಜ ಸಂಘಂ ಒತ್ತಾಯಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಯತಿರಾಜ್, ಆರ್ಥಿಕ ಹಾಗೂ ಸಾಮಾಜಿಕವಾಗಿ ನಮ್ಮ ಸಮುದಾಯ ಹಿಂದುಳಿದಿದೆ. ಹಾಗಾಗಿ ಸಮಾಜದ ಶ್ರೇಯೋಭಿವೃದ್ಧಿಗಾಗಿ ಸರ್ಕಾರ ನಿಗಮ ಸ್ಥಾಪಿಸಬೇಕು. ಈ ಹಿಂದೆ ಸಮುದಾಯಕ್ಕೆ ಪೂರ್ಣ ಪ್ರಮಾಣದಲ್ಲಿ 2ಎ ಮೀಸಲಾತಿ ಸೌಲಭ್ಯ ಕಲ್ಪಿಸಲಾಗಿತ್ತು. ಆದರೆ ಏಕಾಏಕಿ '3ಎ'ಗೆ ವರ್ಗಾಯಿಸಿ, ಶಿಕ್ಷಣಕ್ಕೆ ಮಾತ್ರ 2ಎ ಮೀಸಲಾತಿ ನೀಡಲಾಗಿದೆ. ಈ ಹಿಂದಿನಂತೆ ಸಮುದಾಯಕ್ಕೆ ಪೂರ್ಣ ಪ್ರಮಾಣದಲ್ಲಿ 2ಎ ಮೀಸಲಾತಿ ಸೌಲಭ್ಯ ಕಲ್ಪಿಸಬೇಕು ಎಂದು ಆಗ್ರಹಿಸಿದರು.

ಸಂಘದ ಗೌರವಾಧ್ಯಕ್ಷೆ ಮೀನಾ ತೂಗುದೀಪ ಶ್ರೀನಿವಾಸ್ ಮಾತನಾಡಿ, 1971-72ರಲ್ಲಿ ಸ್ಥಾಪನೆಯಾದ ನಮ್ಮ ಸಂಘವು 1993ರಿಂದ ಕಾರಣಾಂತರದಿಂದ ಕಾರ್ಯನಿರ್ವಹಿಸದೇ ಸ್ಥಗಿತವಾಗಿತ್ತು. 2020ರಲ್ಲಿ ಸರ್ಕಾರ ಸಂಘಕ್ಕೆ ಆಡಳಿತಾಧಿಕಾರಿ ನೇಮಿಸಿತು. ಬಳಿಕ 2021ರಲ್ಲಿ ನೂತನ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರವಾಯಿತು. ಆದರೆ ಸಂಘದ ಯಾವುದೇ ದಾಖಲಾತಿಗಳು ಲಭ್ಯವಿಲ್ಲದೆ, ಹಲವು ರೀತಿಯ ಸಮಸ್ಯೆ ಉಂಟಾಗಿತ್ತು ಇದೀಗ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಸಹಕಾರದಿಂದ ಸಂಘದ ನಿವೇಶನಕ್ಕೆ ಸಂಬಂಧಿಸಿದ ದಾಖಲೆಗಳು ಲಭ್ಯವಾಗಿವೆ ಎಂದು ತಿಳಿಸಿದರು.

ಸಂಘದ ನೋಂದಣಿ ನವೀಕರಣಕ್ಕೆ ಸಹಕರಿಸಿದ ಸಹಕಾರ ಇಲಾಖೆ ಅಧಿಕಾರಿಗಳು ಹಾಗೂ ಸಂಘದ ಪುನರ್ ಸ್ಥಾಪನೆಗೆ ಸಹಕಾರ ನೀಡಿದ ಸಮುದಾಯದ ಗಣ್ಯರಾದ ಬೆಂಗಳೂರು ಸೆಂಟ್ರಲ್ ಲೋಕಸಭಾ ಸದಸ್ಯ ಪಿ.ಸಿ.ಮೋಹನ್ ಹಾಗೂ ಬಾಲ್ಡ್ವಿನ್ ವಿದ್ಯಾ ಸಂಸ್ಥೆ ಸಂಸ್ಥಾಪಕ ಡಾ.ಟಿ.ವೇಣು ಗೋಪಾಲ್ ಅವರಿಗೆ ಸಂಘದ ಪರವಾಗಿ ಕೃತಜ್ಞತೆ ಸಲ್ಲಿಸುವುದಾಗಿ ಹೇಳಿದರು.

ಸಂಘದ ಅಧೀನದ ಸಮುದಾಯದ ವಿದ್ಯಾರ್ಥಿನಿಲಯ ಪುನರಾರಂಭಿಸಲು ಹಾಗೂ ಸಮುದಾಯ ಭವನ ನಿರ್ಮಿಸಲು ಅನುದಾನ ಕಲ್ಪಿಸುವಂತೆ ಸರ್ಕಾರದಲ್ಲಿ ಮನವಿ ಮಾಡಿದರು. ಸಂಘದ ಕಾರ್ಯದರ್ಶಿ ಕೆಲಿಂಗ ರಾಜು, ಉಪಾಧ್ಯಕ್ಷ ಕೆ.ಚಿನ್ನಸ್ವಾಮಿ, ಜಂಟಿ ಕಾರ್ಯದರ್ಶಿ ಜಿ.ಮಹೇಶ್ ನಾಯ್ಡು, ಖಜಾಂಚಿ ಆರ್.ಮಂಜುನಾಥ್ ಮತ್ತಿತರರು ಗೋಷ್ಠಿಯಲ್ಲಿದ್ದರು.

ಅರಮನೆ ಕೋಟೆ ಗೋಡೆಯಲ್ಲಿ ಹಲವು ಸಣ್ಣ ಬಿರುಕಿವೆ ; ಶೀಘ್ರ ಸರಿಪಡಿಸಬೇಕು



ಮೈಸೂರು,ಅ.20(ಪಿಎಂ)- ಮೈಸೂರು ಅರಮನೆ ಕೋಟೆ ಮಾರಮ್ಮ ದೇವಾಲಯದ ಬಳಿ ಅರಮನೆಯ ಕೋಟೆ ಗೋಡೆ ಕುಸಿಯಲು ಒಂದೂವರೆ ವರ್ಷದ ಹಿಂದೆ ಇಲ್ಲಿ ಉಂಟಾಗಿದ್ದ ಸಣ್ಣ ಬಿರುಕು ಕಾರಣ. ಇದೇ ಗೋಡೆಯಲ್ಲಿ ಅಲ್ಲಲ್ಲಿ ಬಿರುಕುಗಳು ಇನ್ನೂ ಇದ್ದು, ಅವುಗಳನ್ನು ಈಗಲೇ ಸರಿಪಡಿಸಬೇಕು ಎಂದು ಮೈಸೂರು ನಿವಾಸಿ ಸಿ.ಕೃಷ್ಣ ಆಗ್ರಹಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಾನು ಇದೇ ನಗರದಲ್ಲಿ ಹುಟ್ಟಿ, ಮೈಸೂರು ಅರಮನೆ ಸುತ್ತಲು ಓಡಾಡಿಕೊಂಡು ಬೆಳೆದವನು. ಒಂದೂವರೆ ವರ್ಷದ ಹಿಂದೆಯೇ ಅರಮನೆ ಕೋಟೆ ಗೋಡೆಯಲ್ಲಿ ಬಿರುಕು ಉಂಟಾಗಿತ್ತು. ಅದನ್ನು ಶೀಘ್ರ ದುರಸ್ತಿಪಡಿಸಿದ್ದರೆ, ಇಷ್ಟು ಸಮಸ್ಯೆಯೇ ಆಗುತ್ತಿರಲಿಲ್ಲ. ಇದೇ ಆ.18ರಂದು ಸದರಿ ಬಿರುಕನ್ನು ಸಂಬಂಧಿಸಿದವರ ಗಮನಕ್ಕೆ ತಂದು ಸರಿಪಡಿಸಲು ಕ್ರಮ ವಹಿಸಬೇಕೆಂದು ಮೈಸೂರು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರಲ್ಲಿ ಪತ್ರ ಮುಖೇನ ಮನವಿ ಮಾಡಿದ್ದೆ. ರಿಜಿಸ್ಟರ್ ಪೋಸ್ಟ್ ಮೂಲಕ ಅವರಿಗೆ ಪತ್ರ ಬರೆದಿದ್ದೆ ಎಂದರು.

ಪಾರಂಪರಿಕ ಕಟ್ಟಡಗಳನ್ನು ಆಗಾಗ್ಗೆ ಪರಿಶೀಲಿಸಿ ಸಣ್ಣಪುಟ್ಟ ಸಮಸ್ಯೆಗಳನ್ನು ಶೀಘ್ರವೇ ಪರಿಹರಿಸುವ ಪರಿಪಾಠ ಬೆಳೆಸಿಕೊಳ್ಳಬೇಕು ಎಂದು ಒತ್ತಾಯಿಸಿದರು. ಇವರ ಪತ್ನಿ ಹೇಮಾವತಿ, ಪುತ್ರಿ ಕೆ.ವಂಶಿತಾ ಗೋಷ್ಠಿಯಲ್ಲಿದ್ದರು.

ಸ್ವಚ್ಛ ನಗರದಲ್ಲಿ ಸ್ವಚ್ಛ ದೀಪಾವಳಿ ಆಚರಿಸಿ

ಸ್ವಚ್ಛ ಭಾರತ ಅಭಿಯಾನಕ್ಕೆ ಉಪ ಮೇಯರ್ ಚಾಲನೆ

ಮೈಸೂರು, ಅ.20(ಆರ್‌ಕೆಬಿ)- ಈ ಬಾರಿಯ ದೀಪಾವಳಿಯಲ್ಲಿ ಸ್ವಚ್ಛ ಮನೆ ಮಾತ್ರವಲ್ಲ... ಸ್ವಚ್ಛ ನಗರ ಕೂಡ ಎಂಬ ಘೋಷಣೆಯೊಂದಿಗೆ ಮೈಸೂರಿನ ಎಎಸ್‌ಜಿ ಕಣ್ಣಿನ ಆಸ್ಪತ್ರೆ ಗುರುವಾರ ಮೈಸೂರಿನಲ್ಲಿ ಸ್ವಚ್ಛಭಾರತ ಅಭಿಯಾನ ಹಮ್ಮಿಕೊಂಡಿತ್ತು. ಭೈರಾಪುರ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಆಸ್ಪತ್ರೆಯ ವೈದ್ಯರು ಸಿಬ್ಬಂದಿ ಈ ಅಭಿಯಾನದಲ್ಲಿ ಪಾಲ್ಗೊಂಡಿದ್ದರು.



ಮೈಸೂರಿನ ಅರಮನೆ ಕೋಟೆ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಉಪಮೇಯರ್ ಡಾ.ರೂಪಾ ಪೊರಕೆ ಹಿಡಿದು ಕಸ ಗುಡಿಸಿ, ಪ್ಲಾಸ್ಟಿಕ್ ಕಸಗಳನ್ನು ಡಬ್ಬಕ್ಕೆ ಹಾಕುವ ಮೂಲಕ ಸ್ವಚ್ಛತಾ ಅಭಿಯಾನಕ್ಕೆ ಚಾಲನೆ ನೀಡಿದರು. ಈ ವೇಳೆ ಮಾತನಾಡಿದ ಅವರು, ಮೈಸೂರಿನ ಸ್ವಚ್ಛತೆಯಲ್ಲಿ ಪೌರ ಕಾರ್ಮಿಕರ ಕಾರ್ಯ ಹೆಚ್ಚಿನದಾಗಿದ್ದು, ಮೈಸೂರಿಗರು ತಮ್ಮ ಮನೆಯ ಕಸ ನೀಡುವಾಗ ಒಣ ಮತ್ತು ಹಸಿ ಕಸವನ್ನು ವಿಂಗಡಿಸಿ ನೀಡುವ ಮೂಲಕ ಸ್ವಚ್ಛ ನಗರಕ್ಕೆ ನಗರಪಾಲಿಕೆಯೊಂದಿಗೆ ಸಹಕಾರ ನೀಡುವಂತೆ ಮನವಿ ಮಾಡಿದರು.

ನಗರಪಾಲಿಕೆ ಆರೋಗ್ಯಾಧಿಕಾರಿ ಡಾ.ನಾಗರಾಜು, ಭೈರಾಪುರ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಜಗದೀಶ್, ದೈಹಿಕ ಶಿಕ್ಷಣ ನಿರ್ದೇಶಕಿ ಶಶಿರೇಖಾ, ಆಸ್ಪತ್ರೆಯ ನೇತ್ರ ತಜ್ಞರಾದ ಡಾ.ರೋಷನ್, ಡಾ.ಪವನ್ ವಿ.ಜೋಷಿ, ಡಾ.ಮಹೇಶ್‌ಕುಮಾರ್, ಡಾ.ವಿನಿ ಬದ್ಲಾನಿ, ಡಾ.ಲೂಸಿ ಕಾವೇರಿ ಇನ್ನಿತರರು ಉಪಸ್ಥಿತರಿದ್ದರು.

ವಾಕಥಾನ್‌ನಲ್ಲಿ ಜುಂಬಾ ವರ್ಕ್‌ಔಟ್ ಮಾಡಿದ ಸಚಿವ ಡಾ. ಸಿ.ಎನ್.ಅಶ್ವತ್ಥನಾರಾಯಣ್

ಮೈಸೂರು, ಅ.20(ಆರ್‌ಕೆ)-ಬಿಗ್ ಟೆಕ್ ಶೋ-2022ರ ಅಂಗವಾಗಿ ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ (KDEM) ವತಿಯಿಂದ ಮೈಸೂರಿನ ಅರಮನೆ ಉತ್ತರ ದ್ವಾರದ ಶ್ರೀ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಇಂದು ಆಯೋಜಿಸಿದ್ದ ವಾಕಥಾನ್‌ನಲ್ಲಿ ಐಟಿ-ಬಿಟಿ, ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್.ಅಶ್ವತ್ಥನಾರಾಯಣ ಅವರು ಪಾಲ್ಗೊಂಡು ಜುಂಬಾ ವರ್ಕ್‌ಔಟ್ ಮಾಡುವ ಮೂಲಕ ಯುವ ಉದ್ಯಮಿಗಳನ್ನು ಪ್ರೋತ್ಸಾಹಿಸಿದರು.

'ಪ್ರಗತಿಯ ಪರಂಪರೆ ನಾಡಿಗೆ-ಸಮರ್ಥ ಆರ್ಥಿಕ ಬೆಳವಣಿಗೆ ಕಡೆಗೆ' ಘೋಷಣೆಯೊಂದಿಗೆ ಏರ್ಪಡಿಸಿದ್ದ 5 ಕಿ.ಮೀ. ವಾಕಥಾನ್‌ಗೆ ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದ ಸಚಿವರು, ಜುಂಬಾ ವರ್ಕ್‌ಔಟ್ ಮಾಡಿ ಗಮನ ಸೆಳೆದರು.



ದೊಡ್ಡ ಗಡಿಯಾರ, ಗಾಂಧಿ ಸ್ಕ್ವೇರ್, ಚಿಕ್ಕ ಗಡಿಯಾರ, ಡಿ.ದೇವರಾಜ ಅರಸು ರಸ್ತೆ, ಡಿಸಿ ಕಚೇರಿ, ಕ್ರಾಫರ್ಡ್ ಹಾಲ್, ಮಹಾರಾಜ ಕಾಲೇಜು ಮೈದಾನ, ರಾಮಸ್ವಾಮಿ ಸರ್ಕಲ್, ಚಾಮರಾಜ ಜೋಡಿ ರಸ್ತೆ, ಸರ್ಕಾರಿ ಸಂಸ್ಕೃತ ಪಾಠಶಾಲೆ ಸರ್ಕಲ್, ಗನ್‌ಹೌಸ್ ಸರ್ಕಲ್, ಹಾರ್ಡಿಂಜ್ ಸರ್ಕಲ್ ಮೂಲಕ ಸಾಗಿದ ವಾಕಥಾನ್, ಮರಳಿ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ತಲುಪಿ ಅಂತ್ಯಗೊಂಡಿತು.

'ಕರ್ನಾಟಕ-ದಿ ಗ್ಲೋಬಲ್ ಇನ್ನೋವೇಷನ್ ಅಂಡ್ ಸ್ಟಾರ್ಟ್ ಅಪ್ ಹಬ್', 'ಕರ್ನಾಟಕ ಹೋಂ ಟು ಮೋರ್ ದೆನ್ 400+ಗ್ಲೋಬಲ್ ಆರ್ ಅಂಡ್ ಡಿ ಸೆಂಟರ್ಸ್', 'ವಾಕ್ ಫಾರ್ ಆತ್ಮನಿರ್ಭರ್ ಭಾರತ್' ಮತ್ತು 'ವಾಕ್ ಫಾರ್ ವಿಮೆನ್ ಎಂಪವರ್‌ಮೆಂಟ್' ಎಂಬಿತ್ಯಾದಿ ಘೋಷಣಾ ಫಲಕಗಳನ್ನು ಹಿಡಿದು ಯುವ ಉದ್ಯಮಿಗಳು ವಾಕಥಾನ್‌ನಲ್ಲಿ ಜನ ಜಾಗೃತಿ ಮೂಡಿಸಿದರು.

ಕೆಡಿಇಎಂ ಸಿಇಓ ಸಂಜೀವ್ ಗುಪ್ತ ಅಧ್ಯಕ್ಷ ಬಿ.ವಿ.ನಾಯ್ಡು, ಮೈಸೂರಿನ ವಿವಿಧ ಐಟಿ-ಬಿಟಿ ಕಂಪನಿಗಳ ನೌಕರರು, ಕೆ-ಟೆಕ್, ಕೈಗಾರಿಕಾ ಸಂಘಟನೆಗಳ ಪದಾಧಿಕಾರಿಗಳು ಹಾಗೂ ಮಾಹಿತಿ ತಂತ್ರಜ್ಞಾನ ವಲಯದ ಹಲವರು ವಾಕಥಾನ್‌ನಲ್ಲಿ ಪಾಲ್ಗೊಂಡಿದ್ದರು.

ಕೆಂಪೇಗೌಡರ ಪ್ರತಿಮೆ ಅನಾವರಣ ಕಾರ್ಯಕ್ರಮದಲ್ಲಿ ಅಧಿಕ ಸಂಖ್ಯೆಯಲ್ಲಿ ಪಾಲ್ಗೊಳ್ಳಿ

- ಉನ್ನತ ಶಿಕ್ಷಣ ಸಚಿವ ಡಾ.ಅಶ್ವತ್ಥ ನಾರಾಯಣ ಮನವಿ
- ಮೈಸೂರಿಗೆ ಆಗಮಿಸುವ ಕೆಂಪೇಗೌಡರ ರಥ ಸ್ವಾಗತಿಸಿ; ಕಾರ್ಯಕ್ರಮ ಯಶಸ್ವಿಗೊಳಿಸಿ
- ಶ್ರೀ ಆದಿಚುಂಚನಗಿರಿ ಶಾಖಾ ಮಠದ ಆವರಣದಲ್ಲಿ ಸಭೆ

ಮೈಸೂರು, ಅ.20(ಎಸ್‌ಬಿಡಿ)- ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ನಾಡಪ್ರಭು ಕೆಂಪೇಗೌಡರ 108 ಅಡಿ ಎತ್ತರದ 'ಪ್ರಗತಿಯ ಪ್ರತಿಮೆ' ಅನಾವರಣ ಸಮಾರಂಭದಲ್ಲಿ ಹೆಚ್ಚಿನ ಜನ ಭಾಗಿಯಾಗಬೇಕೆಂದು ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್.ಅಶ್ವತ್ಥ ನಾರಾಯಣ್ ಮನವಿ ಮಾಡಿದರು.

ಮೈಸೂರಿನ ಬೋಗಾದಿಯಲ್ಲಿರುವ ಶ್ರೀ ಆದಿಚುಂಚನಗಿರಿ ಶಾಖಾ ಮಠದ ಆವರಣದಲ್ಲಿ ಬುಧವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ನ.11ರಂದು ಪ್ರಧಾನಿ ನರೇಂದ್ರ ಮೋದಿ ಅವರು ಕೆಂಪೇಗೌಡರ ಬೃಹತ್ ಪ್ರತಿಮೆಯನ್ನು ಅನಾವರಣ ಮಾಡಲಿದ್ದು, ಆ ಐತಿಹಾಸಿಕ ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲೆಯ ಹೆಚ್ಚು ಜನ ಪಾಲ್ಗೊಳ್ಳಬೇಕು. ಈ ಹಿನ್ನೆಲೆಯಲ್ಲಿ ಅ.22ರಂದು ನಾಡಪ್ರಭು ಕೆಂಪೇಗೌಡರ ರಥ ಮೈಸೂರಿಗೆ ಆಗಮಿಸಲಿದ್ದು, ಅದ್ದೂರಿಯಾಗಿ ಬರ ಮಾಡಿಕೊಳ್ಳಬೇಕು. ಶ್ರೀ ಮಠದ ನೇತೃತ್ವದಲ್ಲೇ ಈ ಎಲ್ಲಾ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲು ಪ್ರತಿಯೊಬ್ಬರೂ ಸಹಕರಿಸಬೇಕೆಂದು ಕೋರಿಕೊಂಡರು.

ಶಾಸಕ ಎಲ್.ನಾಗೇಂದ್ರ ಮಾತನಾಡಿ, ಅ.22ರಂದು ಮೈಸೂರಿಗೆ ಆಗಮಿಸಲಿರುವ ನಾಡಪ್ರಭು ಕೆಂಪೇಗೌಡರ ರಥವನ್ನು ಮೈಸೂರು-ಬೆಂಗಳೂರು ಹೆದ್ದಾರಿಯ ಕೆಂಪೇಗೌಡರ ವೃತ್ತದಲ್ಲಿ ಅದ್ದೂರಿಯಾಗಿ ಸ್ವಾಗತಿಸಲಾಗುವುದು. ಎಲ್ಲಾ ಸಂಘ-ಸಂಸ್ಥೆಗಳು, ಸಂಘಟನೆಗಳು ಸಹಕಾರ ನೀಡಬೇಕು. ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಕೆಂಪೇಗೌಡರ ಬೃಹತ್ ಪ್ರತಿಮೆ ಸೇರಿದಂತೆ ಅವರ ಸಾಧನೆಯನ್ನು ಚಿರಸ್ಥಾಯಿಗೊಳಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಅತ್ಯಂತ ಆಸಕ್ತಿಯಿಂದ ಕಾರ್ಯಕ್ರಮಗಳನ್ನು ರೂಪಿಸಿದೆ. ಇಂತಹ ಸಂದರ್ಭದಲ್ಲಿ ಜಾತ್ಯಾತೀತವಾಗಿ, ಪಕ್ಷಾತೀತವಾಗಿ ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸುವ ಮೂಲಕ ಕೆಂಪೇಗೌಡರಿಗೆ ಗೌರವ ಸಲ್ಲಿಸಬೇಕೆಂದು ಕೇಳಿಕೊಂಡರು.



ಶ್ರೀ ಆದಿ ಚುಂಚನಗಿರಿ ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ ಮಾತನಾಡಿ, ಜಾತ್ಯಾತೀತ ನಿಲುವು ಹೊಂದಿದ್ದ ನಾಡಪ್ರಭು ಕೆಂಪೇಗೌಡರು ಒಂದು ಸಮುದಾಯಕ್ಕೆ ಸೀಮಿತರಲ್ಲ. ಎಲ್ಲಾ ಸಮುದಾಯದವರಿಗೆ ಕಸುಬಿನ ಆಧಾರದಲ್ಲಿ ಪೇಟೆಗಳನ್ನು ನಿರ್ಮಿಸಿದ್ದ ಅವರ ಆದರ್ಶ ನಿಲುವಿಗೆ ಒಂದು ಸಾಕ್ಷಿಯಾಗಿದೆ. ಹಾಗಾಗಿ ಕೆಂಪೇಗೌಡರ ಪ್ರತಿಮೆ ಅನಾವರಣ ಹಾಗೂ ಅದಕ್ಕೂ ಮುನ್ನ ರಥ ಸಂಚಾರದ ಯಶಸ್ವಿಗೆ ಸಮಾಜದ ಎಲ್ಲಾ ಸಮುದಾಯದವರೂ ಕೈ ಜೋಡಿಸಬೇಕೆಂದು ತಿಳಿಸಿದರು.

ಈ ಸಂಧರ್ಭದಲ್ಲಿ ಮೈಸೂರು ಜಿಲ್ಲಾ ಒಕ್ಕಲಿಗರ ಸಂಘದ ಉಪಾಧ್ಯಕ್ಷ ರವಿ ರಾಜಕೀಯ, ಪ್ರಧಾನ ಕಾರ್ಯದರ್ಶಿ ಚೇತನ್, ಖಜಾಂಚಿ ಲೋಕೇಶ್, ರಾಜ್ಯ ಒಕ್ಕಲಿಗರ ಸಂಘದ ಗೌರವಾಧ್ಯಕ್ಷ ಕೆ.ವಿ.ಶ್ರೀಧರ್, ನಿರ್ದೇಶಕ ಸಿ.ಜಿ.ಗಂಗಾಧರ್, ಪ್ರಶಾಂತ್ ಗೌಡ, ಗುರು, ಜಯರಾಮ್, ರಾಜು, ಕುಮಾರ್ ಗೌಡ, ಸಂತೋಷ, ನಾಗಣ್ಣ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರಿನ ಶ್ರೀ ಆದಿಚುಂಚನಗಿರಿ ಶಾಖಾ ಮಠದಲ್ಲಿ ಬುಧವಾರ ನಡೆದ ಸಭೆಯಲ್ಲಿ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥ ನಾರಾಯಣ್ ಮಾತನಾಡಿದರು. ಶ್ರೀ ಸೋಮನಾಥ ಸ್ವಾಮೀಜಿ, ಶಾಸಕ ಎಲ್.ನಾಗೇಂದ್ರ ಮತ್ತಿತರರು ಉಪಸ್ಥಿತರಿದ್ದರು.

ನಾವೂ ರೈತರ ಮಕ್ಕಳೇ, ನಿಮ್ಮ ಸಂಕಷ್ಟಕ್ಕೆ ನಾವಿದ್ದೇವೆ

ರೈತರಿಗೆ ನಿಖಿಲ್ ಕುಮಾರಸ್ವಾಮಿ ಅಭಯ



ಪಿರಿಯಾಪಟ್ಟಣ, ಅ.20– ನನ್ನ ತಾತ ಹೆಚ್.ಡಿ. ದೇವೇಗೌಡ, ನನ್ನ ತಂದೆ ಹೆಚ್.ಡಿ.ಕುಮಾರಸ್ವಾಮಿ ಸೇರಿದಂತೆ ನಾವೆಲ್ಲಾ ರೈತರ ಮಕ್ಕಳೇ, ರೈತಪರ ಹೋರಾಟದಿಂದ ಬಂದವರು. ರೈತರಿಗಾಗಿ ನಮ್ಮ ಜೀವನವನ್ನೇ ಮುಡುಪಾಗಿಟ್ಟಿದ್ದೇವೆ. ಮುಂದಿನ ದಿನಗಳಲ್ಲಿ ನಿಮ್ಮಪರ ಹೋರಾಟಕ್ಕೆ ನಿಲ್ಲುತ್ತೇವೆ. ಯಾರೂ ಆತಂಕಕ್ಕೆ ಒಳಗಾಗಬಾರದು ಎಂದು ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ರೈತರಿಗೆ ಅಭಯ ನೀಡಿದರು.

ತಾಲೂಕಿನ ಕಗ್ಗುಂಡಿ ತಂಬಾಕು ಮಾರುಕಟ್ಟೆಗೆ ಭೇಟಿ ನೀಡಿ ಮಾತನಾಡಿದ ಅವರು, ನಿನ್ನೆ ನಡೆದ ಘಟನೆಗಳ ಬಗ್ಗೆ ನಮ್ಮ ತಂದೆ, ಮಾಜಿ ಸಿಎಂ ಕುಮಾರಸ್ವಾಮಿ ಅವರು ಮಾಹಿತಿ ಪಡೆದು ನಿಮ್ಮ ಸಂಕಷ್ಟದಲ್ಲಿ ಪಾಲ್ಗೊಳ್ಳಲು ಇಲ್ಲಿಗೆ ಆಗಮಿಸುವುದಾಗಿ ಭರವಸೆ ನೀಡಿದ್ದರು. ಆದರೆ ಪಕ್ಷದ ಸಮಾವೇಶ ಹಾಗೂ ಮುಂದಿನ ಚುನಾವಣಾ ತಯಾರಿಗಾಗಿ ಕಾರ್ಯಕರ್ತರ ಸಭೆಯಲ್ಲಿ ಪಾಲ್ಗೊಂಡಿದ್ದ ಕಾರಣ ಅವರು ಇಲ್ಲಿಗೆ ಬರಲು ಸಾಧ್ಯವಾಗಲಿಲ್ಲ. ಈ ಹಿಂದೆ ಸಾಕಷ್ಟು ಹೋರಾಟದಲ್ಲಿ ಭಾಗಿಯಾಗಿದ್ದ ದೇವೇಗೌಡರಿಗೆ ಈ ವಿಚಾರ ತಿಳಿದಿಲ್ಲ. ಗೊತ್ತಾಗಿದ್ದರೆ ಅವರು ರೈತರಿಗೆ ಅನ್ಯಾಯವಾಗಲು ಬಿಡುತ್ತಿರಲಿಲ್ಲ. ನನ್ನ ತಾತ, ತಂದೆ ಪರವಾಗಿ ನಾನು ಇಲ್ಲಿಗೆ ಆಗಮಿಸಿದ್ದೇನೆ. ಮುಂದಿನ ದಿನಗಳಲ್ಲಿ ಕುಮಾರಸ್ವಾಮಿ ಅವರು ಇಲ್ಲಿಗೆ ಆಗಮಿಸಿ ನಿಮ್ಮ ಅಹವಾಲು ಆಲಿಸಿ ಹೋರಾಟ ನಡೆಸಲಿದ್ದಾರೆ ಎಂದರು.

ಶಾಸಕ ಕೆ.ಮಹದೇವ್ ಮಾತನಾಡಿ, ನಾನು ವಾರದ ಹಿಂದೆ ರೈತ ಮುಖಂಡರ ಸಮ್ಮುಖದಲ್ಲಿ ತಂಬಾಕು ಮಂಡಳಿ ಅಧಿಕಾರಿಗಳೊಂದಿಗೆ ಚರ್ಚಿಸಿ ತಂಬಾಕು ಬೆಳೆಗೆ ಬೆಂಬಲ ಬೆಲೆ ನಿಗದಿಪಡಿಸಲು ಸೂಚಿಸಿದ್ದೆ. ಮಾರುಕಟ್ಟೆ ಆರಂಭವಾದ ದಿನದಿಂದಲೇ ಪ್ರತಿ ಕೆಜಿಗೆ 270 ರೂ. ದರದಲ್ಲಿ ತಂಬಾಕು ಮಾರಾಟವಾಗಿ ರೈತರ ಮೊಗದಲ್ಲಿ ಮಂದಹಾಸ ಮೂಡಿತ್ತು. ಆದರೆ ದಿಢೀರ್ ಬೆಳವಣಿಯಲ್ಲಿ ತಂಬಾಕು ಬೆಲೆ ಕುಸಿತಗೊಂಡಿದ್ದರಿಂದ ರೈತರು ಕಂಗಾಲಾಗಿದ್ದಾರೆ. ಇದರಿಂದ ಯಾರೂ ಆತಂಕಕ್ಕೆ ಒಳಗಾಗಬಾರದು. ಈ ಬಗ್ಗೆ ಕ್ರಮ ಕೈಗೊಂಡು ಮುಂದಿನ ದಿನಗಳಲ್ಲಿ ತಂಬಾಕು ಬೆಳೆಗೆ ಒಳ್ಳೆಯ ದರ ಕೊಡಿಸುವುದಾಗಿ ಭರವಸೆ ನೀಡಿದರು.

ಬಾರದ ಕುಮಾರಸ್ವಾಮಿ, ಅಭಿಮಾನಿಗಳಿಗೆ ನಿರಾಸೆ: ಬುಧವಾರ ತಂಬಾಕು ಮಾರುಕಟ್ಟೆಯಲ್ಲಿ ದಿಢೀರ್ ದರ ಕುಸಿತದಿಂದ ಪ್ರತಿಭಟನೆಗಿಳಿದಿದ್ದ ರೈತರ ಮೇಲೆ ಪೊಲೀಸರು ಲಾಠಿ ಚಾರ್ಜ್ ಮಾಡಿದ ಹಿನ್ನಲೆಯಲ್ಲಿ ಮಾಜಿ ಸಿಎಂ ಕುಮಾರಸ್ವಾಮಿ ಅವರು ಗುರುವಾರ ಬೆಳಗ್ಗೆ 9.30ಕ್ಕೆ ಕಗ್ಗುಂಡಿ ತಂಬಾಕು ಮಾರುಕಟ್ಟೆಗೆ ಆಗಮಿಸಲಿದ್ದಾರೆ ಎಂದು ಬೆಳಗ್ಗೆಯಿಂದ ರೈತರು, ಅವರ ಅಭಿಮಾನಿಗಳು ಕಾದು ಕುಳಿತಿದ್ದರು. ಆದರೆ ಅವರು ಬರುವುದಿಲ್ಲವೆಂಬ ಸುದ್ದಿ ತಿಳಿದು ನಿರಾಸೆಗೊಂಡರು.

ಸಮಾರಂಭದಲ್ಲಿ ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯ ಶೆಟ್ಟಿ, ಮುಖಂಡರಾದ ಭೋಜೇಗೌಡ, ಮೈಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ ಸೇರಿದಂತೆ ಅನೇಕ ಮುಖಂಡರಿದ್ದರು.

> **"ರೈತರು, ಅಭಿಮಾನಿಗಳಿಗೆ ಹೆಚ್‌ಡಿಕೆ ಆಡಿಯೋ ಸಂದೇಶ**
>
> ಈ ವೇಳೆ ನೆರೆದಿದ್ದ ರೈತರು, ಅಭಿಮಾನಿಗಳಿಗೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಕಳುಹಿಸಿದ್ದ ಆಡಿಯೋ ಸಂದೇಶ ಕೇಳಿಸಲಾಯಿತು. ಆಡಿಯೋದಲ್ಲಿ ಕುಮಾರಸ್ವಾಮಿ ಅವರು ನಿನ್ನೆ ನಡೆದ ರೈತರ ಮೇಲಿನ ದೌರ್ಜನ್ಯ ನಿಜಕ್ಕೂ ಖಂಡನೀಯ. ಪೊಲೀಸರು ರೈತರ ಮೇಲೆ ಲಾಠಿ ಪ್ರಹಾರ ಮಾಡಬಾರದಾಗಿತ್ತು. ನೀವು ಆತಂಕಕ್ಕೆ ಒಳಗಾಗುವುದು ಬೇಡ. ಕೆಲವೇ ದಿನಗಳಲ್ಲಿ ನಾನು ನಿಮ್ಮಲ್ಲಿಗೆ ಬರುತ್ತೇನೆ. ನಿಮ್ಮ ಪರ ಧ್ವನಿ ಎತ್ತಿ ಹೋರಾಟ ಮಾಡುತ್ತೇನೆ. ಯಾವುದೇ ಕಾರಣಕ್ಕೂ ಆವೇಶಕ್ಕೆ ಒಳಗಾಗಿ ತಪ್ಪು ನಿರ್ಧಾರ ಕೈಗೊಳ್ಳಬೇಡಿ. ನಮ್ಮ ಕುಟುಂಬದ ಪರವಾಗಿ ನಿಖಿಲ್ ಕುಮಾರಸ್ವಾಮಿ ಅವರನ್ನು ಕಳಿಸುತ್ತಿದ್ದೇನೆ ಎಂದಿದ್ದಾರೆ.

ಚೆಕ್ ಬೌನ್ಸ್ ಪ್ರಕರಣ: 5.75 ಲಕ್ಷ ರೂ. ದಂಡ

ತಿ.ನರಸೀಪುರ, ಅ.20– ನಿಷ್ಕ್ರಿಯಗೊಂಡ ಖಾತೆ ಚೆಕ್ ನೀಡಿ ವಂಚಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗೆ 5.75 ಲಕ್ಷ ರೂ. ದಂಡ ವಿಧಿಸಿ ಪಟ್ಟಣದ ಜೆಎಂಎಫ್‌ಸಿ ನ್ಯಾಯಾಲಯ ತೀರ್ಪು ನೀಡಿದೆ. ಪಟ್ಟಣದ ವಿವೇಕಾನಂದ ನಗರ ಬಡಾವಣೆ ನಿವಾಸಿ ಮಹದೇವ್ ಎಂಬುವರಿಂದ ಮರಿಸ್ವಾಮಯ್ಯ ಎಂಬುವರು 4.50 ಲಕ್ಷ ರೂ. ಕೈ ಸಾಲ ಪಡೆದಿದ್ದರು. ಪಡೆದ ಹಣಕ್ಕೆ ಕಾರ್ಪೊರೇಷನ್ ಬ್ಯಾಂಕ್ ಚೆಕ್ ನೀಡಿದ್ದರು. ಆದರೆ ಚೆಕ್ ಹಾಕಿದ ಸಂದರ್ಭ ಬ್ಯಾಂಕ್‌ನಲ್ಲಿ ಮರಿಸ್ವಾಮಯ್ಯ ಅವರ ಖಾತೆ ನಿಷ್ಕ್ರಿಯಗೊಂಡು ಚೆಕ್‌ಬೌನ್ಸ್ ಆಗಿತ್ತು. ಈ ಹಿನ್ನೆಲೆಯಲ್ಲಿ ಮರಿಸ್ವಾಮಯ್ಯ ವಿರುದ್ಧ ಮಹದೇವ್ ನ್ಯಾಯಾಲಯದ ಮೊರೆ ಹೋಗಿದ್ದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಸಿದ ಅಪರ ಸಿವಿಲ್ ನ್ಯಾಯಾಧೀಶ ಕೆ.ಎನ್.ವೆಂಕಟೇಶ್ ಆರೋಪಿಯ ಮೇಲಿನ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಮರಿಸ್ವಾಮಿಗೆ 5.75 ಲಕ್ಷ ರೂ. ದಂಡ ವಿಧಿಸಿ ತೀರ್ಪು ನೀಡಿದರು. ಆರೋಪಿ ಮರಿಸ್ವಾಮಯ್ಯ ದೂರುದಾರ ಮಹದೇವ್ ಅವರಿಗೆ 5.70 ಲಕ್ಷ ರೂ. ಹಾಗೂ ಸರ್ಕಾರಕ್ಕೆ 5 ಸಾವಿರ ರೂ. ಹಣ ನೀಡುವಂತೆ ತೀರ್ಪಿನಲ್ಲಿ ತಿಳಿಸಲಾಗಿದೆ. ಒಂದು ತಿಂಗಳ ಒಳಗೆ ದಂಡದ ಮೊತ್ತ ಕಟ್ಟಲು ವಿಫಲವಾದಲ್ಲಿ ಒಂದು ವರ್ಷಗಳ ಸಾಧಾರಣ ಜೈಲು ಶಿಕ್ಷೆ ಅನುಭವಿಸುವಂತೆ ನ್ಯಾಯಾಲಯ ತೀರ್ಪಿತ್ತಿದೆ. ಆರೋಪಿ ಪರ ವಕೀಲ ಶಬ್ಬೀರ್ ಅಹಮದ್ ವಾದ ಮಂಡಿಸಿದರೆ, ಫಿರ್ಯಾದುದಾರರ ಪರ ವಕೀಲ ಮೂಗೂರು ಎಂ.ಎಸ್.ರಮೇಶ್ ವಾದ ಮಂಡಿಸಿದ್ದರು.

ರೈತರ ಸಮಸ್ಯೆ ಬಗೆಹರಿಸಲು ಸಂಘಟನೆ ಮುಖ್ಯ



ಮಲ್ಲುಂಡಿ, ಅ.20– ದೇಶಕ್ಕೆ ಅನ್ನ ನೀಡುವ ಅನ್ನದಾತನ ಸಮಸ್ಯೆ ಬಗೆಹರಿಸಲು ಸಂಘಟನೆ ಮುಖ್ಯ ಎಂದು ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾಧ್ಯಕ್ಷ ವಿದ್ಯಾಸಾಗರ್ ತಿಳಿಸಿದರು. ಇಲ್ಲಿಗೆ ಸಮೀಪದ ಹೊಸವೀಡು ಗ್ರಾಮದಲ್ಲಿ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಗ್ರಾಮ ಘಟಕದ ನಾಮಫಲಕ ಅನಾವರಣಗೊಳಿಸಿ ಮಾತನಾಡಿದ ಅವರು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ರೈತರ ಬೆಳೆಗೆ ಸೂಕ್ತ ಬೆಂಬಲ ಬೆಲೆ ನೀಡುತ್ತಿಲ್ಲ. ಇದರಿಂದ ರೈತರು ಆತ್ಮಹತ್ಯೆ ಹಾದಿ ಹಿಡಿದಿದ್ದಾರೆ. ಕಾಡಂಚಿನ ಗ್ರಾಮಗಳಲ್ಲಿ ರೈತರ ಫಸಲನ್ನು ಕಾಡಾನೆಗಳು ನಾಶ ಮಾಡುತ್ತಿವೆ. ಸರ್ಕಾರ ರೈತರಿಗೆ ಸರಿಯಾದ ಪರಿಹಾರ ನೀಡದೆ ರೈತರ ಜೀವದ ಜೊತೆ ಚೆಲ್ಲಾಟವಾಡುತ್ತಿದೆ. ರೈತರು ಯಾವುದೇ ಕಾರಣಕ್ಕೂ ಆತ್ಮಹತ್ಯೆ ದಾರಿ ಹಿಡಿಯಬಾರದು. ದೇಶದಲ್ಲಿ ರೈತರು ಸಂಘಟನೆ ಮೂಲಕ ಸಮಸ್ಯೆ ಬಗೆಹರಿಸಲು ಮುಂದಾಗಬೇಕಿದೆ ಎಂದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಘು, ಮಾಧ್ಯಮ ಕಾರ್ಯದರ್ಶಿ ಮಂಜು ಕಿರಣ್, ಹೋಬಳಿ ಅಧ್ಯಕ್ಷ ಮಹದೇವಸ್ವಾಮಿ, ರೈತ ಮುಖಂಡರಾದ ಮಂಜುನಾಥ್, ಕೆಂಪಣ್ಣ ತಾಲೂಕು ಅಧ್ಯಕ್ಷ ಸತೀಶ್‌ರಾವ್, ಬಸವರಾಜ್, ಗ್ರಾಪಂ ಸದಸ್ಯ ಜವರೇಗೌಡ, ಜಯನಾಯ್ಕ ಗ್ರಾಮ ಘಟಕದ ಮುಖಂಡರಾದ ಸುರೇಂದ್ರ ಕೆಂಪಣ್ಣ ನಾಗೇಂದ್ರ ಮಣಿಕಂಠ ಸೇರಿದಂತೆ ಇತರರಿದ್ದರು.



ನೇಪಾಳದ ಕಠ್ಮಂಡುವಿನಲ್ಲಿ ನಡೆಯುವ ಅಂತರರಾಷ್ಟ್ರೀಯ ಮ್ಯಾರಥಾನ್‌ಗೆ ತೆರಳುತ್ತಿರುವ ಹುಣಸೂರು ತಾಲೂಕಿನ ಮದ್ದೂರು ಗ್ರಾಮದ ಅರುಣ್ ಅವರನ್ನು ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ಸನ್ಮಾನಿಸಿದರು. ಈ ವೇಳೆ ಮೈಮುಲ್ ಅಧ್ಯಕ್ಷ ಪ್ರಸನ್ನ, ಕೆಎಂಎಫ್ ನಿರ್ದೇಶಕ ಕೆ.ಎಸ್. ಕುಮಾರ್, ಅರುಣ್‌ಗೌಡ, ಗೋಪಿಗೌಡ, ದಿಲೀಪ್, ವಿನೋದ್ ಮತ್ತಿತರರಿದ್ದರು.

ಕೆಂಪೇಗೌಡರ ರಥಯಾತ್ರೆಯನ್ನು ಅದ್ಧೂರಿಯಾಗಿ ಸ್ವಾಗತಿಸಿ

ಕಾರ್ಯಕರ್ತರ ಸಭೆಯಲ್ಲಿ ಶಾಸಕ ರಾಮದಾಸ್



ತಿ.ನರಸೀಪುರ, ಅ.20– ಪ್ರಧಾನಿ ಮೋದಿ ಬೆಂಗಳೂರಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಆವರಣದಲ್ಲಿ ನ11ರಂದು ನಾಡಪ್ರಭು ಕೆಂಪೇಗೌಡರ 108 ಅಡಿ ಎತ್ತರದ ಕಂಚಿನ ಪ್ರತಿಮೆ ಉದ್ಘಾಟಿಸಲಿದ್ದಾರೆ. ಈ ಕಾರ್ಯಕ್ರಮದ ರೂಪುರೇಷೆ ಕುರಿತ ಕೆಂಪೇಗೌಡರ ರಥಯಾತ್ರೆ ರಾಜ್ಯಾದ್ಯಂತ ಸಂಚರಿಸಲಿದ್ದು, ತಾಲೂಕಿನ ಬಿಜೆಪಿ ಕಾರ್ಯಕರ್ತರು ರಥವನ್ನು ಅದ್ಧೂರಿಯಾಗಿ ಸ್ವಾಗತಿಸಿ, ಬೀಳ್ಕೊಡಬೇಕು ಎಂದು ಶಾಸಕ ರಾಮದಾಸ್ ತಿಳಿಸಿದರು.

ಪಟ್ಟಣದ ಶ್ರೀನಿವಾಸ ರೆಫ್ರೆಶ್‌ಮೆಂಟ್ ಹೋಟೆಲ್ ಹಾಲಿನಲ್ಲಿ ನಡೆದ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಕೆಂಪೇಗೌಡರ ರಥಯಾತ್ರೆ ಪಟ್ಟಣಕ್ಕೆ ಆಗಮಿಸಿದ ವೇಳೆ ರಥವನ್ನು ಅದ್ಧೂರಿಯಾಗಿ ಸ್ವಾಗತಿಸಿ, ಬೀಳ್ಕೊಡುವ ಮೂಲಕ ಕಾರ್ಯಕ್ರಮದ ಯಶಸ್ವಿಗೆ ಸಹಕರಿಸಬೇಕು ಎಂದರು.

ತಿ.ನರಸೀಪುರ ಕ್ಷೇತ್ರದಲ್ಲಿ ಪಕ್ಷದ ಶಾಸಕರಿಲ್ಲದೆ ಪ್ರಧಾನಿ ಮೋದಿ ಅವರ 203 ಯೋಜನೆಗಳು ಅನುಷ್ಠಾನ ಆಗುತ್ತಿಲ್ಲ. ತಿ.ನರಸೀಪುರವನ್ನು ಪ್ರವಾಸಿ ಕೇಂದ್ರವಾಗಿ ಘೋಷಿಸಲು ನಾವೆಲ್ಲ ಒಗ್ಗಟ್ಟಾಗಿ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕ್ಷೇತ್ರದಲ್ಲಿ ಬಿಜೆಪಿ ಶಾಸಕರನ್ನು ಆಯ್ಕೆ ಮಾಡಲು ಪಣ ತೊಡಬೇಕು. ಕೇಂದ್ರ ಹಾಗೂ ರಾಜ್ಯದ ಯೋಜನೆಗಳನ್ನು ಕ್ಷೇತ್ರದ ಜನತೆಗೆ ದೊರಕಿಸಿಕೊಡಲು ಈ ಕ್ಷೇತ್ರದಲ್ಲಿ ಬಿಜೆಪಿ ಶಾಸಕರನ್ನು ಗೆಲ್ಲಿಸಲು ಎಲ್ಲರೂ ಒಗ್ಗಟ್ಟಾಗಿ ಕಾರ್ಯ ನಿರ್ವಹಿಸುವಂತೆ ಸಲಹೆ ನೀಡಿದರು.

ಇದೇ ವೇಳೆ ಮೈಸೂರಿನಲ್ಲಿ ನಡೆಯುವ ಪರಿಶಿಷ್ಟ ಜನಾಂಗದ ಸಮಾವೇಶ, ಮಹಿಳಾ ಮೋರ್ಚಾ, ಯುವ ಮೋರ್ಚಾ ಮತ್ತು ಓಬಿಸಿ ಮೋರ್ಚಾ ರಾಜ್ಯ ಮಟ್ಟದ ಸಮ್ಮೇಳನದಲ್ಲಿ ತಾಲೂಕಿನಿಂದ ಹೆಚ್ಚಿನ ಜನರು ಭಾಗವಹಿಸಿ ಯಶಸ್ವಿಗೊಳಿಸಲು ಸಭೆಯಲ್ಲಿ ನಿರ್ಧರಿಸಲಾಯಿತು.

ಪಕ್ಷದ ಜಿಲ್ಲಾಧ್ಯಕ್ಷ ಮಂಗಳಾ ಸೋಮಶೇಖರ್, ಮಾಜಿ ಶಾಸಕ ಡಾ.ಎನ್ಎಲ್.ಭಾರತೀ ಶಂಕರ್, ಕ್ಷೇತ್ರಾಧ್ಯಕ್ಷ ಲೋಕೇಶ್ ನಾಯಕ್, ಕರುಹಟ್ಟಿ ಮಹದೇವಯ್ಯ, ಎಂ.ದಾಸಯ್ಯ, ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ಸಂಜಯ್ ಶರ್ಮಾ, ಬೆನಕನಹಳ್ಳಿ ವಿಜಯಕುಮಾರ್, ಕರುವಟ್ಟಿ ಬಸವರಾಜು, ಪುರಸಭಾಸದಸ್ಯ ಎಸ್.ಕೆ.ಕಿರಣ್ ಹಿಂದುಳಿದ ವರ್ಗಗಳ ಅಧ್ಯಕ್ಷ ಕಾವೇರಿಪುರ ಮಹೇಶ್(ಗೂಳಿ), ಕೆಬ್ಬೆಹುಂಡಿ ಶಿವಕುಮಾರ್, ಶಿವು, ಶಿವಪ್ರಸಾದ್, ನಂದನ್, ಕೊತ್ತೇಗಾಲ ಕಿಟ್ಟಿ ಭಾಗ್ಯಮ್ಮ, ಮಮತಾ, ಸುಜಾತ, ವಾಟಾಳ್‌ಪುರ ಸುರೇಶ್, ಮೂಗೂರು ಅರವಿಂದ್, ನರಗ್ಯಾತನಹಳ್ಳಿ ಪುಟ್ಟಸ್ವಾಮಿ, ಚೌಹಳ್ಳಿ ಸಿದ್ದರಾಜು, ಕುರುಬೂರು ಮಂಜುನಾಥ್ ಮತ್ತಿತರರಿದ್ದರು.

> **ಹಿರಿಯರಿಗೆ ಜವಾಬ್ದಾರಿ ನೀಡಿ**
>
> ಪಕ್ಷ ಸಂಘಟನೆಗೆ ಜಿಲ್ಲಾ ಹಾಗೂ ರಾಜ್ಯ ಸಮಿತಿ ಒತ್ತು ನೀಡುತ್ತಿಲ್ಲ. ಅರ್ಹರಿಗೆ ಜವಾಬ್ದಾರಿ ನೀಡುತ್ತಿಲ್ಲ. ಪಕ್ಷದ ಕಾರ್ಯಕರ್ತರು ಸಾಕಷ್ಟಿದ್ದಾರೆ. ಜವಾಬ್ದಾರಿ ನೀಡಿದ್ದರೆ ವಿಧಾನ ಪರಿಷತ್ತಿನಲ್ಲಿ ನಮ್ಮ ಅಭ್ಯರ್ಥಿ ಗೆಲ್ಲಬಹುದಿತ್ತು. ಆದರೆ ಮುಂದಿನ ಸಾರ್ವತ್ರಿಕ ಚುನಾವಣೆಗೆ ಹಿರಿಯರಿಗೆ ಜವಾಬ್ದಾರಿ ನೀಡಿದರೆ ನಮ್ಮ ಅಭ್ಯರ್ಥಿ ಗೆಲುವಿಗೆ ಅನುಕೂಲವಾಗುತ್ತದೆ. ಕಳೆದ ಎರಡು ಚುನಾವಣೆಯಲ್ಲಿ ಅನುಭವವಿಲ್ಲದವರಿಗೆ ಜವಾಬ್ದಾರಿ ನೀಡಿದ ಪ್ರತಿಫಲ ನಮ್ಮ ಪಕ್ಷಕ್ಕೆ ಹಿನ್ನಡೆಯಾಗಿದೆ.
>
> -ಸಿ.ರಮೇಶ್, ವಿಧಾನ ಪರಿಷತ್ ಮಾಜಿ ಸದಸ್ಯ.

ಪದವೀಧರರು, ಕಾರ್ಯಕರ್ತರ ಸಮಸ್ಯೆಗಳಿಗೆ ಸ್ಪಂದಿಸುವೆ

ವಿಧಾನ ಪರಿಷತ್ ಸದಸ್ಯ ಮಧು.ಜಿ.ಮಾದೇಗೌಡ ಭರವಸೆ



ನಂಜನಗೂಡು, ಅ.20– ನನ್ನ ಮೇಲೆ ನಂಬಿಕೆ ಇಟ್ಟು ಮತ ನೀಡಿ ಗೆಲುವಿಗೆ ಕಾರಣರಾದ ಎಲ್ಲರಿಗೂ ಕೃತಜ್ಞತೆ ಸಲ್ಲಿಸುತ್ತೇನೆ. ಜೊತೆಗೆ ಸಿಕ್ಕಿರುವ ಅವಕಾಶ ಸದುಪಯೋಗಪಡಿಸಿಕೊಂಡು ಪದವೀಧರರ, ಕಾರ್ಯಕರ್ತರ ಸಮಸ್ಯೆಗಳಿಗೆ ಸ್ಪಂದಿಸುತ್ತೇನೆ ಎಂದು ವಿಧಾನ ಪರಿಷತ್ ಸದಸ್ಯ ಮಧು.ಜಿ.ಮಾದೇಗೌಡ ಭರವಸೆ ನೀಡಿದರು.

ನಗರದ ಕಾಂಗ್ರೆಸ್ ಕಚೇರಿಗೆ ಭೇಟಿ ನೀಡಿ ಕಾರ್ಯಕರ್ತರಿಗೆ ಕೃತಜ್ಞತೆ ಸಲ್ಲಿಸಿ ಮಾತನಾಡಿದ ಅವರು, ದಕ್ಷಿಣ ಪದವೀಧರರ ಕ್ಷೇತ್ರದ ಚುನಾವಣೆಯಲ್ಲಿ ಹಲವು ವರ್ಷಗಳಿಂದ ಕಾಂಗ್ರೆಸ್‌ಗೆ ಗೆಲುವು ಸಿಕ್ಕಿರಲಿಲ್ಲ. ನನ್ನ ಮೇಲೆ ವಿಶ್ವಾಸವಿಟ್ಟು ವಿಪಕ್ಷ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ್ ಟಿಕೆಟ್ ನೀಡಿ ನನ್ನ ಗೆಲುವಿಗೆ ಸಹಕರಿಸಿದ್ದಾರೆ. ಅಲ್ಲದೆ ಕಾರ್ಯಕರ್ತರು ಹಗಲಿರುಳು ಶ್ರಮಿಸಿ ಅಭೂತ ಪೂರ್ವ ಗೆಲುವು ತಂದುಕೊಟ್ಟಿದ್ದಾರೆ. ಇದು ನನ್ನ ಗೆಲುವಲ್ಲ ಕಾಂಗ್ರೆಸ್ ಪಕ್ಷಕ್ಕೆ ಸಂದ ದೊಡ್ಡ ಗೆಲುವು. ಮತದಾರರ ಸಮಸ್ಯೆಗಳಿಗೆ ಸ್ಪಂದಿಸುವ ನಿಟ್ಟಿನಲ್ಲಿ ಪ್ರತಿ ಶುಕ್ರವಾರ ಮೈಸೂರಿನ ಚಾಮುಂಡಿ ಅತಿಥಿ ಗೃಹದ ನನ್ನ ಕಚೇರಿಯಲ್ಲಿ ಲಭ್ಯವಿರುತ್ತೇನೆ. ಜೊತೆಗೆ ಕಚೇರಿಗೆ ಬರುವುದಕ್ಕೆ ತೊಂದರೆಯಾದವರು ದೂರವಾಣಿ ಮೂಲಕವೂ ನನ್ನನ್ನು ಸಂಪರ್ಕಿಸಬಹುದು ಎಂದರು.

ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ನಿಶ್ಚಿತ: ಮುಂಬರುವ ದಿನಗಳಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ನಿಶ್ಚಿತ. ಪಕ್ಷವನ್ನು ಅಧಿಕಾರಕ್ಕೆ ತರಲು ತಳಮಟ್ಟದಿಂದ ಪಕ್ಷ ಸಂಘಟಿಸಬೇಕಿದೆ. ಕಾರ್ಯಕರ್ತರು ಯಾವುದೇ ಭಿನ್ನಾಭಿಪ್ರಾಯವಿದ್ದರೂ ಸಹ ಬದಿಗೊತ್ತಿ ಈಗಿನಿಂದಲೇ ಪಕ್ಷ ಸಂಘಟಿಸುವ ಮೂಲಕ ಅಭ್ಯರ್ಥಿ ಗೆಲುವಿಗೆ ಶ್ರಮಿಸಬೇಕು. ನಾನು ಸಹ ಪಕ್ಷ ಸಂಘಟನೆಯಲ್ಲಿ ಮುಂದಿರುತ್ತೇನೆ ಎಂದರು.

ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಮಾತನಾಡಿದರು. ಈ ವೇಳೆ ಕಾಂಗ್ರೆಸ್ ಹಿಂದುಳಿದ ವರ್ಗಗಳ ಜಿಲ್ಲಾಧ್ಯಕ್ಷ ಕೆ.ಮಾರುತಿ, ತಾಪಂ ಮಾಜಿ ಅಧ್ಯಕ್ಷ ನಾಗೇಶ್‌ರಾಜ್, ಮಾಜಿ ಪುರಸಭಾಧ್ಯಕ್ಷ ಶ್ರೀಧರ್, ಶ್ರೀನಿವಾಸ್, ಮುಖಂಡರಾದ ನಾಗರಾಜಯ್ಯ, ಗೋವಿಂದರಾಜು, ನಾಗರಾಜು, ರಾಜೇಶ್, ಸೋಮು, ಮಹದೇವು, ಮಂಜುನಾಥ್, ನಗರಸಭಾ ಸದಸ್ಯರಾದ ಗಂಗಾಧರ್, ಶ್ರೀಕಂಠಸ್ವಾಮಿ, ಪ್ರದೀಪ್, ಗಾಯತ್ರಿ, ಸೇರಿದಂತೆ ಕಾರ್ಯಕರ್ತರಿದ್ದರು.

ತಂಬಾಕು ಬೆಲೆ ದಿಢೀರ್ ಕುಸಿತ ಹಿನ್ನೆಲೆ

ಅಧಿಕಾರಿಗಳು, ರೈತರೊಂದಿಗೆ ಶಾಸಕ ಹೆಚ್‌ಪಿಎಂ ತುರ್ತು ಸಭೆ



ಹುಣಸೂರು, ಅ.20– ತಂಬಾಕು ಬೆಲೆ ದಿಢೀರ್ ಕುಸಿತಗೊಂಡ ಹಿನ್ನೆಲೆಯಲ್ಲಿ ಶಾಸಕ ಹೆಚ್.ಪಿ. ಮಂಜುನಾಥ್ ಕಟ್ಟೆಮಳಲವಾಡಿ ಹರಾಜು ಮಾರುಕಟ್ಟೆಯಲ್ಲಿ ತಂಬಾಕು ಮಂಡಳಿ ಅಧಿಕಾರಿಗಳು ಹಾಗೂ ರೈತರೊಂದಿಗೆ ತುರ್ತು ಸಭೆ ನಡೆಸಿದರು.

ಈ ವೇಳೆ ಮಾತನಾಡಿದ ಅವರು, ಏಕಾಏಕಿ ಬೆಲೆ ಕುಸಿತವಾಗಿರುವುದು ಮಾರುಕಟ್ಟೆ ಅಚಲವಾಗಿಲ್ಲ ಎಂದು ತೋರಿಸುತ್ತದೆ. ರೈತರು ನೆನ್ನೆ ಘಟನೆಯಿಂದ ಕಂಗಾಲಾಗಿದ್ದಾರೆ. ಆರಂಭದಲ್ಲಿ ನಾನು ವ್ಯಾಪಾರಿಗಳು ಮತ್ತು ತಂಬಾಕು ಅಧಿಕಾರಿಗಳಿಗೆ ಉತ್ತಮ ಬೆಲೆ ನೀಡುವಂತೆ ಕೈ ಮುಗಿದು ವಿನಂತಿಸಿಕೊಂಡಿದ್ದೆ. ಆರಂಭದಲ್ಲಿ 201 ರೂ. ಗಳಿಗೆ ಹರಾಜು ಆಗುವ ಮೂಲಕ ರೈತರಿಗೆ ಶುಭ ಸೂಚನೆ ಸಿಕ್ಕಿತ್ತು. ಆದರೆ ನೆನ್ನೆ ಹರಾಜು ರೈತರಲ್ಲಿ ಆತಂಕ ಮೂಡಿಸಿದೆ ಎಂದರು.

ತಂಬಾಕು ಹರಾಜು ಮಾರುಕಟ್ಟೆ ಪ್ರಾರಂಭವಾಗುವ ಮೊದಲು ತಂಬಾಕು ಅಧಿಕಾರಿಗಳು, ರೈತರು, ಟ್ರೇಡರ್ಸ್‌ಗಳು ಮತ್ತು ಸ್ಥಳೀಯ ಚುನಾಯಿತ ಜನಪ್ರತಿನಿಧಿಗಳ ಸಭೆ ಮಾಡುವಂತೆ ಹಲವು ಬಾರಿ ತಿಳಿಸಿದರೂ, ನೀವು ನಮ್ಮ ಮಾತನ್ನು ಕೇಳಲ್ಲ. ನನಗೆ ಅಪಮಾನವಾದರೂ ರೈತರಿಗೋಸ್ಕರ ಸಹಿಸಿಕೊಂಡೆ. ತಂಬಾಕಿಗೆ ಬೇಡಿಕೆಯಿಲ್ಲದೆ 28 ಕಂಪನಿಗಳು ಹರಾಜಿಗೆ ಬಂದಿವೆಯಾ. ಮೊನ್ನೆ ನಿಂತ 266 ರೂ.ಗಳಿಂದಲೇ ಮುಂದೆ ಹರಾಜನ್ನು ಪ್ರಾರಂಭಿಸಬೇಕು. ಈ ವಿಚಾರವಾಗಿ ನೆನ್ನೆ ಆಕ್ಷನ್ ಸೂಪರಿಂಟೆಂಡೆಂಟ್ ವಹಿವಾಟು ಅಧೀಕ್ಷಕ ವೇಣುಗೋಪಾಲ್ ಹಾಗೂ ತಂಬಾಕು ಮಂಡಳಿ ಆರ್‌ಎಂಒ ಲಕ್ಷ್ಮಣ್ ರಾವ್ ಜೊತೆ ಮಾತನಾಡಿದ್ದೇನೆ ಎಂದರು.

ಅಧಿಕಾರಿಗಳ ಮೇಲೆ ದೊಡ್ಡ ಜವಾಬ್ದಾರಿ ಇದೆ. ರೈತರ ಜೀವದ ಜೊತೆ ಟ್ರೇಡರ್ಸ್‌ಗಳು ಚೆಲ್ಲಾಟವಾಡಬೇಡಿ. ನಾನು ನಿಮಗೆ ಮೊದಲು ಕೈ ಮುಗಿದು ಕೇಳಿಕೊಂಡಿದ್ದೇನೆ. ನೀವು ತಿದ್ದಿಕೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ತಕ್ಕಪಾಠ ಕಲಿಸಬೇಕಾಗುತ್ತದೆ ಎಂದರು.

ರೈತ ಕಷ್ಟದಲ್ಲಿದ್ದಾನೆ. ನೀವುಗಳು ಅವರಿಗೆ ಲಾಭ ಕೊಡಬೇಡಿ. ಅವನ ಒಂದು ವರ್ಷದ ಶ್ರಮ ಮತ್ತು ಮುಂದಿನ ಭವಿಷ್ಯ ಗಮನದಲ್ಲಿಟ್ಟುಕೊಂಡು ಉತ್ತಮ ಬೆಲೆ ನೀಡಿ. ರೈತ ಉಳಿದರೆ ಮಾತ್ರ ನಾವೆಲ್ಲರೂ ಉಳಿಯಲು ಸಾಧ್ಯ. ಈ ವರ್ಷ ಮಳೆಯಿಂದ ಅರ್ಧದಷ್ಟು ತಂಬಾಕು ನಷ್ಟವಾಗಿದೆ. ಆದರೆ ರೈತನ ಶ್ರಮ ಅವನು ಹಾಕಿರುವ ಬಂಡವಾಳ ಜಾಸ್ತಿಯಾಗಿದೆ. ಮುಂದೆ ರೈತ ತಂಬಾಕು ಬೆಳೆಯಲು ಅನುಕೂಲವಾಗುವ ರೀತಿಯಲ್ಲಿ ನೀವು ಬೆಲೆ ನೀಡಬೇಕು ಎಂದರು.

ತಂಬಾಕು ಹರಾಜು ಅಧೀಕ್ಷಕ ಧನರಾಜ್ ಮಾತನಾಡಿ, ಈ ಬಾರಿ ಮಳೆಯಿಂದ ರೈತರು ಭಾರೀ ನಷ್ಟಕ್ಕೆ ಒಳಗಾಗಿದ್ದಾರೆ. ಆದ್ದರಿಂದ ತಂಬಾಕು ಮಂಡಳಿ ಮತ್ತು ಬೈಯರ್ಸ್‌ಗಳು ಅವರ ಸಹಾಯಕ್ಕೆ ಬರಬೇಕು. ಹರಾಜು ಈ ಬಾರಿ ಪಾರದರ್ಶಕವಾಗಿ ನಡೆಯುತ್ತದೆ.

ನಾವು ರೈತರ ಪರವಿದ್ದೇವೆ. ರೈತರಿಗೆ ಅನ್ಯಾಯವಾಗಲು ಬಿಡುವುದಿಲ್ಲ. ಬೆಲೆ ಕುಸಿತದ ಬಗ್ಗೆ ಈಗಾಗಲೇ ಉನ್ನತ ಅಧಿಕಾರಿಗಳೊಂದಿಗೆ ಮಾತನಾಡಿದ್ದೇವೆ. ಅವರು ಸಹ ಉತ್ತಮ ಬೆಲೆ ಸಿಗುವವರೆಗೆ ಮಾರುಕಟ್ಟೆ ಪ್ರಾರಂಭಿಸಬೇಡಿ ಎಂದಿದ್ದಾರೆ. ತಂಬಾಕು ಮಂಡಳಿ ರೈತರ ಜೊತೆಗಿದೆ ಎಂದರು.

ರೈತರು ಮಾತನಾಡಿ, ಒಂದು ಸಿಂಗಲ್ ಬ್ಯಾರನ್ ಹೊಗೆಸೊಪ್ಪು ಬೆಳೆಯಲು 2 ಲಕ್ಷ ರೂ. ಖರ್ಚಾಗಿದೆ. ಎಸ್‌ಓಪಿ ಗೊಬ್ಬರ 6 ಸಾವಿರ ರೂ. ಆಗಿದೆ. ಈ ಭಾಗದ ಶಾಸಕರು ಮತ್ತು ಸಂಸದರು ಈ ಬಗ್ಗೆ ವಿಧಾನಸಭೆ ಮತ್ತು ಲೋಕಸಭೆಯಲ್ಲಿ ಚರ್ಚಿಸಬೇಕು. ದಯವಿಟ್ಟು ಉತ್ತಮ ಬೆಲೆ ನೀಡಿ ಅಲ್ಲಿವರೆಗೂ ತಂಬಾಕನ್ನು ಮಾರಾಟ ಮಾಡುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಭೆಯಲ್ಲಿ ಹರಾಜು ಅಧೀಕ್ಷಕ ಸಿದ್ಧರಾಮ, ಚಂದ್ರಶೇಖರ್, ಹಲವು ರೈತ ಮುಖಂಡರು ಹಾಗೂ ನೂರಾರು ತಂಬಾಕು ಬೆಳೆಗಾರರು ಹಾಜರಿದ್ದರು.

> ತಂಬಾಕು ಹರಾಜು ಮಾರುಕಟ್ಟೆ ಪ್ರಾರಂಭವಾಗುವ ಮುನ್ನ ತಂಬಾಕು ಹರಾಜಿನಲ್ಲಿ ಭಾಗವಹಿಸುವ ಕಂಪನಿ ಮಾಲೀಕರ, ಖರೀದಿದಾರರ, ಸಂಸದರ, ಶಾಸಕರ, ರೈತರ ಸಭೆ ಕರೆದಿದ್ದರೆ ಈ ರೀತಿ ಪ್ರತಿಭಟನೆ ನಡೆಯುತ್ತಿರಲಿಲ್ಲ. ಜೊತೆಗೆ ರೈತರ ಕಷ್ಟಗಳನ್ನು ಇವರ ಮುಂದೆ ಮಂಡಿಸಬಹುದಾಗಿತ್ತು.
>
> -ಕೃಷ್ಣನಾಯಕ, ತಂಬಾಕು ಬೆಳೆಗಾರರು, ಗಾವಡಗೆರೆ ಗ್ರಾಮ.

ಮೈಸೂರು ರೇಸುಗಳು–2022



16ನೇ ದಿನ, ಶುಕ್ರವಾರ 21–10–2022

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 1.30 ಗಂಟೆಗೆ)

I. ಸೀಮಿಸ್ಟ್ ಪ್ಲೇಟ್ ಡಿ2–1200 ಮೀ. ರೇಟೆಡ್ 00 ರಿಂದ 25. ಮ.1.30ಕ್ಕೆ
1. ರೀಗಲ್ ಫೋರ್ಸ್ 2. ಆಕ್ಟಿವೇಟೆಡ್ 3. ಮ್ಯಾಕ್ಸ್‌ಮ್ಯೂಲರ್

II. ಅಲೆಕೋನಾ ಟ್ರೋಫಿ ಡಿ2–1400 ಮೀ. ರೇಟೆಡ್ 20 ರಿಂದ 45. ಮ.2.00ಕ್ಕೆ
1. ಬ್ರೇಕ್ ಅವೇ 2. ವ್ಯೈವಿಷನ್ 3. ಸದರನ್ ಫೋರ್ಸ್

III. ಸೀಮಿಸ್ಟ್ ಪ್ಲೇಟ್ ಡಿ1–1200 ಮೀ. ರೇಟೆಡ್ 00 ರಿಂದ 25. ಮ.2.30ಕ್ಕೆ
1 ರೈಟ್‌ಲಿ ನೋಬಲ್ 2 ಡೊಮಿಷಿಯಾ 3 ವಾರ್ ಟ್ರೈಲ್

IV. ಅಲೆಕೋನಾ ಟ್ರೋಫಿ ಡಿ1–1400 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1. ಅಲ್‌ಟೈರ್ 2. ಯೂನಿಕ್ ಸ್ಟೈಲ್ 3. ಕ್ಯಾಟಲಿಯಾನ್

V. ಮೇಯರ್ಸ್ ಟ್ರೋಫಿ ಡಿ1– ರೇಟೆಡ್ 40 ರಿಂದ 65–1200 ಮೀ.(ಮೈಸೂರ್ ಬೇಸ್ಡ್ ಹಾರ್ಸ್). ಸಂ.3.30ಕ್ಕೆ
1. ಇಂಡಿಯನ್ ಪೇಟ್ರಿಯಟ್ 2. ಸರ್ ಕಾಲ್‌ಕ್ಯೂಲಸ್

VI. ಗಾಯತ್ರಿದೇವಿ ಮೆಮೋರಿಯಲ್ ಟ್ರೋಫಿ–1400 ಮೀ. ರೇಟೆಡ್ 80 ಮತ್ತು ಮೇಲ್ವರ್ಗ. ಸಂ.4.00ಕ್ಕೆ
1. ಸ್ಯೆಗಿ ಪೆರಿಲೋಸ್ 2. ಪಿಂಯೋ 3. ಹಿಸ್ ಎಮಿನೆನ್ಸ್

VII. ಶ್ರೀರಂಗಪಟ್ಟಣ ಪ್ಲೇಟ್–1200 ಮೀ. ರೇಟೆಡ್ 60 ಮತ್ತು 85. ಸಂ.4.30ಕ್ಕೆ
1. ಓ ಆ್ಯನ್‌ಸಿನಿ 2. ಡಿವಿಲರ್ಸ್ 3. ಥೌಸಂಡ್ಸ್ ವರ್ಡ್ಸ್

VIII. ಮೇಯರ್ಸ್ ಟ್ರೋಫಿ ಡಿ2– ರೇಟೆಡ್ 40 ರಿಂದ 65–1200 ಮೀ.(ಮೈಸೂರ್ ಬೇಸ್ಡ್ ಹಾರ್ಸ್) ಸಂ. 5.00ಕ್ಕೆ
1 ಪರ್ಫೆಕ್ಟ್ ಜಸ್ಟಿಸ್ 2 ಸ್ಮಾರ್ಟ್ ಕ್ಯಾಡಿಲಾಕ್ 3. ಡಿ ಜಾನಿ

ದಿನದ ಅತ್ಯುತ್ತಮ............	: ಇಂಡಿಯನ್ ಪೇಟ್ರಿಯಟ್
ಡಬ್ಬಲ್............	: ರಿಗಲ್ ಫೋರ್ಸ್, ಪರ್ಫೆಕ್ಟ್ ಜಸ್ಟಿಸ್
ಜಾಕ್‌ಪಾಟ್............	: 4, 5, 6, 7 ಮತ್ತು 8
I ಟ್ರಿಬಲ್............	: 1, 2 ಮತ್ತು 3
II ಟ್ರಿಬಲ್............	: 3, 4 ಮತ್ತು 5
III ಟ್ರಿಬಲ್............	: 6, 7 ಮತ್ತು 8
ಎಕ್ಸ್‌ಆಕ್ಟ್............	: 7 ಮತ್ತು 8

ಟಿಪ್‌ಸ್ಟರ್ ಪಿಜಿಸಿ

ಮೈಸೂರು ಮಿತ್ರ 43

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು



